ಬೀದರ * ಕಲಬುರಗಿ * ಯಾದಗಿರಿ * ರಾಯಚೂರು * ಕೊಪ್ಪಳ * ಬಳ್ಳಾರಿ * ಬಾಗಲಕೋಟೆ * ವಿಜಯಪೂರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Registration No. BDR/054/2026-2027 EMAIL ID:mallammanudi@gmail.com E- Paper WWW.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

Mallammanudi Regional NewsPaper ಸಂಪಾದಕರು: ರಮೇಶರೆಡ್ಡಿ ಪ್ರಾದೇಶಿಕ ಕನ್ನಡ ದಿನಪತ್ರಿಕೆ ಮೊ.9448604450

| VOLUME-ಸಂಪುಟ:12 | ISSUE- ಸಂಚಿಕೆ: 343 | PAGE- ಪುಟ 8 | ಮಂಗಳವಾರ 14.01.2025 ಬೀದರ | RNI NO:KARKAN/2011/48371 | RS.ಬೆಲೆ 2/- |
|---|---|---|---|---|---|

## ಅಲ್ಪಸಂಖ್ಯಾತ ಮಕ್ಕಳ ಡ್ರಾಪ್ ಔಟ್ ತಪ್ಪಿಸಲು ಮುತುವರ್ಜಿ ವಹಿಸಿ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.13:ಅಲ್ಪಸಂಖ್ಯಾತ ಸಮುದಾಯದಲ್ಲಿ ಅರಿವಿನ ಕೊರತೆಯಿಂದ ಅನಕ್ಷರತೆ ಹೆಚ್ಚಿದೆ. 2011ರ ಜನಗಣತಿ ಪ್ರಕಾರ ಶೇ.43.72 ಜನ ಅನಕ್ಷರತೆ ಹೊಂದಿದ್ದಾರೆ. ಅಲ್ಪಸಂಖ್ಯಾತ ಮಕ್ಕಳ ಶಾಲಾ ಡ್ರಾಪ್ ಔಟ್ ತಪ್ಪಿಸಿ ಅವರಿಗೆ ಪ್ರೌಢ ಶಿಕ್ಷಣ ಪೂರ್ಣವಾಗುವವರೆಗೆ ಹೆಚ್ಚು ಮುತುವರ್ಜಿ ವಹಿಸಬೇಕು ಎಂದು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ ಅಹ್ಮದ್ ಹೇಳಿದರು.



ಸೋಮವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪ್ರಧಾನಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮ ಕುರಿತು ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನೆ ನಡೆಸಿದ ಅವರು, ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಯಲ್ಲಿ 1 ರಿಂದ 7ನೇ ತರಗತಿ ವರೆಗೆ ಪ್ರವೇಶಾತಿಯಲ್ಲಿ ಸ್ಥಿರವಿಲ್ಲ. ಮಕ್ಕಳಿಗೆ ಶಾಲಾ ಕರೆತರುವ ಕೆಲಸ ಶಿಕ್ಷಕರು ಮಾಡಬೇಕೆಂದರು.

ಇನ್ನು ಅಂಗನವಾಡಿ ಕೇಂದ್ರಗಳಿಗೆ ಬರುವ ಮಕ್ಕಳಿಗೆ ಮಾತೃ ಭಾಷೆಯಲ್ಲಿಯೆ ಶಿಕ್ಷಣ ನೀಡಬೇಕು. ಮುಸ್ಲಿಂ ಜನ ಸಮುದಾಯ ಹೆಚ್ಚಿರುವ ಪ್ರದೇಶದಲ್ಲಿ ಅವಶ್ಯಕತೆ ಇದ್ದಲ್ಲಿ ಅಂಗನವಾಡಿ ಕೇಂದ್ರ ತೆರೆಯಲು ವಕ್ಫ್ ಆಸ್ತಿಯನ್ನು ಲೀಸ್ ಅಥವಾ ಬಾಡಿಗೆ ರೂಪದಲ್ಲಿ ಪಡೆಯಬಹುದಾಗಿದೆ ಎಂದು ಯು.ನಿಸಾರ ಅಹ್ಮದ್ ತಿಳಿಸಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಮುಸ್ಲಿಂ, ಕ್ರೈಸ್ತ, ಬೌದ್ಧ, ಸಿಖ್, ಜೈನ್ ಧರ್ಮದವರು ತುಂಬಾ ಕಡು ಬಡತನ ಹೊಂದಿದ್ದಾರೆ. ಇವರ ಜೀವನಮಟ್ಟ ಸುಧಾರಣೆಗೆ ಪ್ರಯತ್ನಿಸಬೇಕು, ವಿಶೇಷವಾಗಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿ ಜನಪರ ಯೋಜನೆಗಳು ಜಾರಿಗೊಳಿಸಬೇಕು ಎಂದರು.

ಇನ್ನು ಬ್ಯಾಂಕುಗಳಲ್ಲಿ ಭದ್ರತೆ ಅವಶ್ಯಕತೆ ಇಲ್ಲದ ಪ್ರಕರಣಗಳಲ್ಲಿಯೂ ಸಾಲ

(2ನೇ ಪುಟ ನೋಡಿ)



ಬಾಗಲಕೋಟೆ: ಜಿಲ್ಲೆಯ ಸುಪ್ರಸಿದ್ಧ ಬನಶಂಕರಿದೇವಿ ರಥೋತ್ಸವ ಸೋಮವಾರ ಅಪಾರ ಸಂಖ್ಯೆಯ ಭಕ್ತ ಸಮೂಹದ ಹರ್ಷೋದ್ಗಾರದೊಂದಿಗೆ ವೈಭವದಿಂದ ಜರುಗಿತು.

## ನಾಲ್ಕು ಮಕ್ಕಳ ಜಲ ಸಮಾಧಿ

ವಿಜಯಪುರ:ಜ.13:ನಾಲ್ಕು ಮಕ್ಕಳನ್ನು ಕಾಲುವೆಗೆ ಎಸೆದು ತಾನೂ ಕಾಲುವೆಗೆ ಹಾರಿ ತಾಯಿಯೊಬ್ಬಳು ಆತ್ಮಹತ್ಯೆಗೆ ಯತ್ನಿಸಿದ್ದು, ನಾಲ್ಕು ಮಕ್ಕಳು ಜಲಸಮಾಧಿಯಾಗಿದ್ದಾರೆ.

ತಾಯಿಯನ್ನು ಸ್ಥಳೀಯರು ಕಾಪಾಡಿದ ಘಟನೆ ವಿಜಯಪುರ ಜಿಲ್ಲೆ ನಿಡಗುಂದಿ ತಾಲೂಕಿನ ಬೇನಾಳ ಬಳಿಯ ಆಲಮಟ್ಟಿ ಎಡದಂಡೆ ಮುಖ್ಯ ಕಾಲುವೆಯಲ್ಲಿ ಸೋಮವಾರ ನಡೆದಿದೆ. ಕೊಲ್ಹಾರ ತಾಲ್ಲೂಕಿನ ತೆಲಗಿ ಗ್ರಾಮದ ತನು ನಿಂಗರಾಜ ಭಜಂತಿ (5), ರಕ್ಷಾ ನಿಂಗರಾಜ ಭಜಂತ್ರಿ (3), ಹಸೇನ ನಿಂಗರಾಜ ಭಜಂತ್ರಿ ಹಾಗೂ ಹುಸೇನ ನಿಂಗರಾಜ ಭಜಂತ್ರಿ (13 ತಿಂಗಳು) ಮೃತ ಮಕ್ಕಳು. ಮಕ್ಕಳ ತಾಯಿ ಭಾಗ್ಯ ಭಜಂತ್ರಿ ಎಂಬುವಳನ್ನು ಸ್ಥಳೀಯರು ಕಾಪಾಡಿದ್ದಾರೆ. ತಾಯಿ ಬದುಕುಳಿದಿದ್ದಾಳೆ. ಆಕೆಯ ನಾಲ್ವರು ಮಕ್ಕಳು ಜಲ ಸಮಾಧಿಯಾಗಿದ್ದಾರೆ. ಕೌಟುಂಬಿಕ ಕಾರಣವೇ ಘಟನೆಗೆ ಕಾರಣ ಎನ್ನಲಾಗಿದೆ. ಇಬ್ಬರು ಹೆಣ್ಣು ಮಕ್ಕಳ ಶವವನ್ನು ಮೀನುಗಾರರು ಹೊರ ತಗೆದಿದ್ದಾರೆ. ಇಬ್ಬರು ಗಂಡು ಮಕ್ಕಳ ಶವಕ್ಕಾಗಿ ಶೋಧ ಕಾರ್ಯ ಮುಂದುವರೆದಿದೆ.

ಸ್ಥಳಕ್ಕೆ ನಿಡಗುಂದಿ ಪೊಲೀಸರು ಹಾಗೂ ಅಗ್ನಿಶಾಮಕದಳ ಸಿಬ್ಬಂದಿ ದೌಡಾಯಿಸಿದ್ದು, ಪರಿಹಾರ ಕಾರ್ಯ ಕೈಗೊಂಡಿದ್ದಾರೆ.

ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಲಬುರಗಿ: ನಾಡಿನಾದ್ಯಂತ ಆಚರಿಸಲಾಗುವ 'ಸಂಕ್ರಾಂತಿ' ಹಬ್ಬದ ಪ್ರಯುಕ್ತ ನಗರದ ಕಣ್ಣಿ ಮಾರ್ಕೆಟ್‌ನಲ್ಲಿ ಜನರು ಕಬ್ಬು, ಖಜೂರ, ಸುಲಗಾಯಿ, ಎಳ್ಳು-ಬೆಲ್ಲ, ಗಾಣದ ಉಂಡಿ ಸೇರಿದಂತೆ ಇತರೆ ವಸ್ತುಗಳನ್ನು ಭರ್ಜರಿಯಾಗಿ ಖರೀದಿಸುತ್ತಿರುವುದು.

## ಸಾರ್ವಜನಿಕರು, ಸರ್ಕಾರದ ಮಧ್ಯೆ ಕೊಂಡಿಯಾಗಿರುವ ದಿನಪತ್ರಿಕೆಗಳ ಕತ್ತು ಹಿಸುಕುವ ಸರ್ಕಾರ: ರಾಜ್ಯಾಧ್ಯಕ್ಷ ಎ.ಸಿ.ತಿಪ್ಪೇಸ್ವಾಮಿ



ಮಲ್ಲಮ್ಮ ನುಡಿ ವಾರ್ತೆ

ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ಜಾಹೀರಾತು ದರ ಹೆಚ್ಚಳ ಮಾಡುವಂತೆ ಸರ್ಕಾರಕ್ಕೆ ಆಗ್ರಹ

ದಾವಣಗೆರೆ:ಜ.13: ಸಾರ್ವಜನಿಕರು, ಸರ್ಕಾರದ ಮಧ್ಯೆ ಕೊಂಡಿಯಾಗಿರುವ ದಿನಪತ್ರಿಕೆಗಳ ಕತ್ತು ಹಿಸುಕುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದ್ದು ಇದರಿಂದ ಪತ್ರಿಕೆಗಳನ್ನು ನಡೆಸುವುದೇ ಸವಾಲಿನ ಕೆಲಸವಾಗಿದೆ ಎಂದು ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯಾಧ್ಯಕ್ಷ ಎ.ಸಿ.ತಿಪ್ಪೇಸ್ವಾಮಿ ಬೇಸರ ವ್ಯಕ್ತಪಡಿಸಿದರು.

ನಗರದ ಬಂಟರ ಸಮುದಾಯ

(2ನೇ ಪುಟ ನೋಡಿ)

## ಬೀದರ್ ಪಶು ವಿಶ್ವವಿದ್ಯಾಲಯದಲ್ಲಿ ಜ. 17ರಿಂದ ಜಾನುವಾರು, ಕುಕ್ಕುಟ, ಮತ್ಸ್ಯಮೇಳ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 13 : ತಾಲ್ಲೂಕಿನ ಕಮಠಾಣ ಸಮೀಪದ ನಂದಿನಗರದ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಜ. 17ರಿಂದ 19ರ ವರೆಗೆ ವಿವಿಧ ಜಾನುವಾರು, ಕುಕ್ಕುಟ ತಳಿಗಳ ಪ್ರದರ್ಶನ ಮತ್ತು ಮತ್ಸ್ಯ ಮೇಳ ಜರುಗಲಿದೆ ಎಂದು ಕುಲಪತಿ ಡಾ.ಕೆ.ಸಿ. ವೀರಣ್ಣ ತಿಳಿಸಿದರು.

ಸಂಶೋಧನೆ ಮತ್ತು ತಂತ್ರಜ್ಞಾನದ ಫಲ ರೈತರಿಗೆ ತಲುಪಿಸುವ ಉದ್ದೇಶದಿಂದ ಮೂರು ದಿನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರೈತರು, ಪಶು ಹಾಗೂ ಮೀನು ಸಾಕಾಣಿಕೆಯಲ್ಲಿ ಆಸಕ್ತಿ ಹೊಂದಿರುವ ಯುವಜನರಿಗೆ ಇದರಲ್ಲಿ ಅತ್ಯಮೂಲ್ಯ ಮಾಹಿತಿ ಲಭ್ಯವಾಗುತ್ತದೆ. ನಿರುದ್ಯೋಗಿಗಳು ಸ್ವಯಂ ಉದ್ಯೋಗ ಕಂಡುಕೊಳ್ಳಲು ನೆರವಾಗಲಿದೆ ಎಂದು ವಿಶ್ವವಿದ್ಯಾಲಯದಲ್ಲಿ ಸೋಮವಾರ ಕರೆದ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ಕೃಷಿ, ತೋಟಗಾರಿಕೆ, ಮೀನುಗಾರಿಕೆ ಇಲಾಖೆ, ಕೃಷಿ ವಿಜ್ಞಾನ ಕೇಂದ್ರ, ಪ್ರಗತಿಪರ ರೈತರ 180 ಮಳಿಗೆಗಳು ವಿಶ್ವವಿದ್ಯಾಲಯದ ಆವರಣದಲ್ಲಿ ತಲೆ ಎತ್ತಲಿವೆ. ಹೈನುಗಾರಿಕೆ, ಜಾನುವಾರುಗಳ ಸಾಕಾಣಿ-ಕೆಗೆ ಸಂಬಂಧಿಸಿದ ನವೀನ ಪರಿಕರಗಳ ಪ್ರದರ್ಶನವೂ ಇರುತ್ತದೆ. ರಾಜ್ಯದ 31 ಜಿಲ್ಲೆಗಳಿಂದ ಒಬ್ಬ ರೈತ ಹಾಗೂ ರೈತ ಮಹಿಳೆಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ರೈತರು-ವಿಜ್ಞಾನಿಗಳ ಸಂವಾದ, ರೈತರ ನಡುವೆ ಚರ್ಚೆಗಳು ಜರುಗಲಿವೆ ಎಂದು ತಿಳಿಸಿದರು.

ಮೇಳದಲ್ಲಿ ಸಂವಾದ, ಕಾರ್ಯಾಗಾರ, ವಿವಿಧ ತಳಿಗಳ ಪ್ರದರ್ಶನ, ಕೃಷಿ, ಹೈನುಗಾರಿಕೆಯ ಹೊಸ ತಂತ್ರಜ್ಞಾನ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ಜರುಗಲಿವೆ. ಸುಗಮ ಸಂಗೀತ, ಭರತನಾಟ್ಯ, ಡೊಳ್ಳು ಕುಣಿತ, ಕಂಸಾಳೆ ಸೇರಿದಂತೆ ಹಲವು ಜಾನಪದ ಕಾರ್ಯಕ್ರಮಗಳು ನಡೆಯಲಿವೆ ಎಂದು ವಿವರಿಸಿದರು.

(2ನೇ ಪುಟ ನೋಡಿ)



## ಒಂದನೇ ಪುಟದಿಂದ

# ಜಾನುವಾರು, ಕುಕ್ಕುಟ, ಮತ್ಸ್ಯಮೇಳ

ಜ. 17ರಂದು ಬೆಳಿಗ್ಗೆ 11ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಉದ್ಘಾಟಿಸುವರು. ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆ ಅಧ್ಯಕ್ಷತೆ ವಹಿಸುವರು. ಪೌರಾಡಳಿತ ಸಚಿವ ರಹೀಂ ಖಾನ್, ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್ ಸೇರಿದಂತೆ ಹಲವು ಗಣ್ಯರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಮೇಳದಲ್ಲಿ ಸುಮಾರು 50 ಸಾವಿರ ಜನ ಪಾಲ್ಗೊಳ್ಳುವ ನಿರೀಕ್ಷೆ. ಈಗಾಗಲೇ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.ಕುಲಸಚಿವ ಪಿ. ಟಿ. ರಮೇಶ, ಡೀನ್ ಹಾಗೂ ವಿಜ್ಞಾನಿ ಡಾ. ಶಿವಪ್ರಕಾಶ, ಸಿಂಡಿಕೇಟ್ ಸದಸ್ಯ ಬಸವರಾಜ ಭತಮುರ್ಗೆ, ಮೇಳದ ಪ್ರಚಾರ ಸಮಿತಿ ಅಧ್ಯಕ್ಷ ಡಾ. ಚನ್ನಪ್ಪಗೌಡ ಬಿರಾದಾರ, ಡಾ. ದಿಲೀಪಕುಮಾರ, ಅಶೋಕ ಪವಾರ, ವೀರ್ ಜಾಧವ, ಎಂ.ಕೆ. ತಾಂದಳೆ, ಅಹಮ್ಮದ್, ಶ್ರೀಕಾಂತ ಕುಲಕರ್ಣಿ ಹಾಜರಿದ್ದರು.ಮೇಳಕ್ಕೆ ಉಚಿತ ಪ್ರವೇಶ

ಮೂರು ದಿನಗಳ ವರೆಗೆ ನಡೆಯಲಿರುವ ಮೇಳದಲ್ಲಿ ಭಾಗವಹಿಸುವವರಿಗೆ ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. ಸಂಪೂರ್ಣ ಉಚಿತ ಪ್ರವೇಶ ಇರಲಿದೆ. ರಾಜ್ಯದ ವಿವಿಧ ಕಡೆಗಳಿಂದ ಬಂದು ಹೋಗುವ ರೈತರಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. ಅತಿ ಕಡಿಮೆ ಶುಲ್ಕದಲ್ಲಿ ಆಹಾರದ ಮಳಿಗೆಗಳನ್ನು ತೆರೆಯಲಾಗುತ್ತದೆ. ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕುಲಪತಿ ಡಾ. ಕೆ.ಸಿ. ವೀರಣ್ಣ ಮನವಿ ಮಾಡಿದರು.

ಅಲಂಕಾರಿಕ ಮೀನುಗಳ ಪ್ರದರ್ಶನ

'ಒಂಬತ್ತು ಸಾವಿರ ಚದರ ಅಡಿ ಜಾಗದಲ್ಲಿ ಅಲಂಕಾರಿಕ ಮೀನುಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. 16 ಮಳಿಗೆಗಳಲ್ಲಿ ವಿವಿಧ ತಳಿಗಳ ಮೀನುಗಳು ಪ್ರದರ್ಶನಕ್ಕೆ ಇರಲಿವೆ. ಮತ್ಸ್ಯಲೋಕವೇ ಧರೆಗೆ ಇಳಿಯಲಿದೆ' ಎಂದು ಕುಲಪತಿ ಡಾ. ಕೆ.ಸಿ. ವೀರಣ್ಣ ತಿಳಿಸಿದರು.

'ಸುಸ್ಥಿರ ಮೀನುಗಾರಿಕೆ, ಜಲಕೃಷಿಯನ್ನು ಉತ್ತೇಜಿಸುವುದು ಇದರ ಮುಖ್ಯ ಉದ್ದೇಶ. ಮೀನುಗಾರಿಕೆ ಶೈಕ್ಷಣಿಕ ಮತ್ತು ಉದ್ಯಮ ಮಳಿಗೆಗಳು, ರುಚಿಕರ ಆಹಾರ ಮಳಿಗೆ, ನೇಚರ್ ಅಕ್ವೇರಿಯಂ, ಚಿಪ್ಪುಗಳ ಪ್ರದರ್ಶನ ಕಣ್ತುಂಬಿಕೊಳ್ಳಬಹುದು' ಎಂದು ಹೇಳಿದರು.

ಶಾಂತಿ, ಸಮಾನತೆಯ ಫಲಪುಷ್ಪ ಪ್ರದರ್ಶನ

ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಪ್ರತಿವರ್ಷದ ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯ ಉತ್ಸವದ ಸಂದರ್ಭದಲ್ಲಿ ಜರುಗುವ ಫಲಪುಷ್ಪ ಪ್ರದರ್ಶನದ ಮಾದರಿಯಲ್ಲಿ 'ಶಾಂತಿ ಮತ್ತು ಸಮಾನತೆ'ಯ ಹೆಸರಿನಲ್ಲಿ ತೋಟಗಾರಿಕೆ ಇಲಾಖೆ ಫಲಪುಷ್ಪ ಪ್ರದರ್ಶನ ಹಮ್ಮಿಕೊಂಡಿದೆ.

'ಹೂಗಳಿಂದ ಅಲಂಕರಿಸಿದ ಗೌತಮ ಬುದ್ಧನ ಮೂರ್ತಿ, ಬಸವಣ್ಣ, ಕುವೆಂಪು ಅವರ ಭಾವಚಿತ್ರಗಳನ್ನು ಹೂಗಳಿಂದ ಅಲಂಕರಿಸಲಾಗುತ್ತದೆ. ತರಕಾರಿಗಳನ್ನು ನೆಲದ ಮೇಲೆ ಕೆತ್ತಿ ತೋರಿಸುವ ವಿನೂತನ ಪ್ರದರ್ಶನ, ಹೂ ಕುಂಡಗಳ ಕಲಾತ್ಮಕ ಜೋಡಣೆ ಪ್ರಮುಖ ಆಕರ್ಷಣೆಯಾಗಿರಲಿದೆ ಎಂದು ಕುಲಪತಿ ಡಾ. ಕೆ.ಸಿ. ವೀರಣ್ಣ ವಿವರಿಸಿದರು.

15 ತಳಿಗಳ 200 ಶ್ವಾನ ಪ್ರದರ್ಶನ

'ಮೇಳದ ಕೊನೆಯ ದಿನವಾದ ಜ. 19ರಂದು 15 ವಿವಿಧ ತಳಿಗಳ 200 ಶ್ವಾನಗಳ ಪ್ರದರ್ಶನ ನಡೆಯಲಿದೆ. ಲ್ಯಾಬ್ರಡಾರ್, ರಿಟ್ರೀವರ್ಸ್, ಜರ್ಮನ್ ಶೆಫರ್ಡ್, ಗೋಲ್ಡನ್ ರಿಟ್ರೀವರ್ಸ್, ಪೊಮೆರೇನಿಯನ್ಸ್, ರಾಟ್ ವೀಲರ್ಸ್, ಗ್ರೇಟ್ ಡೇನ್ಸ್, ಬೀಗಲ್ಸ್, ಬಾಕ್ಸರ್, ಮುಧೋಳ ಹೌಂಡ್ ತಳಿ ನಾಯಿ ಪ್ರಮುಖ ಆಕರ್ಷಣೆಯಾಗಿರಲಿದೆ' ಎಂದು ಕುಲಪತಿ ಡಾ. ಕೆ.ಸಿ. ವೀರಣ್ಣ ತಿಳಿಸಿದರು.

ಪ್ರತಿ ತಳಿಯಲ್ಲಿ ಗಂಡು, ಹೆಣ್ಣು ನಾಯಿಗಳಿಗೆ ಪ್ರಥಮ, ದ್ವಿತೀಯ ಬಹುಮಾನ ನೀಡಲಾಗುವುದು. ಮರಿಗಳ ವಿಭಾಗದಲ್ಲಿ ಅಗ್ರ 5 ನಾಯಿಮರಿಗಳ ಆಯ್ಕೆ ಮಾಡಲಾಗುವುದು. ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಶ್ವಾನಗಳಿಗೆ ಚಾಂಪಿಯನ್ ಆಫ್ ಚಾಂಪಿಯನ್ಸ್ ಮತ್ತು ರನ್ನರ್ ಅಪ್ ಚಾಂಪಿಯನ್ ಆಫ್ ಚಾಂಪಿಯನ್ಸ್ ಬಹುಮಾನ ನೀಡಲಾಗುವುದು. ಮೊದಲ ಬಹುಮಾನ ?5 ಸಾವಿರ ನಗದು, ದ್ವಿತೀಯ ಬಹುಮಾನ ?3 ಸಾವಿರ ನಗದು ಬಹುಮಾನ ಸಹ ಇರಲಿದೆ. ಇದೇ ಸಂದರ್ಭದಲ್ಲಿ ಎಲ್ಲ ಶ್ವಾನಗಳಿಗೆ ಉಚಿತ ರೇಬಿಸ್ ರೋಗ ನಿರೋಧಕ ಲಸಿಕೆ ನೀಡಲಾಗುವುದು ಎಂದು ತಿಳಿಸಿದರು.

## ದಿನಪತ್ರಿಕೆಗಳ ಕತ್ತು ಹಿಸುಕುವ ಸರ್ಕಾರ: ರಾಜ್ಯಾಧ್ಯಕ್ಷ ಎ.ಸಿ.ತಿಪ್ಪೇಸ್ವಾಮಿ

ಭವನದಲ್ಲಿ ಜನವರಿ 12 ರಂದು ಭಾನುವಾರ ಬೆಳಿಗ್ಗೆ 11 ಗಂಟೆಗೆ ಏರ್ಪಡಿಸಲಾಗಿದ್ದ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯ ಕಾರ್ಯಕಾರಿಣಿ ಸಭೆ ಹಾಗೂ ಗದಗಿನಲ್ಲಿ ಏರ್ಪಡಿಸಲಾಗುವ ರಾಜ್ಯಮಟ್ಟದ ಪ್ರಪ್ರಥಮ ಸಮ್ಮೇಳನ ಹಾಗೂ ಮಾದ್ಯಮ ಅಕಾಡೆಮಿ ಪುರಸ್ಕೃತರಿಗೆ ಏರ್ಪಡಿಸಲಾಗಿದ್ದ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದಿನಪತ್ರಿಕೆಗಳಿಗೆ ಆಸರೆಯಾಗಬೇಕಿದ್ದ ರಾಜ್ಯ ಸರ್ಕಾರ ಈಗ ಪತ್ರಿಕೆಗಳ ಏಳಿಗೆಗೆ ಸಹಕಾರ ನೀಡುವ ಬದಲಿಗೆ ಅಸಹಕಾರ ನೀಡುವ ಪ್ರವೃತ್ತಿ ಮುಂದುವರೆದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬದಲಾದ ಪರಿಸ್ಥಿತಿಯಲ್ಲಿ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳು ಪೈಪೋಟಿ ನಡೆಸುವ ಸ್ಥಿತಿಯಲ್ಲಿಲ್ಲ. ದುಬಾರಿ ಮುದ್ರಣ ವೆಚ್ಚ, ಕಾಗದ, ಸಿಬ್ಬಂದಿ ವೇತನ ಹೀಗೆ ಪ್ರತಿಯೊಂದರ ಬೆಲೆಗಳು ಗಗನಮುಖಿಯಾಗಿದ್ದು ಪತ್ರಿಕೆಗಳನ್ನು ಹೊರತರುವುದೇ ಕಷ್ಟದಾಯಕ ಕೆಲಸ ಸಂಪಾದಕರದ್ದಾಗಿದೆ. ಪತ್ರಿಕೆಯ ಮಾರಾಟ ಬೆಲೆಗೂ, ಮುದ್ರಣ ಖರ್ಚುವೆಚ್ಚಕ್ಕೂ ತುಲನೆ ಮಾಡಿ ನೋಡಿದಾಗ ಮುದ್ರಣ ವೆಚ್ಚಕ್ಕಿಂತಲೂ ಮುದ್ರಣ ಮಾರಾಟ ಬೆಲೆ ತೀರಾ ಕಡಿಮೆಯಾಗಿದೆ. ಪತ್ರಿಕೆಗಳನ್ನು ಕೊಂಡು ಓದುವ ಪ್ರವೃತ್ತಿ ಜನರಲ್ಲಿ ದಿನೇ ದಿನೇ ಕಡಿಮೆಯಾಗುತ್ತಿದೆ. ಒಂದು ಕಾಲದಲ್ಲಿ ಪತ್ರಿಕೆಗಳಿದ್ದ ಮಾನ್ಯತೆ ಇಂದು ಕ್ಷೀಣಿಸುತ್ತಿದ್ದು, ಮಾಧಮ ಕ್ಷೇತ್ರದಲ್ಲಿರುವ ಎಲ್ಲರೂ ಪತ್ರಿಕೆಗಳ ಮಹತ್ವ ಕುರಿತು ಜನರಲ್ಲಿ ಸದಭಿಪ್ರಾಯ ಮೂಡಿಸುವ ಕೆಲಸಕ್ಕೆ ಮುಂದಾಗಬೇಕೆಂದು ಸಲಹೆ ನೀಡಿದರು.

ಸರ್ಕಾರದ ಅಭಿವೃದ್ಧಿ ಕಾರ್ಯಗಳು ಸ್ಥಳೀಯ ಸಮಸ್ಯೆಗಳ ಕುರಿತು ಪತ್ರಿಕೆಗಳಲ್ಲಿ ಸವಿಸ್ತಾರವಾಗಿ ಪ್ರಕಟಿಸುವ ವರದಿಗಳು ಓದುಗರಲ್ಲಿ ವಿಶ್ವಾಸ ಮೂಡಿಸಿವೆ. ಪತ್ರಿಕೆಗಳು ಸರ್ಕಾರ ಮತ್ತು ಜನರ ನಡುವೆ ಕೊಂಡಿಯಾಗಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ. ಇಂತಹ ಕಾರ್ಯ ಮಾಡುವ ಸಣ್ಣಪತ್ರಿಕೆಗಳ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ರೂಪಿಸುವ ಮೂಲಕ ಸರ್ಕಾರ ಹೆಚ್ಚು ಹೆಚ್ಚು ಜಾಹೀರಾತುಗಳನ್ನು ಕೊಟ್ಟು ಪತ್ರಿಕೆಗಳನ್ನು ಉಳಿಸಿ ಬೆಳೆಸಬೇಕೆಂದು ಹೇಳಿದರು.

ಸರ್ಕಾರ ಕಳೆದ 4 ವರ್ಷಗಳಿಂದ ಶೇ.12 ರಷ್ಟು ಜಾಹೀರಾತು ದರ ಹೆಚ್ಚಳ ಮಾಡಿಲ್ಲ. ಕಾನೂನುಬಾಹಿರವಾಗಿ ಏಜೆನ್ಸಿಗಳು ಪತ್ರಿಕೆಗಳ ಜಾಹೀರಾತು ಬಿಲ್ಲುಗಳಲ್ಲಿ ಶೇ15ರಷ್ಟು ಕಮಿಷನ್ ಕಡಿತಗೊಳಿಸುತ್ತಿವೆ. ಕಮಿಷನ್ ಕಡಿತಗೊಳಿಸದಂತೆ ಸರ್ಕಾರಕ್ಕೆ ಮತ್ತು ವಾರ್ತಾ ಇಲಾಖೆಯ ಆಯುಕ್ತರಿಗೆ ಈಗಾಗಲೇ ಮನವಿ ಮಾಡಲಾಗಿದೆ. 5 ವರ್ಷದೊಳಗಿನ ಓಬಿಸಿ ಮತ್ತು ಬ್ರಾಹ್ಮಣ ಸಮುದಾಯದ ಪತ್ರಿಕೆಗಳಿಗೆ ಮಾಸಿಕ ಒಂದು ಪುಟ ಜಾಹೀರಾತನ್ನು ಪ್ರೋತ್ಸಾಹ ರೂಪದಲ್ಲಿ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿಗಳಿಗೆ, ಸರ್ಕಾರಕ್ಕೆ , ಇಲಾಖೆಯ ಆಯುಕ್ತರಿಗೆ ಅನೇಕ ಸಲ ಮನವಿ ಮಾಡಿಕೊಳ್ಳಲಾಗಿದೆ. ಮನವಿಗಳನ್ನು ಪರಿಗಣಿಸದ ಸರ್ಕಾರ ಸಂಘದ ಯಾವುದೇ ಬೇಡಿಕೆಗಳನ್ನು ಇದುವರೆಗೆ ಈಡೇರಿಸಿಲ್ಲ. ಆದಷ್ಟು ಬೇಗ ಸಂಘದ ಬೇಡಿಕೆಗಳನ್ನು ಈಡೇರಿಸದಿದ್ದರೆ ಅನಿವಾರ್ಯವಾಗಿ ಸರ್ಕಾರ ಮತ್ತು ಇಲಾಖೆಯ ವಿರುದ್ಧ ಸಂಘದಿಂದ ಅನಿರ್ಧಿಷ್ಟಾವಧಿ ಧರಣಿ ಸತ್ಯಾಗ್ರಹ ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರಾಜ್ಯದಲ್ಲಿ ಪತ್ರಿಕೆಗಳು ಉಳಿದರೆ ಸಂಪಾದಕರು ಮತ್ತು ಪತ್ರಕರ್ತರು ಉಳಿಯಲು ಸಾಧ್ಯ. ಈ ನಿಟ್ಟಿನಲ್ಲಿ ಪತ್ರಿಕೆಗಳ ಸಂಪಾದಕರು, ಪತ್ರಕರ್ತರು ಭಿನ್ನಾಭಿಪ್ರಾಯಗಳನ್ನು ಮರೆತು ಒಂದಾಗಬೇಕೆಂದು ಕಿವಿಮಾತು ಹೇಳಿದ ರಾಜ್ಯಾಧ್ಯಕ್ಷರು, ಮಾಧಮ ಕ್ಷೇತ್ರದ ಯಾವುದೇ ವ್ಯಕ್ತಿಗೆ ಅನ್ಯಾಯವಾದರೆ ಒಗ್ಗಟ್ಟಿನಿಂದ ಪ್ರತಿಭಟಿಸಬೇಕೆಂದು ಕರೆ ನೀಡಿದರು.

ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್.ಬಡದಾಳ್ ಮಾತನಾಡಿ, ಮಾದ್ಯಮ ಕ್ಷೇತ್ರದ ಪ್ರತಿಯೊಬ್ಬರಿಗೂ ತೊಂದರೆಯಾಗುತ್ತಿದೆ. ಸಂಘಟನೆಗಳು ಎಷ್ಟೇ ಹುಟ್ಟಲಿ ಅವು ಮಾಧ್ಯಮ ಕ್ಷೇತ್ರ ಮತ್ತು ಪತ್ರಕರ್ತರ ಹಿತಕ್ಕಾಗಿ ಹೋರಾಡಬೇಕು. ಹರಿಯುವ ನದಿಗಳೆಲ್ಲಾ ಸಮುದ್ರ ಸೇರುವಂತೆ ಎಲ್ಲಾ ಸಂಘಟನೆಗಳ ಉದ್ದೇಶ ಮಾಧ್ಯಮ ಕ್ಷೇತ್ರದ ಮತ್ತು ಮಾಧ್ಯಮದವರ ಹಿತ ಕಾಯುವುದೇ ಆಗಿದೆ. ಪತ್ರಿಕಾ ಕಚೇರಿಯಲ್ಲಿ ಕಸ ಗುಡಿಸುವವರಿಂದ ಹಿಡಿದು, ಸಂಪಾದಕರು, ಪತ್ರಿಕಾ ವಿತರಕರು ಹೀಗೆ ಎಲ್ಲಾ ವಿಭಾಗದ ಸಿಬ್ಬಂದಿಗೆ ಸೂರು ಕಲ್ಪಿಸಿಕೊಡಲು ಹೆಜ್ಜೆ ಇಡಲಾಗಿದೆ. ಇದಕ್ಕೆ ಎಲ್ಲರ ಸಹಕಾರ ಬೇಕೆಂದು ಹೇಳಿದರು. ಟೆಂಡರ್ ಜಾಹೀರಾತು ಬಿಡುಗಡೆಯಲ್ಲಿ ಜಿಲ್ಲಾ ವಾರ್ತಾ ಕಚೇರಿಗಳು ತಾರತಮ್ಯ ಮಾಡುತ್ತಿವೆ. ಬೇಕಾದವರಿಗೆ ದೊಡ್ಡ ದೊಡ್ಡ ಜಾಹೀರಾತುಗಳನ್ನು ಕೊಟ್ಟು ಇತರರಿಗೆ ಚಿಕ್ಕ ಚಿಕ್ಕ ಜಾಹೀರಾತುಗಳನ್ನು ಕೊಡುವಂತಹ ಪ್ರವೃತ್ತಿಯನ್ನು ಅಧಿಕಾರಿಗಳು ಬೆಳೆಸಿಕೊಂಡಿರುವುದು ಸರಿಯಲ್ಲ. ವಾರ್ತಾ ಇಲಾಖೆಯ ಅಧಿಕಾರಿಗಳು ಸರದಿ ಪ್ರಕಾರ ಟೆಂಡರ್ ಜಾಹೀರಾತುಗಳನ್ನು ಕೊಡಲು ಮುಂದಾಗಬೇಕು. ಪಾರದರ್ಶಕತೆ ಅಳವಡಿಕೊಳ್ಳಬೇಕೆಂದು ಹೇಳಿದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಮಾತನಾಡಿ, ಈ ಹಿಂದೆ ಸಂಪಾಕದರ ಸಂಘವು ಜನತಾವಾಣಿ ಸಂಸ್ಥಾಪಕ ಸಂಪಾದಕ ಹೆಚ್.ಎಂ. ಷಡಾಕ್ಷರಪ್ಪನವರ ಅಧ್ಯಕ್ಷತೆಯಲ್ಲಿ ಪತ್ರಿಕೆಗಳ ಏಳಿಗೆಗೆ ಸಾಕಷ್ಟು ಕೆಲಸ ಮಾಡಲಾಗಿದೆ. ಇವರು ರಾಜ್ಯದ ಅನೇಕ ಜಿಲ್ಲೆಗಳಿಗೆ ಭೇಟಿ ಕೊಟ್ಟು ಮಾಧಮಗಳ ಉಳಿವಿಗೆ ಶ್ರಮಿಸಿದ್ದನ್ನು ಸ್ಮರಿಸಿದರು. ಪತ್ರಿಕೆಗಳ ಸಂಪಾದಕರ ಸಂಘ, ಕಾರ್ಯನಿತರ ಪತ್ರಕರ್ತರ ಸಂಘ, ಜಿಲ್ಲಾ ವರದಿಗಾರರ ಕೂಟ ಒಟ್ಟಾಗಿ ಪತ್ರಿಕೆಗಳ ಉಳಿವಿಗೆ ಮತ್ತು ಈ ಕ್ಷೇತ್ರದ ಅವಲಂಬಿತರ ಹಿತ ಕಾಯಲು ಮುಂದಾಗೋಣ ಎಂದು ಕರೆ ನೀಡಿದರು.

ಸಂಘದ ಉಪಾಧ್ಯಕ್ಷರಾದ ಮಂಜುನಾಥ ಅಬ್ಬಿಗೇರಿ, ರಾಮಕೃಷ್ಣ ಮಾಮರ ಮಾತನಾಡಿ, ನಮ್ಮ ಸಂಘದ ಜಿಲ್ಲಾ ಘಟಕ ಇಂದು ಅದ್ಭುತವಾದ ಹೆಜ್ಜೆಯನ್ನಿಟ್ಟು ಮಾಧ್ಯಮ ಅಕಾಡೆಮಿ ಪುರಸ್ಕೃತರಿಗೆ ಸನ್ಮಾನ ಮಾಡಿದ್ದು ಶ್ಲಾಘನೀಯವೆಂದರು. ಕೇವಲ 15 ದಿನಗಳಲ್ಲಿ ದಾವಣಗೆರೆಯಲ್ಲಿ ರಾಜ್ಯ ಕಾರ್ಯಕಾರಿಣಿ ಸಭೆ ನಡೆಸಿ ಯಶಸ್ವಿಗೊಳಿಸಿದ್ದಕ್ಕೆ ಧನ್ಯವಾದ ಹೇಳಿದರು.

ಸಂಘದ ಉಪಾಧ್ಯಕ್ಷ ಭೀಮರಾಯ ಹದ್ದಿನಾಳ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಘ ನಿಮಗಾಗಿ ನೀವೆಲ್ಲರೂ ಸಂಘಕ್ಕಾಗಿ ಎನ್ನುವ ಧ್ಯೇಯೋದ್ದೇಶದೊಂದಿಗೆ ಸಂಘ ಸ್ಥಾಪನೆಯಾಗಿದೆ. ಪತ್ರಿಕೆ ಉಳಿದರೆ ಸಂಪಾದಕ ಉಳಿಯುತ್ತಾನೆ. ಕಷ್ಟಕಾಲದಲ್ಲೂ ಮಾಧ್ಯಮ ಕ್ಷೇತ್ರ ಜೀವಂತವಾಗಿದೆ ಎಂದರೆ ಅದಕ್ಕೆ ಕಾರಣ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳು ಎಂದರೆ ಅತಿಶಯೋಕ್ತಿಯಾಗಲಾರದು ಎಂದರು. ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಸಂಪಾದಕರು ಸಂಘವನ್ನು ಬಲಪಡಿಸಲು ಸಂಘದ ಸದಸ್ಯತ್ವ ಪಡೆದು ಸದೃಢಗೊಳಿಸಲು ಕಾರ್ಯಪ್ರವೃತ್ತರಾಗುವಂತೆ ಕರೆ ನೀಡಿದರು.

ಜಿಲ್ಲಾಧ್ಯಕ್ಷ ಸುರೇಶ್ ಆರ್. ಕುಣೆಬೆಳಕೆರೆ ಮಾತನಾಡಿ, ದಾವಣಗೆರೆ ನಗರದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲು ಅವಕಾಶ ನೀಡಿದ್ದಕ್ಕಾಗಿ ರಾಜ್ಯ ಘಟಕಕ್ಕೆ ಧನ್ಯವಾದ ಹೇಳಿದರು.

ವರದಿಗಾರರ ಕೂಟದ ನಿಕಟಪೂರ್ವ ಅಧ್ಯಕ್ಷ ಕೆ. ಏಕಾಂತಪ್ಪ, ಮಾಧ್ಯಮ ಅಕಾಡೆಮಿ ಪ್ರಶಸ್ತಿಗೆ ಪುರಸ್ಕೃತರಾದ ರಮೇಶ ಜಹಾಗೀರದಾರ, ದೂರದರ್ಶನದ ವರದಿಗಾರ ಎ.ಎಲ್.ತಾರಾನಾಥ, ಡಾ. ವರದರಾಜು ಸಮಾರಂಭದಲ್ಲಿ ಮಾತನಾಡಿದರು.

ಸಭೆಯಲ್ಲಿ ಮಾಧ್ಯಮ ಅಕಾಡೆಮಿ ಪುರಸ್ಕೃತರಿಗೆ ಮತ್ತು ಮಾನ್ಯತಾ ಸಮಿತಿ ಸದಸ್ಯರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಪತ್ರಿಕಾ ಮಾನ್ಯತಾ ಸಮಿತಿ ಸದಸ್ಯರಾದ ಯಳನಾಡು ಮಂಜುನಾಥ, ಅಂತರರಾಷ್ಟ್ರೀಯ ಯೋಗಪಟು ಮತ್ತು ರಾಜ್ಯ ಸಂಘದ ನಾಮನಿರ್ದೇಶನ ಸದಸ್ಯ ಡಾ.ಕೆ. ಜೈಮುನಿ, ಡಾ.ಬಿ. ವಾಸುದೇವ, ರಾಜ್ಯ ಪ್ರಧಾನ ಕಾರ್ಯದರ್ಶಿ ಕೃಷ್ಣಮೂರ್ತಿ, ಖಜಾಂಚಿ ವೇದಮೂರ್ತಿ ಸೇರಿದಂತೆ ರಾಜ್ಯ ಸಂಘದ ಮತ್ತು ಜಿಲ್ಲಾ ಘಟಕಗಳ ಅಧ್ಯಕ್ಷರುಗಳು, ಪದಾಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಸಭೆಯ ಪೂರ್ವದಲ್ಲಿ ದಾವಣಗೆರೆ ನಗರದ ನಗರವಾಣಿ, ಜನತಾವಾಣಿ, ದಾವಣಗೆರೆ ಟೈಮ್ಸ್, ದಾವಣಗೆರೆ ಭುವನೇಶ್ವರಿ, ಶರಣ ಕ್ರಾಂತಿ,ಲೋಕಪ್ರಭ,ಇಂದಿನ ಸುದ್ದಿ, ವಿಚಾರ ಸುದ್ದಿ ಪತ್ರಿಕೆಗಳ ಸಂಸ್ಥಾಪಕ ಸಂಪಾದಕ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಚಿನ್ನಸಮುದ್ರ ಗ್ರಾಮದ ಜಾನಪದ ಕಲಾವಿದ ಉಮೇಶನಾಯ್ಕ, ಬಸವ ಕಲಾ ಲೋಕದ ಕಲಾವಿದರು ಜಾನಪದ ಹಾಡುಗಳನ್ನು ಹಾಗೂ ವಚನಗಳು, ಭಾವಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ಎಸ್.ಆರೋಕ್ಯ ಸ್ವಾಮಿ ಕವನ ವಾಚನ ಮಾಡಿದರು ಸಿನಿಮಾ ಡೈಲಾಗ್ ಹೇಳಿ ಸಭಿಕರ ಮನ ಸಂತೋಷ ಪಡಿಸಿದರು. ಸಪ್ತರ್ಷಿ ಯೋಗ ಅಕಾಡೆಮಿಯ ಅಂತರರಾಷ್ಟ್ರೀಯ ಯೋಗಪಟುಗಳಾದ ಕು.ಶ್ರೇಯ ಶಿವಪೂಜಿ, ಕು.ಅನನ್ಯ ಪ್ರಾರ್ಥನಾ ಗೀತೆಯನ್ನು ನೃತ್ಯದೊಂದಿಗೆ ನಡೆಸಿಕೊಟ್ಟರು. ರಾಜ್ಯ ಸಂಘದ ಖಜಾಂಚಿ ವೇದಮೂರ್ತಿ ಸ್ವಾಗತಿಸಿದರು. ಹಿರಿಯ ಪತ್ರಕರ್ತೆ ದೇವಿಕಾ ಸುನಿಲ್ ನಿರೂಪಿಸಿದರು. ಜಿಲ್ಲಾ ಖಜಾಂಚಿ ಶಿವಮೂರ್ತಿ ವಂದಿಸಿದರು.

### ಡ್ರಾಪ್ ಔಟ್ ತಪ್ಪಿಸಲು ಮುತುವರ್ಜಿ ವಹಿಸಿ

ಮಂಜೂರಾತಿಗೆ ಹಿಂದೇಟು ಹಾಕುತ್ತಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಯು.ನಿಸಾರ ಅಹ್ಮದ ಅವರು, ಬೀದಿ ಬದಿ ವ್ಯಾಪಾರಿಗಳು ಸೇರಿದಂತೆ ದುಡಿದು ತಿನ್ನುವ ಕಾರ್ಮಿಕ ವರ್ಗಕ್ಕೆ ಸಾಲ ಮಂಜೂರು ಮಾಡುವ ಸಂದರ್ಭದಲ್ಲಿ ಅನಗತ್ಯ ದಾಖಲೆಗಳು ಕೇಳಿ ಕಿರಿಕಿರಿ ಮಾಡಬೇಡಿ. ಸ್ವಲ್ಪ ಮಾನವೀಯತೆ ಮೆರೆಯಿರಿ ಎಂದು ಲೀಡ್ ಬ್ಯಾಂಕ್ ಮ್ಯಾನೇಜರ್ ಸಂತೋಷ ಪಾಟೀಲ ಅವರಿಗೆ ಯು. ನಿಸಾರ ಅಹ್ಮದ್ ಸಲಹೆ ನೀಡಿದರು.

ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ ಮಾತನಾಡಿ ಇತ್ತೀಚೆಗೆ ಬ್ಯಾಂಕರ್ಸ್‌ಗಳ ಸಭೆಯಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ ಮತ್ತು ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಸಾಲ ಮಂಜೂರಾತಿಗೆ ಯಾವುದೇ ಪ್ರಸ್ತಾವನೆ ಬ್ಯಾಂಕುಗಳ ಇಟ್ಟುಕೊಳ್ಳಬಾರದೆಂದು ನಿರ್ದೇಶನ ನೀಡಲಾಗಿದೆ ಎಂದರು.

ಸಭೆಯಲ್ಲಿ ಆಯೋಗದ ವಿಶೇಷ ಅಧಿಕಾರಿ ಮುಜಿಬುಲ್ಲಾ ಜಫಾರಿ, ಹೆಚ್ಚುವರಿ ಎಸ್.ಪಿ. ಮಹೇಶ ಮೇಘಣ್ಣನವರ್, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಜಾವೀದ್ ಕರಂಗಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

# ವಿವೇಕಾನಂದರ ಮೌಲ್ಯಗಳು ವಿದ್ಯಾರ್ಥಿಗಳಿಗೆ ದಾರಿದೀಪ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಜ.13:ಸ್ವಾಮಿ ವಿವೇಕಾನಂದರುಪ್ರತಿಪಾದಿಸಿದ ಜೀವನಮೌಲ್ಯಗಳು,ವಿಶ್ವಶಾಂತಿ, ವಿವಿಧತೆಯಲ್ಲಿಏಕತೆಯ ಬಗ್ಗೆ ಚಿಕ್ಯಾಗೋ ವಿಶ್ವಧರ್ಮ ಸಮ್ಮೇಳನದಲ್ಲಿಪ್ರತಿಪಾದಿಸಿದ ಮೌಲ್ಯಗಳು ವಿದ್ಯಾರ್ಥಿಗಳಿಗೆ ದಾರಿದೀಪವಾಗುವುದರಜತೆಗೆ ಭಾರತಾಂಬೆಯ ಹೆಮ್ಮೆಯ ಪುತ್ರಸ್ವಾಮಿ ವಿವೇಕಾನಂದರು ಆಗಿದ್ದಾರೆ ಎಂದು ಎಸ್ ಆರ್ ಡಿ ಇ ಸೊಸೈಟಿ ಯ ಅಧ್ಯಕ್ಷ ಬಾಲಾಜಿ ಫಿರಂಗೆ ಹೇಳಿದರು.

ತಾಲೂಕಿನ ತೋರಣ ಗ್ರಾಮದ ವಿವೇಕಾನಂದ ಪಬ್ಲಿಕ್ ಶಾಲೆಯಲ್ಲಿಭಾನುವಾರ ಸ್ವಾಮಿ ವಿವೇಕಾನಂದ ಹಾಗೂ ರಾಷ್ಟ್ರ ಮಾತಾ ಜೀಜಾಮಾತೆಯ ಭಾವಚಿತ್ರಕ್ಕೆ ಪುಷ್ಪನಮನ ಗೌರವ ಸಲ್ಲಿಸಿ ಮಾತನಾಡಿದರು.

ನಾವು ಭಾರತವನ್ನು ಅರಿಯುಬೇಕೆಂದಿದ್ದರೆ ಸ್ವಾಮಿ ವಿವೇಕಾನಂದರನ್ನು ಅಧ್ಯಯನ ಮಾಡಬೇಕು. ಅವರಲ್ಲಿಇರುವುದು ಎಲ್ಲವೂ ರಚನಾತ್ಮಕವಾದುದು ಎಂಬ ಮಾತು ನೂರಕ್ಕೆನೂರರಷ್ಟು ಸತ್ಯ.ಇಂದಿನಯುವಜನಾಂಗ ವಿವೇಕಾನಂದರ ಸಂದೇಶ ಪಾಲಿಸಿದರೆಭಾರತದಭವಿಷ್ಯ ಸುಂದರವಾಗಿರುತ್ತದೆ.

ಮನುಷ್ಯನಿಗೆ ಶಾಂತಿ ಮತ್ತು ನೆಮ್ಮದಿ ತರುವುದೇ ಧರ್ಮದ ಮೂಲ ಉದ್ದೆ?ಶ. ಇಂದಿನ ವಿದ್ಯಾರ್ಥಿಗಳು ವಿವೇಕಾನಂದರವಿಚಾರಧಾರೆಗಳನ್ನು ಜೀವನದಲ್ಲಿಅಳವಡಿಸಿಕೊಳ್ಳುವ ಮೂಲಕ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕೆಂದು ಹೇಳಿದರು.ಸ್ವಾಮಿವಿವೇಕಾನಂದ ಶಾಲೆಯ ವಿದ್ಯಾರ್ಥಿಗಳು ವಿವೇಕಾನಂದರಹಾಗೂರಾಷ್ಟ್ರ ಮಾತಾ ಜೀಜಾಮಾತೆಯ ವೇಷಭೂಷಧರಿಸಿನೋಡುಗರ ಗಮನ ಸೆಳೆದಿದ್ದರು.

ಈ ಸಂದರ್ಭದಲ್ಲಿ ಮುಖ್ಯ ಗುರು ಬಾಲಾಜಿ, ಉಮೇಶ್ ಬಾರ್ಕಿ,ಸಂದೀಪ ಸಾದಗೊಂಡಾ,ಪುಂಡಲಿಕ ಬಿರಾದಾರ,ಉಮಾ ಪಾಟೀಲ, ಅನುರಾಧಾ ಬಿರಾದಾರ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಎಂಆರ್‌ಐ ಸ್ಕ್ಯಾನಿಂಗ್ ಸೆಂಟರ್ ಸೌಲಭ್ಯ ಕೊಡಿ

ಮಲ್ಲಮ್ಮ ನುಡಿ ವಾರ್ತೆ


ಬಾಗಲಕೋಟೆ,ಜ.13:ಬಾಗಲಕೋಟೆ ಜಿಲ್ಲಾ ಆಸ್ಪತ್ರೆಯಲ್ಲಿ ಎಂ.ಆರ್.ಐ ಸ್ಕ್ಯಾನಿಂಗ್ ಸೆಂಟರ್ ಸೌಲಭ್ಯ ಕಲ್ಪಿಸಬೇಕು ಎಂದು ರಾಜ್ಯಸಭಾ ಸದಸ್ಯನಾರಾಯಣಸಾ ಭಾಂಡಗೆ ರಾಜ್ಯದ ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಜಿಲ್ಲೆ ವಿಭಜನೆಯಾಗಿ 25 ವರ್ಷ ಕಳೆದರೂ ಸಹ ಜಿಲ್ಲಾ ಆಸ್ಪತ್ರೆಯಲ್ಲಿ ಎಂ.ಆರ್.ಐ ಸ್ಕ್ಯಾನಿಂಗ್ ಸೆಂಟರ್ ಸೌಲಭ್ಯ ಇಲ್ಲದೆ ಬಡಜನರು ಪರದಾಡುವ ಸ್ಥಿತಿಯಿದೆ. ಬಡಜನರ ಅನುಕೂಲಕ್ಕಾಗಿ ಜಿಲ್ಲಾ ಆಸ್ಪತ್ರೆಗಳಲ್ಲಿ ಎಲ್ಲ ರೀತಿಯ ಸೌಲಭ್ಯ ಇರಬೇಕು. ಆದರೆ ಬಾಗಲಕೋಟೆ ಜಿಲ್ಲಾ ಆಸ್ಪತ್ರೆಯಲ್ಲಿ ಎಂ.ಆರ್.ಐ ಸ್ಕ್ಯಾನಿಂಗ್ ಸೆಂಟ-ರ್‌ಗೆ ಹಲವಾರು ಪ್ರಸ್ತಾವಣೆ ಸಲ್ಲಿಸಿದರೂ ಸರಕಾರ ಸ್ಪಂದಿಸಿಲ್ಲ ಎಂದಿದಾರೆ.

21 ಲಕ್ಷ ಜನ ಸಂಖ್ಯೆ ಇರುವ ಬಾಗಲಕೋಟೆ ಜಿಲ್ಲೆಯ ಜನರು ಚಿಕಿತ್ಸೆಗಾಗಿ ಪಕ್ಕದ ಜಿಲ್ಲೆಗಳಿಗೆ ಹೋಗುವುದು ಅನಿವಾರ್ಯವಾಗಿದೆ. ಖಾಸಗಿಯಾಗಿ ಎಂ.ಆರ್.ಐ ಸ್ಕ್ಯಾನಿಂಗ್ ಸೆಂಟರಗಳಲ್ಲಿ ಚಿಕಿತ್ಸೆಗೆ ಹೆಚ್ಚಿನ ಹಣ ಭರಿಸಬೇಕಾಗಿದೆ. ಆ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗೆ ಜರೂರ ಎಂ.ಆರ್.ಐ ಸ್ಕ್ಯಾನಿಂಗ್ ಸೆಂಟರ್ ಪ್ರಾರಂಭಿಸಬೇಕು ಎಂದು ಭಾಂಡಗೆ ಸಚಿವ ಗುಂಡೂರಾವ್‌ಗೆ ಮನವಿ ಮಾಡಿದ್ದಾರೆ.

# ರೈತರಿಗೆ ಸಿಗುವ ಸೌಲಭ್ಯ

## ಸಂಪೂರ್ಣವಾಗಿ ಸಿಗಲಿ : ಎಂ.ಎನ್. ಕುಕನೂರ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಜ.13: ಕುಕನೂರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯನ್ನುಉದ್ದೇಶಿಸಿ ಎಂಎಂಕುಕನೂರುಮಾತನಾಡುತ್ತಾ ರೈತರಿಗೆ ಸಿಗುವ ಸೌಲಭ್ಯವನ್ನು ಸಂಪೂರ್ಣವಾಗಿ ಜಾಗೃತಿ ಮೂಡಿಸುವ ಅವಶ್ಯಕತೆ ಇದ್ದು ಇದಕ್ಕೆಕೃಷಿಮತ್ತುತೋಟಗಾರಿಕಾ ಇಲಾಖೆಯ ಅಧಿಕಾರಿಗಳು ಕಾರ್ಯಗತರಾಗಬೇಕು ಹಾಗೂ ಇಲಾಖೆಯ ಕೃಷಿ ಸಂಜೀವಿನಿ ವಾಹನ ಹೆಸರಿಗಷ್ಟೇ ಇದ್ದು ವಾಹನದಿಂದ ಪ್ರತಿ ಗ್ರಾಮೀಣ ಪ್ರದೇಶಕ್ಕೆ ಹೋಗಿ ರೈತರಿಗೆ ಸಿಗುವ ಸೌಲಭ್ಯಗಳನ್ನು ಜಾಗೃತಿ ಮೂಡಿಸುವ ಮೂಲಕ ರೈತರಿಗೆ ತಿಳಿಯಪಡಿಸಬೇಕೆಂದು ವಿಲಾಸ ಹಾಗೂ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದರು. ಕೇವಲ ರೈತರಿಗೆ ಮಾತ್ರವಲ್ಲದೆ ಸ್ಥಳೀಯ ಸಮಸ್ಯೆಗಳ ಮೇಲೆ ಬೆಳಕು ಚೆಲುವ ಉದ್ದೇಶವನ್ನು ಸಂಘ ಹೊಂದಿದ್ದು ಅದರೊಂದಿಗೆ ಸರ್ಕಾರದಿಂದ ಜಮೀನಿನಲ್ಲಿ ಕೆಲಸ ಮಾಡುವಾಗ ಮೃತಪಟ್ಟ ರೈತರಿಗೆ 1 ಲಕ್ಷ ಹಾಗೂ ಗಳಿಗೆ ಐವತ್ತು ಸಾವಿರ ರೂಪಾಯಿಗಳ ಪರಿಹಾರವನ್ನು ಸರ್ಕಾರ ಘೋಷಿಸಬೇಕು. ಸರ್ಕಾರದ ಖಾಸಗಿ ನೀತಿಯಿಂದ ಕೃಷಿ ಉತ್ಪನ್ನ ಮಾರುಕಟ್ಟೆ, ಶಿಕ್ಷಣ, ವಿದ್ಯುತ್ ಸೇರಿದಂತೆ ಇನ್ನಿತರ ಇಲಾಖೆಗಳಿಂದ ಮಧ್ಯಮ ವರ್ಗದವರು ಅಂದರೆ ಅನುಭವಿಸುತ್ತಿದ್ದು ಖಾಸಗಿ ನೀತಿಯನ್ನು ಸರ್ಕಾರ ಕೂಡಲೇ ಕೈಬಿಡಬೇಕು. ದಿನ ಬಳಕೆಯ ಅವಶ್ಯಕತೆಗಳ ಧರ ಏರಿಕೆಯಿಂದ ದುರ್ಬಲ ವರ್ಗದವರು ತೊಂದರೆ ಅನುಭವಿಸುತ್ತಿದ್ದು ಸರ್ಕಾರ ಕೊಡಲೇ ಎಚ್ಚೆತ್ತುಕೊಂಡು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರವನ್ನು ಪತ್ತಾಯಿಸಿ ಸಂಬಂಧ ಪಟ್ಟ ಎಲ್ಲಾ ಇಲಾಖೆಗಳ ಮುಖಾಂತರ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕ್ರಾಂತಿಕಾರಿ ರೈತ ಸೇನಾ ಸಂಘಟನೆಯ ಪದಾಧಿಕಾರಿಗಳಾದ ರಾಜೇಶ ವಾಲ್ಮೀಕಿ, ಮಾಜಿದ್ ಖಾನ್ ಮುಲ್ಲಾ, ಪಿಂಡನಗೌಡ ಪಾಟೀಲ್,ಬಸವರಾಜ ಅಡವಿ, ಶರಣಪ್ಪ ಮೇಟಿ, ರಮೇಶ ಸಾಕಾಪುರ, ಬಸವರಾಜ ರೆಡ್ಡಿ ವಕ್ಕಳದ,ಮಂಗಳೇಶ ವಾಲ್ಮೀಕಿ, ಮಹಬೂಬ್ ಮಾಳೆಕೊಪ್ಪ, ಚಂದ್ರಕಾಂತ್ ಗುಡಿಮನಿ, ಮಂಜುನಾಥ ಕಟಗಿಹಳ್ಳಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

## ರೈಲು ಮಾರ್ಗ ಹೋರಾಟ ಸಮಿತಿಯಿಂದ ಲೋಕಾಯುಕ್ತರಿಗೆ ಮನವಿ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಕರ್ನಾಟಕ ರಾಜ್ಯದ ನಿಯೋಜಿತ ಆಲಮಟ್ಟಿ–ಯಾದಗಿರಿ ರೈಲು ಮಾರ್ಗವನ್ನು ಅನುಷ್ಠಾನಗೊಳಿಸುವಲ್ಲಿ ಸಹಕರಿಸಬೇಕೆಂದು ತಾಳಿಕೋಟಿ ರೈಲು ಮಾರ್ಗ ಹೋರಾಟ ಸಮಿತಿಯ ಪದಾಧಿಕಾರಿಗಳು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಇವರಿಗೆ ಮನವಿ ಪತ್ರ ಸಲ್ಲಿಸಿದರು. ಹೋರಾಟ ಸಮಿತಿಯ ಪದಾಧಿಕಾರಿಗಳು ಭಾನುವಾರ ಲೋಕಾಯುಕ್ತರ ಸ್ವಗ್ರಾಮ ಪಡೇಕನೂರದ ಅವರ ತೋಟದ ಮನೆಯಲ್ಲಿ ಭೇಟಿಯಾದರು. ಈ ಸಮಯದಲ್ಲಿ ಸಮಿತಿಯ ಸದಸ್ಯ ಶ್ರೀಕಾಂತ ಪತ್ತಾರ ಅವರು ಈ ರೈಲು ಮಾರ್ಗದ ಅಗತ್ಯ ಹಾಗೂ ಅದರ ಅನುಷ್ಠಾನಕ್ಕಾಗಿ ಇಲ್ಲಿವರೆಗೆ ನಡೆದು ಬಂದ ಹೋರಾಟದ ಕುರಿತು ಮಾನ್ಯ ಲೋಕಾಯುಕ್ತರಿಗೆ ವಿವರಗಳನ್ನು ನೀಡಿ ಸಹಕಾರಕ್ಕೆ ಮನವಿ ಮಾಡಿಕೊಂಡರು. ಮಾಹಿತಿ ಪಡೆದುಕೊಂಡ ನ್ಯಾಯಮೂರ್ತಿ ಲೋಕಾಯುಕ್ತ ಅವರು ನಾನು ಸಹ ಇದೇ ತಾಲೂಕಿನವನೆ ಆಗಿರುವುದರಿಂದ ಸಹಜವಾಗಿ ನನಗೂ ಇದರ ಅನುಷ್ಠಾನ ಕುರಿತು ಹೆಚ್ಚಿನ ಆಸಕ್ತಿ ಇದೆ ಏಕೆಂದರೆ ಇದೊಂದು ಸಾರ್ವಜನಿಕ ಕೆಲಸ ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ ಆದರೆ ನನಗೆ ನನ್ನದೇ ಆದ ಕೆಲವು ಇತಿಮಿತಿಗಳಿವೆ ಅದರ ವ್ಯಾಪ್ತಿಯಲ್ಲಿ ನನಗೆ ಕೆಲಸ ಮಾಡಬೇಕಾಗುತ್ತದೆ ಆದರೂ ಸಹ ನಾನು ಈ ನಿಟ್ಟಿನಲ್ಲಿ ಸಾಧ್ಯವಿದ್ದಷ್ಟು ಸಹಕರಿಸುತ್ತೇನೆ ಎಂದರು. ಈ ಸಮಯದಲ್ಲಿ ರೈಲು ಮಾರ್ಗ ಹೋರಾಟ ಸಮಿತಿಯ ಪದಾಧಿಕಾರಿಗಳಾದ ಆರ್.ಎಸ್.ಪಾಟೀಲ(ಕೂಚಬಾಳ), ಪ್ರಭುಗೌಡ ಮದರಕಲ್ಲ, ಆರ್.ವಿ.ಜಾಲವಾದಿ, ಮಹಾಂತೇಶ ಮುರಾಳ, ರಾಜು ಹಂಚಾಟೆ, ಪ್ರಕಾಶ್ ಹಜೇರಿ, ಇಬ್ರಾಹಿಂ ಮನ್ಸೂರ, ಸಂಗನಗೌಡ ಅಸ್ಕಿ, ರಾಘವೇಂದ್ರ ಚೌವಾಣ, ವೀರೇಶ ಕೋರಿ, ಶಫೀಕ ಇನಾಮದಾರ, ಈಶ್ವರ್ ಹೂಗಾರ, ಹಣಮಂತ ದಢವಳಗಿ, ವಿಠ್ಠಲ ಮೋಹಿತೆ, ಆಸೀಫ್ ಕೆಂಭಾವಿ, ರಾಘು ಮಾನೆ ಮತ್ತಿತರರು ಇದ್ದರು.

## ಜನರು ಸಕಾಲಕ್ಕೆ ಪಡೆದ ಸಾಲ ಹಿಂತಿರುಗಿಸಿದರೆ ಉಭಯೇತರರಿಗೆ ಒಳ್ಳೆಯದು: ಕರಂಜೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. :– ಜೈ ಗಜಾನನ ಸೌಹಾರ್ದ ಸಹಕಾರಿ ಬ್ಯಾಂಕ್ ಜನತೆಗೆ ಉತ್ತಮ ಸಾಲ ಸೌಲಭ್ಯ ಮತ್ತು ಬದುಕು ಹಸನಾಗುವ ನಿಟ್ಟಿನಲ್ಲಿ ಸಹಕಾರ ನೀಡಲಿ ಎಂದು ಸೌಹಾರ್ದ ಸಹಕಾರ ಬ್ಯಾಂಕ್‌ಗಳ ಸಂಘ ನಿರ್ದೇಶಕ ಜಗನ್ನಾಥ ಕರಂಜೆ ತಿಳಿಸಿದರು. ಬೀದರನ ಶಿವನಗರದಲ್ಲಿ ಜೈ ಗಜಾನನ ಸೌಹಾರ್ದ ಸಹಕಾರ ಬ್ಯಾಂಕ್‌ನ ಎರಡನೇ ಶಾಖೆ ಉದ್ಘಾಟಿಸಿ ಮಾತನಾಡಿದರು.

ಬ್ಯಾಂಕ್‌ನ ಸಂಸ್ಥಾಪಕ ಅಧ್ಯಕ್ಷ ವಿಜಯಕುಮಾರ ಶಿಂಧೆ ಜನತೆಗೆ ಉತ್ತಮ ಸೌಲಭ್ಯ ನೀಡುತ್ತಿದ್ದಾರೆ. ಇದರಿಂದ ಬಡವರ ಮತ್ತು ಮಹಿಳೆಯರ ಏಳ್ಗೆ ಸಾಧ್ಯವಾಗಲಿದೆ. ಸಹಕಾರ ಎಂದರೆ ಜನರ ಬದುಕು ಹಸನಾಗಬೇಕು. ಜನರು ಸಂತೃಪ್ತಿಯಿಂದ ಬದುಕಬೇಕು. ಈ ನಿಟ್ಟಿನಲ್ಲಿ ಸಹಕಾರ ಸೊಸೈಟಿ ಉತ್ತರೋತ್ತರವಾಗಿ ಬೆಳೆಯಲಿ. ಜನರೂ ಕೂಡಾ ಸಾಲ ಪಡೆದುಕೊಂಡು ಸಕಾಲಕ್ಕೆ ಹಿಂತಿರುಗಿಸಬೇಕು. ಹೀಗಾದಾಗ ಮಾತ್ರ ಸಹಕಾರಿ ಬ್ಯಾಂಕ್‌ಗಳು ಬೆಳೆಯಲು ಸಾಧ್ಯ. ಜನರೂ ಕೂಡಾ ಅಭಿವೃದ್ಧಿ ಹೊಂದಲು ಪೂರಕವಾಗುತ್ತದೆ. ಶಿಂಧೆಯವರ ಕಾರ್ಯ ಶ್ಲಾಘನೀಯ ಎಂದು ಕರಂಜೆ ತಿಳಿಸಿದರು. ಜೈ ಗಜಾನನ ಸೌಹಾರ್ದ ಸಹಕಾರಿ ಬ್ಯಾಂಕ್ ಸಂಸ್ಥಾಪಕ ಅಧ್ಯಕ್ಷ ವಿಜಯಕುಮಾರ ಶಿಂಧೆ ಮಾತನಾಡಿ ನಮ್ಮ ಬ್ಯಾಂಕ್ 2018ರಲ್ಲಿ ಆರಂಭಗೊಂಡು ನಿರಂತರವಾಗಿ ಮುನ್ನಡೆ ಸಾಧಿಸುತ್ತಿದೆ. ಇದುವರೆಗೆ ಒಂದು ಕೋಟಿಗೂ ಅಧಿಕ ನಿವ್ವಳ ಲಾಭ ಕಳೆದ ಏಳು ವರ್ಷಗಳಲ್ಲಿ ಆಗಿದೆ. ಠೇವಣಿದಾರರಿಗೆ ಒಂದು ವರ್ಷಕ್ಕೆ 12% ಬಡ್ಡಿ ನೀಡಲಾಗುತ್ತಿದೆ. ಮಹಿಳೆಯರಿಗೆ 12.5% ಪ್ರತಿಶತ ಹೆಚ್ಚುವರಿ ಬಡ್ಡಿ ನೀಡಲಾಗುತ್ತಿದೆ. 6 ವರ್ಷಕ್ಕೆ ಹಣ ದ್ವಿಗುಣಗೊಳಿಸಲಾಗುವುದು. 9 ವರ್ಷಕ್ಕೆ ತ್ರಿಗುಣಗೊಳಿಸಲಾಗುತ್ತಿದೆ. ಇಲ್ಲಿ ಗೋಲ್ಡ್ ಲೋನ್ ಕೂಡ ನೀಡಲಾಗುತ್ತಿದೆ. ಇಲ್ಲಿ ಉತ್ತಮ ಸೌಲಭ್ಯಗಳಿದ್ದು, ನಿರ್ಭಯದಿಂದ ಜನರು ನಮ್ಮ ಸೊಸೈಟಿ ಜೊತೆ ವ್ಯವಹಾರ ಮಾಡಬಹುದು. ನಮ್ಮ ಮೂರನೇ ಶಾಖೆ ಬಸವಕಲ್ಯಾಣದಲ್ಲಿ ಆರಂಭಿಸಲಿದ್ದೇವೆ. ಇದು ಎರಡನೇ ಶಾಖೆಯಾಗಿದೆ ಎಂದು ಶಿಂಧೆ ತಿಳಿಸಿದರು. ಇದೇ ವೇಳೆ ವೇದಿಕೆ ಮೇಲೆ ನಗರಸಭೆ ಸದಸ್ಯ ರಾಜು ಚಿಂತಾಮಣಿ, ಸತ್ಯಂ ಸಂಸ್ಥೆಯ ಅಧ್ಯಕ್ಷ ಶಿವಾಜಿರಾವ ಭೋಸ್ಲೆ, ವಕೀಲರಾದ ವಾಡೇಕರ್ ದಸವಂತರಾವ, ಪಿಎಸ್ಐ ಪ್ರಭಾಕರ್ ಪಾಟೀಲ, ವೈಜಿನಾಥ ಉಪ್ಪಿನ್, ಸಂಜುಕುಮಾರ ಪಾಟೀಲ, ಸೌಹಾರ್ದ ಸಹಕಾರಿ ಬ್ಯಾಂಕ್ ಅಭಿವೃದ್ಧಿ ಅಧಿಕಾರಿ ವೀರಶೆಟ್ಟಿ, ಅರುಣಾ ಶಿಂಧೆ, ಅಪರ್ಣಾ, ಸಂಜೀವಕುಮಾರ ಕನಕೇರಿ, ವಿಜಯ್ ಬಿರಾದಾರ, ಬಾಬುರಾವ ಇಂಚೂರೆ, ಶಿವಾಜಿರಾವ ಜಗತಾಪ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.


## ಹೆಸರು ಬದಲಾವಣೆ ಹಾಗೂ ಜನ್ಮ ದಿನಾಂಕ ಘೋಷಣೆ

ಬೀದರ ಜಿಲ್ಲೆ ಭಾಲ್ಕಿ ತಾಲ್ಲೂಕಿನ ನೇಳಗಿ ಗ್ರಾಮದ ಶ್ರೀ ಅಂಬೃತರಾವ್ ಮಹಾರುದ್ರಪ್ಪ ಕಾರಬಾರಿಯವರ ಮಗಳಾದ ಜಯದೇವಿ ಆದ ನಾನು ನನ್ನ ಹೆಸರು ಮತ್ತು ಜನ್ಮದಿನಾಂಕದ ಬಗ್ಗೆ ಈ ಕೆಳಗಿನಂತೆ ನೋಟರಿಯವರ ಸಮ್ಮುಖದಲ್ಲಿ ಘೋಷಣೆ ಮಾಡಿಕೊಂಡಿರುತ್ತೇನೆ.

ನಾನು 1979ರಲ್ಲಿ ಹುಮನಾಬಾದ ತಾಲ್ಲೂಕಿನ ಹುಡಗಿ ಗ್ರಾಮದ ಮಾಣಿಕಪ್ಪ ತಂದೆ ಬಸಪ್ಪ ಮಾಶೆಟ್ಟಿ ಎಂಬುವವರೊಂದಿಗೆ ಮದುವೆ ಆದಾಗ ನನ್ನ ಮೂಲ ಹೆಸರು ಜಯದೇವಿ ಎಂಬುದರ ಬದಲಿಗೆ ಶಾಂತಾಬಾಯಿ ಗಂಡ ಮಾಣಿಕಪ್ಪ ಮಾಶೆಟ್ಟಿ ಎಂದು ಬದಲಾಯಿಸಿಕೊಂಡಿರುತ್ತೇನೆ. ಸರ್ಕಾರಿ ಪ್ರಾಥಮಿಕ ಶಾಲೆ ಜಾಂತಿ ತಾಲ್ಲೂಕು ಭಾಲ್ಕಿಯ ದಾಖಲೆಗಳ ಪ್ರಕಾರ ನನ್ನ ಜನ್ಮ ದಿನಾಂಕ 21–07–1962 ಆಗಿದ್ದು, (ಜುಲೈ ಇಪ್ಪತ್ತೊಂದನೇ ತಾರೀಖು ಸಾವಿರದ ಒಂಭೈನೂರಾ ಆರವತ್ತೆರಡು) 62 ವರ್ಷ ವಯಸ್ಸಿನವಳಾಗಿರುತ್ತೇನೆ.

ಸ್ಥಳ:ಹುಮನಾಬಾದ
ದಿನಾಂಕ:13–1–2025

ಸಹಿ/–ಶಂತಾಬಾಯಿ
ಅಫಿಡೆವಿಟ್ ಹೇಳಿಕೆ
ಘೋಷಿಸಿಕೊಂಡವರ ಸಹಿ


## ಸ್ವಾಮಿ ವಿವೇಕಾನಂದರ ತತ್ವ ಚಿಂತನೆಗಳು ಹಾಗೂ ವಿಚಾರಧಾರೆಗಳು ಇಂದಿನ ಯುವಕರು ಅಳವಡಿಸಿಕೊಳ್ಳಲು ಮಹಾದೇವಯ್ಯ ಕರದಳ್ಳಿ ಕರೆ




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜನವರಿ 12–ಸ್ವಾಮಿ ವಿವೇಕಾನಂದ ಅವರ ತತ್ವಚಿಂತನೆಗಳು ಹಾಗೂ ವಿಚಾರಧಾರೆಗಳನ್ನು ಇಂದಿನ ಯುವಕರು ಜೀವನದಲ್ಲಿ ಅಳವಡಿಸಿಕೊಳ್ಳಲು ನಿವೃತ್ತ ಕೆನಾರ ಬ್ಯಾಂಕಿನ ಅಧಿಕಾರಿ ಮಹಾದೇವಯ್ಯ ಕರದಳ್ಳಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಭಾನುವಾರದಂದು ಜಿಲ್ಲಾಡಳತ, ಜಿಲ್ಲಾ ಪಂಚಾಯತ, ಯುವಸಬಲೀಕರಣ ಶಿಕ್ಷಣ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆ ಹಾಗೂ ರಾಮಕೃಷ್ಣ ವಿವೇಕಾನಂದಾಶ್ರಮದ ಸಂಯುಕ್ತ ಆಶ್ರಯದಲ್ಲಿ 162 ನೇ ಸ್ವಾಮಿ ವಿವೇಕಾನಂದರ ಜಯಂತಿಯಲ್ಲಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು.

.ಸ್ವಾಮಿ ವಿವೇಕಾನಂದರ ನಿಜವಾದ ಕನಸು ಸಮೃದ್ಧ ಭಾರತ ಸಶಕ್ತ ಭಾರತ, ವಿಶ್ವಗುರು ಭಾರತವಾಗಿತ್ತು ಶತಶತಮಾನಗಳ ನಂತರವೂ ಇಂದಿಗೂ ಯುವಕರ ಕಣ್ಮಣಿಯಾಗಿದ್ದ ಸ್ವಾಮೀಜಿಯವರ ಯುವಮನದಿಂದ ಅಶಕ್ತ ದುರ್ಬಲ ವಿಚಾರಗಳನ್ನು ತೆಗೆದುಹಾಕಲು, ಅವುಗಳ ಜಾಗದಲ್ಲಿ ರಚನಾತ್ಮಕ ಹಾಗೂ ಆಶಾಕಿರಣಗಳನ್ನು ಸೃಷ್ಟಿಸಲು ಯೋಗ ದ್ಯಾನ್ಯ ಮಾಡಲು ಒತ್ತಾಯಿಸಿದ್ದರು

ವಿವೇಕಾನಂದರು ಸಾಮಾಜಿಕ ಸುಧಾರಣೆ ಮತ್ತು ಯುವ ಸಬಲೀಕರಣ ತಿಳುವಳಿಕೆ ಹೊಂದಿದ್ದರು. ಅವರು ವ್ಯಾಪಕವಾಗಿ ಪ್ರಯಾಣಿಸಿದರು ಶಕ್ತಿಯುತ ಉಪನ್ಯಾಸಗಳನ್ನು ನೀಡಿದರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು ಎಂದು ಸಂಕ್ಷಿಪ್ತ ಮಾಹಿತಿ ನೀಡಿದರು.

ವಿವಿಧ ಶಾಲೆಗಳಿಂದ ವಿವೇಕನಾಂದ ವೇಷಧಾರಿ ಮಕ್ಕಳಿಂದ ಹಾಗೂ ಗಣ್ಯರಿಂದ ಸ್ವಾಮಿ ವಿವೇಕಾನಂದ ಜಯಂತಿಯನ್ನು ಉದ್ಘಾಟಿಸಿದರು

ಕಲಬುರಗಿ ಸ್ವಾಮಿ ವಿವೇಕಾನಂದ ಆಶ್ರಮದ ಅಧ್ಯಕ್ಷ್ಯರಾದ ಪರಮ್ಮಪೂಜ್ಯ ಶ್ರೀ ಮಹೇಶ್ವರನಂದ ಮಹಾರಾಜ್ ಅವರು ದಿವ್ಯ ಸಾನಿಧ್ಯವಹಿಸಿ ಮಾತನಾಡಿ, ವಿವೇಕಾನಂದರು ತತ್ವಚಿಂತನೆಗಳನ್ನು ತಿಳಿಸಿದರು. ಎಲ್ಲಾ ಸ್ವತಂತ್ರ ಹೋರಾಟಗಾರರಿಗೆ ಸ್ಫೂರ್ತಿಯಾಗಿದೆ ಬಗೆ ಹಾಗೂ ವಿವೇಕಾನಂದರ ಸಾಧನೆಗಳನ್ನು ರಾಮಕೃಷ್ಣರ ಮೇಲಿನ ಭಕ್ತಿಯನ್ನು ತಿಳಿಸಿದರು.

ಏಳು ಮೇಲೇಳು ಏಳು ಸಾಧುವೆ ಹಾಡುಚಾಗಿ ಹಾಡನ್ನು ಎಂಬ ಸನ್ಯಾಸಿ ಗೀತೆಗಳ ಮೂಲಕ ಅವರ ವ್ಯಕ್ತಿತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ರಾಜ್ಯ ಯುವ ಪ್ರಶಸ್ತಿ ಪುರಸ್ಕೃತರಾದ ಬಸವರಾಜ ಸಿ ತೋಟದ ಮಾತನಾಡುತ್ತ, ಸ್ವಾಮಿ ವಿವೇಕಾನಂದರು ಒಂದು ಮಾತು ಹೇಳಿದರು. ಯುವಕ ಯುವತಿಯರೆ ಎಳಿ ಎದ್ದೇಳಿ ನಿಮ್ಮ ಗುರಿ ಮುಟ್ಟುವ ತನಕ ಆ ಸಂದೇವು ನಮ್ಮ ಯುವಕ ಯುವತಿಯರು ಅವರ ತತ್ವ ಆದರ್ಶದ ಮೇಲೆ ಮುಂದೆ ಸಾಗಿದರೆ. ನಿಮ್ಮ ಭವಿಷ್ಯವು ಉಜ್ವಲವಾಗುತ್ತದೆ. ಇಂದಿನ ಯುವಕ ಯುವತಿರೆ ದೇಶದ ಆಸ್ತಿ ಹಾಗೂ ದೇಶ ಕಟ್ಟುವ ಸಾಮರ್ಥ್ಯ ನಿಮ್ಮಿಂದ ಮಾತ್ರ ಸಾಧ್ಯ ಎಂದು ನುಡಿದರು.

ಶಾಲಾ ಶಿಕ್ಷಣ ಇಲಾಖೆ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ, ರಾಜಶೇಖರ ಗೋನಾಯಕ ಮಾತನಾಡಿದರು

ಇದಕ್ಕೂ ಮುನ್ನ ಸ್ವಾಮಿ ವಿವೇಕಾನಂದರ ಯುವ ಸಪ್ತಾಹ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಸ್ವಾಮಿ ವಿವೇಕಾನಂದ ಆಶ್ರಮ ಇವುರಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಸ್ವಾಮಿ ವಿವೇಕಾನಂದ ಆಶ್ರಮ ಇವುಗಳ ಸಂಯುಕ್ತಾಶ್ರಯದಲ್ಲಿ ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮ ಪ್ರಭು ಪಾಟೀಲ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಚಾಲನೆ ನೀಡಿದರು. ರಾಮಕೃಷ್ಣ ವಿವೇಕಾನಂದ ಆಶ್ರಮದ ಪರಂಪೂಜ್ಯ ಸ್ವಾಮಿ, ಮಹೇಶ್ವರನಂದ, ಮಹಾರಾಜ್, ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಬಸವರಾಜ್ ಸಿ ತೋಟದ ಯುವ ಸಬಲೀಕರಣ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಅಮೃತ್ ಎನ್. ಅಷ್ಟಗಿ ಸೇರಿದಂತೆ ಶಾಲೆಯ ಮಕ್ಕಳು ಭಾಗವಹಿಸಿದ್ದರು.

ವೇದಿಕೆ ಮೇಲೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಕಿ ತರಬೇತುದಾರ ಸಂಜಯ ಬಾಣದ್ ಸೇರಿದಂತೆ ಸರ್ಕಾರಿ ಅರೆ ಸರ್ಕಾರಿ ವಿವಿಧ ಶಾಲಾ ಕಾಲೇಜಿನ ಮಕ್ಕಳು ಹಾಗೂ ವಸತಿ ನಿಲಯಗಳ ವಿದ್ಯಾರ್ಥಿಗಳು ಮಿನಿ ವಿಧಾನಸೌಧದಿಂದ ಮೆರವಣಿಗೆಯು ಅನ್ನಪೂರ್ಣ ಕ್ರಾಸ್, ಆರ್.ಟಿ.ಓ. ಕ್ರಾಸ ಮೂಲಕ ಸ್ವಾಮಿ ವಿವೇಕಾನಂದರ ಆಶ್ರಮದಲ್ಲಿ ಕೊನಗೊಂಡಿತು.

ಕಾರ್ಯಕ್ರಮವನ್ನು ವಿವೇಕನಾಂದ ವಿದ್ಯಾಪೀಠ ತಡೆ ತೆಗ್ಗನೂರು ಮುಖ್ಯಗುರುಗಳಾದ ಪಾಂಡುರಂಗ ಕಾರ್ಯಕ್ರಮವನ್ನು ನಿರೂಪಿಸಿದರು.

## ಕ್ರೀಡಾ ನಿಲಯಗಳಿಗೆ ಕ್ರೀಡಾಪಟುಗಳನ್ನು ಆಯ್ಕೆ ಮಾಡಲು ದೈಹಿಕ ಪರೀಕ್ಷೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜ.12–2025–26ನೇ ಸಾಲಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ಶಾಲೆ, ಕ್ರೀಡಾ ನಿಲಯಗಳಿಗೆ ಕ್ರೀಡಾಪಟುಗಳನ್ನು ಆಯ್ಕೆ ಮಾಡಲು ಪ್ರತಿಭಾವಂತ ಕ್ರೀಡಾಪಟುಗಳ ದೈಹಿಕ ಪರೀಕ್ಷೆಯನ್ನು ಆಯಾ ತಾಲ್ಲೂಕಿನ ಸ್ಥಳಗಳಲ್ಲಿ ಈ ಕೆಳಕಂಡ ದಿನಾಂಕಗಳಂದು ಪ್ರತಿದಿನ ಬೆಳಿಗ್ಗೆ 9 ಗಂಟೆಯಿಂದ ಆಯೋಜಿಸಲಾಗಿದೆ ಎಂದು ಕಲಬುರಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

4ನೇ ತರಗತಿ ಓದುತ್ತಿರುವ ಕ್ರೀಡಾಪಟುಗಳಿಗೆ (ಅಥ್ಲೇಟಿಕ್ಸ್ ಮತ್ತು ಹಾಕಿ) ಹಾಗೂ 7ನೇ ಮತ್ತು 10ನೇ ತರಗತಿಯಲ್ಲಿ ಓದುತ್ತಿರುವ ಕ್ರೀಡಾಪಟುಗಳಿಗೆ (ಅಥ್ಲೇಟಿಕ್ಸ್, ಹಾಕಿ, ಬಾಸ್ಕೇಟ್‌ಬಾಲ್, ವಾಲಿಬಾಲ್, ಕುಸ್ತಿ, ಜುಡೋ, ಫುಟಬಾಲ್ (ಬಾಲಕರಿಗೆ ಮಾತ್ರ), ಜಿಮ್ನಾಸ್ಟಿಕ್ಸ್ ಆಯೋಜಿಸಲಾಗಿದೆ.

ಕಿರಿಯರ ವಿಭಾಗ: ಪ್ರಸ್ತುತ 4ನೇ ತರಗತಿಯಲ್ಲಿ ಓದುತ್ತಿರುವ ಹಾಗೂ 01–06–2014ರ ನಂತರ ಜನಿಸಿದ ಬಾಲಕ/ಬಾಲಕಿಯರಿಗೆ ಭಾಗವಹಿಸಲು ಅವಕಾಶವಿದೆ. ಕಿರಿಯರ ವಿಭಾಗ: ಪ್ರಸ್ತುತ 7 ನೇ ತರಗತಿಯಲ್ಲಿ ಓದುತ್ತಿರುವ ಹಾಗೂ 01–06–2011ರ ನಂತರ ಜನಿಸಿದ ಬಾಲಕ/ಬಾಲಕಿಯರಿಗೆ ಭಾಗವಹಿಸಲು ಅವಕಾಶವಿದೆ.. ಹಿರಿಯರ ವಿಭಾಗ: ಪ್ರಸ್ತುತ 10 ನೇ ತರಗತಿಯಲ್ಲಿ ಓದುತ್ತಿರುವ ಹಾಗೂ 01–06–2007ರ ನಂತರ ಜನಿಸಿದ ಯುವಕ/ಯುವತಿಯರಿಗೆ ಭಾಗವಹಿಸಲು ಅವಕಾಶ ಇರುತ್ತದೆ.

ಜನವರಿ 16 ರಂದು: ಅಫಜಲಪೂರ ತಾಲ್ಲೂಕು ಕ್ರೀಡಾಂಗಣ, ಯಡ್ರಾಮಿ ಕರ್ನಾಟಕ ಪ್ರಾಥಮಿಕ ಪಬ್ಲಿಕ್ ಶಾಲೆ, ಶಹಾಬಾದ ರೈಲ್ವೆ ಮೈದಾನದ ಬಾಲ ವಿದ್ಯಾಮಂದಿರ, ಕಾಳಗಿ ತಾಲೂಕಿಗೆ ಸಂಬಂಧಿಸಿದಂತೆ ಕೋಡ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ. ಜನವರಿ 17 ರಂದು: ಸೇಡಂ ತಾಲ್ಲೂಕು ಕ್ರೀಡಾಂಗಣ, ಆಳಂದ ತಾಲ್ಲೂಕು ಕ್ರೀಡಾಂಗಣ, ಜೇವರ್ಗಿ ತಾಲ್ಲೂಕು ಕ್ರೀಡಾಂಗಣ, ಚಿತ್ತಾಪೂರ ತಾಲ್ಲೂಕು ಕ್ರೀಡಾಂಗಣ. ಜನವರಿ 18 ರಂದು: ಚಿಂಚೋಳಿ ತಾಲೂಕು ಕ್ರೀಡಾಂಗಣ, ಕಮಲಾಪೂರ ತಾಲೂಕಿಗೆ ಸಂಬಂಧಿಸಿದಂತೆ ಮಹಾಗಾಂವ ಸರ್ಕಾರಿ ಪ್ರೌಢ ಶಾಲೆ ಹಾಗೂ ಕಲಬುರಗಿ ತಾಲೂಕಿಗೆ ಸಂಬಂಧಿಸಿದಂತೆ ಕಲಬುರಗಿ ಜಿಲ್ಲಾ ತಾಲೂಕು ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ಜರುಗಲಿದೆ. ಅದೇ ರೀತಿ ಕಲಬುರಗಿ ಜಿಲ್ಲಾ ಮಟ್ಟದ ಆಯ್ಕೆ ಪ್ರಕ್ರಿಯೆಯು ಜನವರಿ 20 ರಂದು ಬೆಳಿಗ್ಗೆ 9 ಗಂಟೆಗೆ ಕಲಬುರಗಿ ಚಂದ್ರಶೇಖರ ಪಾಟೀಲ್ ಜಿಲ್ಲಾ ಕ್ರೀಡಾಂಗಣದಲ್ಲಿ ಜರುಗಲಿದೆ.

ರಾಜ್ಯ ಮಟ್ಟದ ಕಿರಿಯರ ವಿಭಾಗದ ಆಯ್ಕೆ ಪ್ರಕ್ರಿಯೆಯು ಜನವರಿ 23 ರಂದು ಮತ್ತು ಹಿರಿಯರ ವಿಭಾಗದ ಆಯ್ಕೆ ಪ್ರಕ್ರಿಯೆಯು ಜನವರಿ 24 ರಂದು ಬೆಳಿಗ್ಗೆ 9 ಗಂಟೆಯಿಂದ ಕಲಬುರಗಿಯ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣ ಆಯೋಜಿಸಲಾಗಿದ್ದು, ಅರ್ಹ ಅಭ್ಯರ್ಥಿಗಳು ಸಂಬಂಧಪಟ್ಟ ಆಯಾ ತಾಲೂಕು ಆಯ್ಕೆ ಸ್ಥಳದಿಂದ ನಿಗದಿತ ಅರ್ಜಿ ನಮೂನೆಯನ್ನು ಪಡೆದು ಭರ್ತಿ ಮಾಡಿ ಅವಶ್ಯಕ ದಾಖಲೆಗಳೊಂದಿಗೆ 2025ರ ಜನವರಿ 21 ರ ಸಂಜೆ 5 ಗಂಟೆಯೊಳಗಾಗಿ ಕಲಬುರಗಿ ನಗರದ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಅರ್ಜಿ ಸಲ್ಲಿಸಬೇಕು. ಕ್ರೀಡೆಗಳ ಆಯ್ಕೆಯಲ್ಲಿ ಅಭ್ಯರ್ಥಿಗಳು ನೇರವಾಗಿ ಭಾಗವಹಿಸಬಹುದಾಗಿದ್ದು, ಭಾಗವಹಿಸುವ ಕ್ರೀಡಾಪಟುಗಳಿಗೆ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ನೀಡಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಕಲಬುರಗಿ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯನ್ನು, ಹಾಕಿ ತರಬೇತಿದಾರ ಸಂಜಯ ಬಾಣದ ಇವರ ಮೊಬೈಲ್ ಸಂಖ್ಯೆ 9844029235 ಸಂಪರ್ಕಿಸಬೇಕು.

ತಾಲೂಕುವಾರು ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆಗಳ ವಿವರ ಇಂತಿದೆ. ಅಫಜಲಪೂರ–9880888390, 9900636909.ಯಡ್ರಾಮಿ–9535666606, 9986126603, 9611633453. ಶಹಾಬಾದ–9945230160, 9844029235.ಕಾಳಗಿ–9945750794, 9916168125.ಸೇಡಂ–9986126603, 9742391941, 6362124066. ಆಳಂದ–9008765003, 9900636909, 9902655631. ಜೇವರ್ಗಿ–9535666606,8884774416. ಚಿತ್ತಾಪೂರ–9945230160,9844029235. ಚಿಂಚೋಳಿ–9945750794, 9742391941, 9972083418. ಕಮಲಾಪುರ–8884774416, 9986126603, 9880465181. ಕಲಬುರಗಿ–9844029235, 9880888390. ಜಿಲ್ಲಾ ಮಟ್ಟ ಆಯ್ಕೆ ಕಲಬುರಗಿ–9844029235, 9986126603 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

## ಸ್ವಾಮಿ ವಿವೇಕಾನಂದರ ವಿಚಾರಗಳು ಯುವಕರಿಗೆ ಸ್ಫೂರ್ತಿ ಶಿರವಾಳ



ಮಲ್ಲಮ್ಮ ನುಡಿ ವಾರ್ತೆ

ಶಹಾಪೂರ : ಕರ್ನಾಟಕ ಕಾರ್ಮಿಕ ಹಿತ ರಕ್ಷಣಾ ಸಂಘ (ರಿ) ವತಿಯಿಂದ ಶಹಾಪುರ ನಗರದ ಶ್ರೀ ಸ್ವಾಮಿ ವಿವೇಕಾನಂದ ಶಾಲೆಯಲ್ಲಿ ಹಮ್ಮಿಕೊಂಡ ಸ್ವಾಮಿ ವಿವೇಕಾನಂದರ 142ನೇ ಜಯಂತೋತ್ಸವ ಹಾಗೂ ಕಲ್ಯಾಣ ಕರ್ನಾಟಕ ಕಾರ್ಮಿಕ ಹಿತರಕ್ಷಣಾ ಸಂಘದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು ಈ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದ ಪರಮಪೂಜ್ಯರಾದ ಶ್ರೀ ಶಿವಲಿಂಗ ಮಹಾ ಶರಣರು ಕೈಲಾಸ ಆಶ್ರಮ ಹೋತಪೇಠ ಅವರು ಮಾತನಾಡಿ ಸ್ವಾಮಿ ವಿವೇಕಾನಂದರ ಪೂರ್ವದ ಹೆಸರು (ನರೇಂದ್ರನಾಥ ದತ್ತ) ಇವರು 1863 ಜನವರಿ 12ರಂದು ಕೋಲ್ಕತ್ತಾದಲ್ಲಿ ಜನಸಿದರು ತಂದೆ ವಿಶ್ವನಾಥ ದತ್ತ ತಾಯಿ ಭುವನೇಶ್ವರಿ ದೇವಿ ಶ್ರೀ ರಾಮಕೃಷ್ಣ ಪರಮಹಂಸರ ಶಿಷ್ಯರಾದ ಮೇಲೆ ಸ್ವಾಮಿ ವಿವೇಕಾನಂದ ಎಂಬ ಹೆಸರನ್ನು ಪಡೆದರು ಕಲ್ಕತ್ತೆಯಾ ಸ್ಕಾಟಿಷ್ ಚರ್ಚ್ ಕಾಲೇಜಿನಲ್ಲಿ ತತ್ವಶಾಸ್ತ್ರ ಅಧ್ಯಯನ ಮಾಡಿದರು ಅದರಂತೆ ನೀವು ಕೂಡ ಬಾಲ್ಯದಲ್ಲಿ ಉನ್ನತ ಮಟ್ಟದ ವಿದ್ಯಾಭ್ಯಾಸ ಮಾಡಿ ತಂದೆ ತಾಯಿಗೆ. ನಾಡಿಗೆ ಒಳ್ಳೆಯ ಸ್ಫೂರ್ತಿದಾಯಕರಾಗಬೇಕೆಂದು ನುಡಿದರು ಅದೇ ಸಂದರ್ಭದಲ್ಲಿ ಶಹಾಪುರ ಉಪ ಖಜಾನೆ ಅಧಿಕಾರಿಗಳಾದ ಶ್ರೀ ಡಾ // ಮೋನಪ್ಪ ಶಿರವಾಳ ಅವರು ಮಾತನಾಡಿ ಸ್ವಾಮಿ ವಿವೇಕಾನಂದರು 1993ರಲ್ಲಿ ಚಿಕಾಗೋದಲ್ಲಿ ಧರ್ಮ ಸಂಸತ್ತಿನಲ್ಲಿ ಹಿಂದೂ ಧರ್ಮವನ್ನು ಪ್ರತಿನಿಧಿಸಿದರು ಈ ಬಗ್ಗೆ ಭಾರತದ ಅಜ್ಞಾತ ಸನ್ಯಾಸಿ ಇದ್ದಕ್ಕಿದ್ದಂತೆ ಪ್ರಸಿದ್ಧಿಗೆ ಬಂದರು. ಆ ದಿನ ಅವರನ್ನು ಆಧ್ಯಾತ್ಮಿಕ ಜಾಗೃತಿಗೆ ಗುರುತಿಸಲಾಯಿತು ಮತ್ತು ತಪಸ್ವಿ ಜೀವಶೈಲಿಯನ್ನು ಪ್ರಾರಂಭಿಸಿದರು ಎಂದು ನುಡಿದರು ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ್ ಗಂಧದಮಠ ಕಾರ್ಯಕ್ರಮ ಉದ್ಘಾಟಿಸಿದರು ಮತ್ತು ಡಾ ಬಸಣ್ಣಗೌಡ ಶಿವಂಗಿ ರವರು ಕ್ಯಾಲೆಂಡರ್ ಬಿಡುಗಡೆಗೊಳಿಸಿದರು ಅಧ್ಯಕ್ಷತೆಯನ್ನು ಸ್ವಾಮಿ ವಿವೇಕಾನಂದ ಶಾಲೆಯ ಮುಖ್ಯಸ್ಥರಾದ ಶರಣಗೌಡ ಪಾಟೀಲ್ ವಹಿಸಿದರು ಹಾಗೂ ಕಲ್ಯಾಣ ಕರ್ನಾಟಕ ಕಾರ್ಮಿಕ ಹಿತ ರಕ್ಷಣಾ ಸಂಘದ ಸಂಸ್ಥಾಪಕರಾದ ಮೌನೇಶಕ ರವರು ನೇತೃತ್ವ ವಹಿಸಿದರು ಅದೇ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ರಾಜು ಆನೆಗುಂದಿ. ಕೆಂಭಾವಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮಡಿವಾಳಪ್ಪ ಪಾಟೀಲ್ ಹೆಗ್ಗನದೊಡಿ. ಶರಣು ಕಾಡಂಗೇರ. ಬಸವರಾಜನಗನೂರು. ಚಾಂದಪಾಷ ವಡಗೇರ. ಸಾಬಣ್ಣ ಪೂರ್ಲೆ ಮಲ್ಲಿಕಾರ್ಜುನ್ ಮಳಿಕೇರಿ. ಘನತೆ ರಾಮುಸರ್ ಶಹಾಪುರ ಹಾಗೂ ಸಮೇತನರ ಶಾಲೆಯ ಮುಖ್ಯ ಗುರುಗಳಾದ ಮಲ್ಲಿಕಾರ್ಜುನ್ ಅವಂಟಿ ಹೊಸ ಶಿಕ್ಷಕರು ಮುದ್ದು ಮಕ್ಕಳು ಹಾಜರಿದ್ದರು.

## ವಿಜೃಂಭಣೆಯಿಂದ ಜರುಗಿದ ನೀಲಗಂಗಾಂಬಿಕಾ ದೇವಿ ಜಾತ್ರೆ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟೆ: ತಾಲ್ಲೂಕಿನ ಬಳಗಾನೂರ ಗ್ರಾಮದಲ್ಲಿ ವಿಶ್ವಗುರು ಬಸವಣ್ಣನವರ ಧರ್ಮಪತ್ನಿ ನೀಲಗಂಗಾಂಬಿಕಾ ದೇವಿಯ ಜಾತ್ರಾ ಮಹೋತ್ಸವವು ಸೋಮವಾರ ಸಂಜೆ ಭಕ್ತಿ, ಶ್ರದ್ಧೆ, ಸಡಗರಗಳಿಂದ ನೆರವೇರಿತು. ಜಾತ್ರಾ ಮಹೋತ್ಸವದಲ್ಲಿ ಭಕ್ತಾದಿಗಳು ತೇರಿಗೆ ಉತ್ತತ್ತಿ, ಬಾಳೆ, ಕಬ್ಬು ಎಸೆದು ಸಂಭ್ರಮಿಸಿದರು.

ರಥೋತ್ಸವದ ನಂತರ ಅಗ್ಗಿ ಹಾಯುವ ಕಾರ್ಯಕ್ರಮ, ಮದ್ದು ಸುಡುವುದು ಹಾಗೂ ದೀಪೋತ್ಸವ ಜರುಗಿತು. ರಥೋತ್ಸವದ ಮುನ್ನ ಕುದುರೆ ಕುಣಿತ ಗಮನ ಸೆಳೆಯಿತು.

ರಾತ್ರಿ ಗ್ರಾಮದ ಶ್ರೀ ನೀಲಗಂಗಾ ನಾಟ್ಯ ಸಂಘ ವತಿಯಿಂದ "ಸಾವು ತಂದ ಸೌಭಾಗ್ಯ ಅರ್ಥಾತ್ ಮಸಣ ಸೇರಿದ ಮಲ್ಲಿಗೆ ಹೂ" ನಾಟಕ ಪ್ರದರ್ಶನ ನಡೆಯಿತು.

ಪುರಾಣ ಮಂಗಲ, ಕುಂಭಮೇಳ: ಜಾತ್ರಾ ಉತ್ಸವದ ಅಂಗವಾಗಿ ಬೆಳಿಗ್ಗೆ ನೀಲಗಂಗಾಂಬಿಕಾ ದೇವಿ ಮೂರ್ತಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಪುಷ್ಪಾರ್ಚನೆ ಮಹಾಮಂಗಳಾರತಿ ನಡೆದವು. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸುಮಂಗಲೆಯರಿಂದ ಕುಂಭಮೇಳ ಹಾಗೂ ಬಸವಧ್ವಜ ಅಶ್ವದಳದೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಭಾನುವಾರ ನಡೆಯಿತು. ರಾತ್ರಿ ಮಾರೂತೇಶ್ವರ ಭಜನಾ ಮಂಡಳಿಯವರಿಂದ ಶಿವಭಜನೆ ಅನ್ನ ಸಂತರ್ಪಣೆ ಜರುಗಿತು.

ಬೃಹತ್ ರಕ್ತದಾನ ಶಿಬಿರ: ನೀಲಗಂಗಾ ಜಾತ್ರಾ ಕಮಿಟಿ ಹಾಗೂ ಕೊಣ್ಣೂರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಯೋಗದಲ್ಲಿ ಬೃಹತ್ ರಕ್ತದಾನ ಶಿಬಿರ ಜರುಗಿತು. ಕೊಣ್ಣೂರ ವೈದ್ಯಾಧಿಕಾರಿ ಡಾ.ಶ್ರೀಶೈಲ ಹುಕ್ಕೇರಿ ಇತರರು ಉಪಸ್ಥಿತರಿದ್ದರು

ಸಂಜೆ ಸಂತೆಕೆಲ್ಲೂರ ಘನಮಠ ಶಿವಯೋಗಿಗಳ ಪುರಾಣವು ಯಾದಗಿರಿ ಬೀಳಗಿಮಠದ ಪಂ.ಮಲ್ಲಿಕಾರ್ಜುನ ಸ್ವಾಮೀಜಿ ಅವರಿಂದ ಒಂದು ತಿಂಗಳ ಕಾಲ ನಡೆದು ಮಹಾಮಂಗಲವಾಯಿತು.

ಭಕ್ತಾದಿಗಳಿಗೆ ಮಹಾಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಬೃಹತ್ ಜಾನುವಾರು ಜಾತ್ರೆಗೆ ಚಾಲನೆ: ಜ.13 ರಿಂದ ಜ.17 ರವರೆಗೆ ನಡೆಯುವ ಬೃಹತ್ ಜಾನುವಾರ ಜಾತ್ರೆಗೆ ಚಾಲನೆ ದೊರೆಯಿತು.


ಜ.14 ರಂದು ಕನ್ನಡ ಜಾನಪದ ಪರಿಷತ್ತು ಬೆಂಗಳೂರು ಜಿಲ್ಲಾ ಘಟಕ ಮತ್ತು ತಾಲ್ಲೂಕು ಘಟಕಗಳ ಸಹಯೋಗದಲ್ಲಿ ಸಂಕ್ರಾಂತಿ ಜಾನಪದ ಉತ್ಸವವು ಬೆ.11.00 ಗಂಟೆಗೆ ಜರುಗಲಿದೆ.

## ರೈಲ್ವೆ ಖಾತೆಯ ರಾಜ್ಯ ಸಚಿವ ವಿ ಸೋಮಣ್ಣ ಅವರ ಕೊಪ್ಪಳ ಜಿಲ್ಲೆ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಲ ಶಕ್ತಿ ಮತ್ತು ರೈಲ್ವೆ ಖಾತೆ–ಯ ರಾಜ್ಯ ಸಚಿವರಾದ ವಿ.ಸೋಮಣ್ಣ ಅವರು ಜನವರಿ 14 ರಂದು ಕೊಪ್ಪಳ ಜಿಲ್ಲಾ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ಅಂದು ಬೆಳಿಗ್ಗೆ 6 ಗಂಟೆಗೆ ರೈಲ್ವೇ ಮೂಲಕ ಕೊಪ್ಪಳಕ್ಕೆ ಆಗಮಿಸುವರು. ನಂತರ ಬೆಳಿಗ್ಗೆ 9 ಗಂ–



ಟೆಗೆ ಶ್ರೀ ಗವಿಮಠಕ್ಕೆ ಭೇಟಿ ನೀಡುವರು. ಬೆಳಿಗ್ಗೆ 10.30ಕ್ಕೆ ಕೊಪ್ಪಳ ನಗರದ ಕುಷ್ಟಗಿ ರಸ್ತೆಯ ರೈಲ್ವೆ ಮೇಲ್ಸೇತುವೆ ಉದ್ಘಾಟನೆ ಕಾರ್ಯಕ್ರಮ ನೆರವೇರಿಸಿದ ಬಳಿಕ ಕೊಪ್ಪಳ ರೈಲು ನಿಲ್ದಾಣದಲ್ಲಿ ನಡೆಯುತ್ತಿರುವ ಅಮೃತ ಭಾರತ್ ಸ್ಟೇಷನ್ ಕಾಮಗಾರಿಯ ಪರಿಶೀಲನೆ ನಡೆಸಿ, ಅಂದು ಮಧ್ಯಾಹ್ನ 12 ಗಂಟೆಗೆ ಕೊಪ್ಪಳದಿಂದ ಬಾಗಲಕೋಟೆ ಜಿಲ್ಲೆಗೆ ಪ್ರಯಾಣ ಬೆಳಸುವರು ಎಂದು ರೈಲ್ವೆ ರಾಜ್ಯ ಸಚಿವರ ವಿಭಾಗೀಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗುರುಕುಲ ಗೋಲ್ಡನ್ ಸ್ಕಾಲರ್‌ಶಿಪ್ 2ನೇ ಹಂತದ ಪ್ರವೇಶ ಪರೀಕ್ಷೆ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜ.13: ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲದಲ್ಲಿ ಭಾನುವಾರ ಗುರುಕುಲಗೋಲ್ಡನ್‌ಸ್ಕಾಲರ್‌ಶಿಪ್ ಎರಡನೇ ಹಂತದ ಪ್ರವೇಶ ಪರೀಕ್ಷೆ ನಡೆಯಿತು.

ಸ್ಕಾಲರ್‌ಶಿಪ್ ಪ್ರವೇಶ ಪರೀಕ್ಷೆ ನೋಂದಣಿ 10 ಸಾವಿರ ದಾಟಿದೆ. ಅದರಲ್ಲಿ ಎರಡನೆಯ ಹಂತದ ಪ್ರವೇಶ ಪರೀಕ್ಷೆಗೆ 2900 ವಿದ್ಯಾರ್ಥಿಗಳು ನೋಂದಣಿ ಮಾಡಿಸಿದ್ದರು. ಆ ಪೈಕಿ 2188 ವಿದ್ಯಾರ್ಥಿಗಳು ಪರೀಕ್ಷೆ ಹಾಜರಾಗಿದ್ದರು.


ಹತ್ತನೆಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕದ 20ಕ್ಕೂ ಅಧಿಕ ಜಿಲ್ಲೆ ಸೇರಿ ನೆರೆಯ ಮಹಾರಾಷ್ಟ್ರದ ಲಾತೂರು, ನಾಂದೇಡ, ಪರಳಿ, ತೆಲಂಗಾಣ ರಾಜ್ಯದ ನಾರಾಯಣ ಖೇಡ ಸೇರಿದಂತೆ ಮುಂತಾದ ಕಡೆಗಳಿಂದ ವಿದ್ಯಾರ್ಥಿಗಳು ಆಗಮಿಸಿ ಪರೀಕ್ಷೆ ಬರೆದಿದ್ದರು.

ಪ್ರವೇಶ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆಯುವ 25 ವಿದ್ಯಾರ್ಥಿಗಳಿಗೆ ಉಚಿತ ಎರಡು ವರ್ಷ ಪಿಯುಸಿ ಶಿಕ್ಷಣ, ವಸತಿ ಮತ್ತು ಸ್ಪರ್ಧಾತ್ಮಕ ತರಬೇತಿ ನೀಡಲಾಗುತ್ತದೆ. ನಂತರದಲ್ಲಿ ಕ್ರಮವಾಗಿ ಅಂಕ ಪಡೆಯುವ 75 ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಮತ್ತು ಸ್ಪರ್ಧಾತ್ಮಕ ತರಬೇತಿ ನೀಡಲು ಸಂಸ್ಥೆ ನಿರ್ಧರಿಸಿದೆ.

**ಶುಭ ಹಾರೈಕೆ :**

ಎರಡನೇ ಹಂತದಲ್ಲಿ ಪ್ರವೇಶ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಿಗೆ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಶುಭ ಹಾರೈಸಿದರು. ಎಲ್ಲ ಪರೀಕ್ಷೆ ಕೊಠಡಿಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಧೈರ್ಯದಿಂದ ಪರೀಕ್ಷೆ ಬರೆದು ಗೋಲ್ಡನ್ ಸ್ಕಾಲರ್ ಶಿಪ್ ಪ್ರವೇಶ ಪರೀಕ್ಷೆಯ ಸದುಪಯೋಗ ಪಡೆದು ಕೊಳ್ಳುವಂತೆ ಸಲಹೆ ನೀಡಿದರು. ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ, ಆಡಳಿತಾಧಿಕಾರಿ ಮೋಹನ ರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ, ಉಪಪ್ರಾಚಾರ್ಯ ಸಿದ್ರಾಮ ಗೊಗ್ಗಾ ಹಾಜರಿದ್ದರು.

# ಜ.19 ಮಹಾಯೋಗಿ ವೇಮನ ಜಯಂತಿ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.13:ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜನೇವರಿ 19 ರಂದು ನವನಗರದ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 9.30ಕ್ಕೆ ಮಹಾಯೋಗಿ ವೇಮನರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಲಾಗುವುದು. ಜಿಲ್ಲಾಡಳಿತ ಭವನದಿಂದ ಅಂಬೇಡ್ಕರ ಭವನದವರೆಗೆ ಮೆರವಣಿಗೆ ನಡೆಯಲಿದೆ. ನಂತರ 11 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದ್ದು, ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಎಚ್.ವಾಯ್.ಮೇಟಿ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ, ಬೀಳಗಿ ಶಾಸಕ ಜೆ.ಟಿ.ಪಾಟೀಲ, ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ, ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಸೇರಿದಂತೆ ಜಿಲ್ಲೆಯ ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಇತರೆ ಗಣ್ಯಮಾನ್ಯರು ಆಗಮಿಸಲಿದ್ದಾರೆ.

# ಕಲಾದಗಿ ಪಿಕೆಪಿಎಸ್‌ಗೆ ಮಂಜುನಾಥ ಅಧ್ಯಕ್ಷ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.13:ತಾಲೂಕಿನ ಕಲಾದಗಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ನೂತನ ಅಧ್ಯಕ್ಷರಾಗಿ ಮಂಜುನಾಥ ಬಿಲಕೇರಿ, ಉಪಾಧ್ಯಕ್ಷರಾಗಿ ರಾಜೇಶ ಕಾಮಣ್ಣವರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಹಾಯಕ ಚುನಾವಣಾಧಿಕಾರಿ ಚಂದ್ರಶೇಖರ ಬೀಳಗಿ ತಿಳಿಸಿದ್ದಾರೆ.

ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ತಲಾ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆ ನಡೆಯಿತು.

ನಿರ್ದೇಶಕರಾದ ಮಲ್ಲಪ್ಪ ಪರಚನ್ನಗೌಡ, ಮಂಜುನಾಥ ಗಾಣಿಗೇರ, ಬಸವರಾಜ ಪುಂಡಿಕಟಗಿ, ಬಸಪ್ಪ ಶಿವನಿಚ್ಚಿ, ಆನಂದ ಅರಕೇರಿ, ಮಹಾದೇವಿ ಶೆಟ್ಟೆಪ್ಪನ್ನವರ, ಬಸವ್ವ ಶಿವನಿಚ್ಚಿ, ಸದಾಶಿವ ಸಣ್ಣಕ್ಕಿ, ಮಳಿಯಪ್ಪ ಆಡಗಲ್, ಮುಖ್ಯಕಾರ್ಯನಿರ್ವಾಹಕ ಬಸವಂತಪ್ಪ ಶೆಟ್ಟೆಪ್ಪನವರ, ಮುಖಂಡರಾದ ಕೆ.ಎಲ್. ಬಿಲಕೇರಿ, ಲಕ್ಷ್ಮಣಗೌಡ ಗೌಡರ, ಕೆ.ಆರ್. ಶಿಲ್ಪಿ, ಬಶೆಟ್ಟೆಪ್ಪ ಅಂಗಡಿ, ಶ್ರೀಧರ ವಾಘ, ಪ್ರವೀಣ ಅರಕೇರಿ, ಲಕ್ಷ್ಮಣ ಶಿರಬೂರ, ಯಲ್ಲಪ್ಪ ಪೂಜಾರಿ, ಸಂಗಪ್ಪ ಭಬ್ಬಿ, ಯಲ್ಲಪ್ಪ ಹೊಸಕೋಟೆ ಇದ್ದರು.

# 2024 ರ ಅರಕೇರಿ ದತ್ತಿ ಪ್ರಶಸ್ತಿಗೆ ಕೃತಿಗಳ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.13:ಜಿಲ್ಲೆಯ ಅರಕೇರಿಯಲ್ಲಿ ಜರುಗಿದ ಬೀಳಗಿ ತಾಲೂಕಾ 5 ನೇ ಸಾಹಿತ್ಯ ಸಮ್ಮೇಳನ ಸವಿನೆನಪಿನ ದತ್ತಿ ಪ್ರಶಸ್ತಿಗಾಗಿ 2024ರಲ್ಲಿ ಪ್ರಕಟವಾದ ಕಾವ್ಯ, ಕಥೆ, ಕಾದಂಬರಿ, ಪ್ರಬಂಧ ಹಾಗೂ ಪತ್ರಿಕಾ ಲೇಖನ ಪ್ರಕಾರದ ಪುಸ್ತಕಕ್ಕೆ ದತ್ತಿ ಪ್ರಶಸ್ತಿ ಹಾಗೂ ಪ್ರಮೋದ ಶಂಕರ ತೆಗ್ಗಿ, ಸೌಜನ್ಯ ತೆಗ್ಗಿ ಇವರ ಮದುವೆಯ ಸವಿನೆನಪಿನ ಅತ್ಯುತ್ತಮ ಲೈಮನ್ ದತ್ತಿ ಪ್ರಶಸ್ತಿಗೆ ಜಿಲ್ಲೆಯ ಉದಯೋನ್ಮುಖ ಯುವ ಸಾಹಿತಿಗಳ ಕೃತಿಗಳನ್ನು ಆಹ್ವಾನಿಸಲಾಗಿದೆ.

ಜಿಲ್ಲೆಯ ಸಾಹಿತಿಗಳು ತಮ್ಮ ಕೃತಿಗಳನ್ನು ತಮ್ಮ ಪರಿಚಯ ಪತ್ರದೊಂದಿಗೆ ಜನೇವರಿ 31 ರೊಳಗಾಗಿ ಶಿವಾನಂದ ಶೆಲ್ಲಿಕೇರಿ ಜಿಲ್ಲಾಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು ಬಾಗಲಕೋಟೆ, ಅಂಚೆ-ಗಲಗಲಿ, ತಾ-ಬೀಳಗಿ, ಜಿ-ಬಾಗಲಕೋಟೆ ಈ ವಿಳಾಸಕ್ಕೆ ತಮ್ಮ ಕೃತಿಗಳನ್ನು ಕಳುಹಿಸಿಕೊಡಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಸಿದ್ಧರಾಮ ಶಿರೋಳ, ಡಾ.ಚಂದ್ರಶೇಖರ ಕಾಳನ್ನವರ ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಫೆಬ್ರುವರಿಯಲ್ಲಿ ನಡೆಯುವ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ಪ್ರಶಸ್ತಿಗಳನ್ನು ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ 9731095271, 9481726144 ಸಂಪರ್ಕ ಮಾಡಬಹುದಾಗಿದೆ.

# ಇಂದು ಭಗವತಿಯಲ್ಲಿ ಕಾಲೇಜು ಕಟ್ಟಡ ಉದ್ಘಾಟನೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.13:ಭಗವತಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ನೂತನ ಕಟ್ಟಡದ ಉದ್ಘಾಟನೆ ಜ.14 ಮುಂಜಾನೆ 10-30 ಗಂಟೆಗೆ ಜರುಗಲಿದೆ. ವಿವೇಕ ಯೋಜನೆಯಡಿ ನಿರ್ಮಾಣಗೊಂಡಿರುವ ಕಾಲೇಜು ಕಟ್ಟಡದ ಉದ್ಘಾಟನೆಯನ್ನು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ನೆರವೇರಿಸಲಿದ್ದು, ಸಮಾರಂಭದ ಅಧ್ಯಕ್ಷತೆಯನ್ನು ಶಾಸಕ ಎಚ್.ವಾಯ್.ಮೇಟಿ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ ಸದಸ್ಯರಾದ ಪ್ರಕಾಶ ಹುಕ್ಕೇರಿ, ಹನಮಂತ ನಿರಾಣಿ, ಸುನೀಲಗೌಡ ಪಾಟೀಲ, ಪಿ.ಎಚ್.ಪೂಜಾರ, ಉಮಾಶ್ರೀ, ಡಿಸಿ ಜಾನಕಿ, ಸಿಇಓ ಶಶಿಧರ ಕುರೇರ, ಎಸ್ ಪಿ ಅಮರನಾಥರೆಡ್ಡಿ, ಗ್ರಾಪಂ ಅಧ್ಯಕ್ಷ ಶಿವಪುತ್ರಪ್ಪ ದೊಡಮನಿ, ಉಪಾಧ್ಯಕ್ಷೆ ಸಾವಿತ್ರಿ ಕೆಲೂಡಿ, ಪದವಿ ಪೂರ್ವ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಾಜಶೇಖರ ಪಟ್ಟಣಶೆಟ್ಟಿ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕ್ರಿಕೆಟ್‌ನಲ್ಲಿ ಪೊಲೀಸ್ ತಂಡ ಜಯಭೇರಿ



ಮಲ್ಲಮ ನುಡಿ ವಾರ್ತೆ

ಬೀದರ. ಜ. 13 : ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಭಾನುವಾರ ನಡೆದ ಸೌಹಾರ್ದ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಉತ್ತಮ ಪ್ರದರ್ಶನ ತೋರಿ ಜಯಭೇರಿ ಬಾರಿಸಿದ ಜಿಲ್ಲಾ ಪೊಲೀಸ್ ತಂಡ ಟ್ರೋಫಿ ಮುಡಿಗೇರಿಸಿಕೊಂಡಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ನಾಯಕತ್ವದ ತಂಡ ಬ್ಯಾಟಿಂಗ್, ಬೌಲಿಂಗ್, ಕ್ಷೇತ್ರ ರಕ್ಷಣೆ ಸೇರಿದಂತೆ ಎಲ್ಲ ವಿಭಾಗಗಳಲ್ಲೂ ಉತ್ತಮ ಸಾಧನೆ ತೋರಿ ಪತ್ರಕರ್ತರ ತಂಡವನ್ನು ಸೋಲಿಸಿ ಪ್ರಶಸ್ತಿ ಬಾಚಿಕೊಂಡಿದೆ. ಮೂರು ಪಂದ್ಯಗಳ ಸರಣಿಯನ್ನು 2-1ರ ಮೂಲಕ ಪೊಲೀಸರ ತಂಡ ಗೆದ್ದುಕೊಂಡಿತು. ಮೊದಲ ಪಂದ್ಯದಲ್ಲಿ ಪೊಲೀಸ್ ತಂಡ ಜಯಗಳಿಸಿದರೆ, ಎರಡನೇ ಪಂದ್ಯವನ್ನು ಪತ್ರಕರ್ತರ ತಂಡ ಗೆದ್ದುಕೊಂಡಿತು. ಇದರಿಂದಾಗಿ ಮೂರನೇ ಪಂದ್ಯ ಫೈನಲ್ ಸ್ವರೂಪ ಪಡೆದುಕೊಂಡಿತು.

ಕೊನೆಯ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿದ ಪೊಲೀಸರ ತಂಡ 10 ಓವರ್‌ಗಳಲ್ಲಿ 80 ರನ್ ಕಲೆ ಹಾಕಿತ್ತು. ಗುರಿ ಬೆನ್ನಟ್ಟಿದ್ದ ಮಲ್ಲಿಕಾರ್ಜುನ ಮರಕಲೆ ನಾಯಕತ್ವದ ಪತ್ರಕರ್ತರ ತಂಡ ಉತ್ತಮ ಪ್ರದರ್ಶನ ತೋರಿ ಒಂದು ರನ್‌ನಿಂದ ಸೋಲು ಕಂಡಿತು. ಕೊನೆಯ ಓವರ್‌ವರೆಗೆ ಪಂದ್ಯ ರೋಚಕತೆಯಿಂದ ಕೂಡಿತ್ತು.

ಪೊಲೀಸ್ ತಂಡದಲ್ಲಿ ಎಸ್ಪಿ ಪ್ರದೀಪ್ ಗುಂಟಿ, ಹೆಚ್ಚುವರಿ ಎಸ್ಪಿ ಚಂದ್ರಕಾಂತ ಪೂಜಾರಿ, ಡಿಎಆರ್ ಡಿವೈಎಸ್ಪಿ ಸುನೀಲ ಕೂಡ್ಲಿ, ಇನ್‌ಸ್ಪೆಕ್ಟರ್ ಮೊಸಿನ್, ಡಿಎಆರ್ ಪೊಲೀಸರಾದ ರವಿ, ಪಾಂಡು, ಬಾಬು ಎಲ್ಲ ವಿಭಾಗಗಳಲ್ಲೂ ಉತ್ತಮ ಪ್ರದರ್ಶನ ತೋರಿದರು.

# ಸ್ವಾಮಿ ವಿವೇಕಾನಂದರ ತತ್ವಾದರ್ಶಗಳು ಜೀವಂತ: ರಾಮ್ ಕಿರಣ್

ಬಳ್ಳಾರಿ,ಜ.13:ಆಧ್ಯಾತ್ಮಿಕ ಲೋಕದ ಮಹಾನ್ ಚೇತನ, ಭವ್ಯ ಭಾರತದ ಹೆಮ್ಮೆಯ ಪುತ್ರ, ಯುವಕರ ಪಾಲಿನ ಸ್ಫೂರ್ತಿಯ ಚಿಲುಮೆಯಾಗಿದ್ದು, ಸ್ವಾಮಿ ವಿವೇಕಾನಂದರ ತತ್ವಾದರ್ಶಗಳು ಎಂದೆಂದಿಗೂ ಜೀವಂತ ಎಂದು ಶ್ರೀಮೇಧಾ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ರಾಮ್ ಕಿರಣ್ ಅವರು ಹೇಳಿದರು.




ನೆಹರು ಯುವ ಕೇಂದ್ರ ಬಳ್ಳಾರಿ, ಶ್ರೀಮೇಧಾ ಪದವಿ ಪೂರ್ವ ಕಾಲೇಜ್ ಹಾಗೂ ಚಿಗುರು ಕಲಾ ತಂಡ, ಇಬ್ರಾಹಿಂಪುರ ಇವರ ಸಂಯುಕ್ತ ಆಶ್ರಯದಲ್ಲಿ ಸ್ವಾಮಿ ವಿವೇಕಾನಂದರ 162ನೇ ಜಯಂತಿ ಅಂಗವಾಗಿ ನಗರದ ಕೋಟೆ ಪ್ರದೇಶದ ಶ್ರೀಮೇಧಾ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಯುವ ದಿನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾಮಿ ವಿವೇಕಾನಂದರು ಜೀವನ ಚರಿತ್ರೆ ಮತ್ತು ಅವರ ಸಾಧನೆ ಬಗ್ಗೆ ಯುವ ಸಮುದಾಯ ಅರಿತುಕೊಳ್ಳಬೇಕು. "ಏಳಿ ಎದ್ದೇಳಿ" ಗುರಿ ಮುಟ್ಟುವ ತನಕ ನಿಲ್ಲದಿರಿ ಎಂಬ ದಿವ್ಯವಾಣಿಯ ಜ್ಞಾನ ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದ ಸರಳಾದೇವಿ ಪ್ರಥಮ ದರ್ಜೆ ಕಾಲೇಜಿನ ನಾಟಕ ವಿಭಾಗದ ಅತಿಥಿ ಉಪನ್ಯಾಸಕರಾದ ನೇತಿ ರಘುರಾಮ್ ಅವರು ಮಾತನಾಡಿ, ಸ್ವಾಮಿ ವಿವೇಕಾನಂದರು ಒಬ್ಬ ವೀರ ಸನ್ಯಾಸಿ, ತತ್ವಜ್ಞಾನಿ, ಭಾರತ ದೇಶದಲ್ಲಿ ಭಾರತ ಸಂಸ್ಕೃತಿಯನ್ನು ದೇಶ ವಿದೇಶದಲ್ಲಿ ಪ್ರಚಾರ ಮಾಡಿದ ಏಕೈಕ ವ್ಯಕ್ತಿಯಾಗಿದ್ದರು ಎಂದು ಹೇಳಿದರು. ವಿವೇಕಾನಂದ ಅವರ ಜೀವನ ಚರಿತ್ರೆ, ಸಾಧನೆ ಹಾಗು ಅವರು ನಡೆದು ಬಂದಂತಹ ದಾರಿ ಯುವ ಜನಾಂಗವು ಅರ್ಥೈಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾಲೇಜಿನ ಉಪಪ್ರಾಚಾರ್ಯರಾದ ವಿಜಯ ಭಾಸ್ಕರ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸಿದ್ದರು.

ಇಬ್ರಾಹಿಂಪುರ ಚಿಗುರು ಕಲಾ ತಂಡದ ಹುಲುಗಪ್ಪ ಅವರು ಗಾಯನ ಪ್ರಸ್ತುತ ಪಡಿಸಿದರು.

ಕಾರ್ಯಕ್ರಮದಲ್ಲಿ ಅಕ್ಷಯ ಕಲಾ ಟ್ರಸ್ಟ್ನ ಹೆಚ್.ಜಿ.ಸುಂಕಪ್ಪ, ನೆಹರು ಯುವ ಕೇಂದ್ರದ ಅಂಬರೀಶ್ ಸೇರಿದಂತೆ ಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ವಿಕಲಚೇತನರನ್ನು ನೋಡುವ ಸಮಾಜದ ದೃಷ್ಟಿಕೋನ ಬದಲಾಗಬೇಕು : ಅಭಿನವ ಗವಿಸಿದ್ದೇಶ್ವರ ಶ್ರೀ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಜ.13: ಯಾರಿಗೆ ಕಣ್ಣಿಲ್ಲ, ಕಿವಿ, ಕಾಲು ಮತ್ತು ಕೈಯಿಲ್ಲದಂತಹ ವಿಕಲಚೇತನರಿಗೆ ಸಮಾಜವು ನೋಡುವ ದುಷ್ಠಿಕೋನ ಬದಲಾಗಬೇಕು ಎಂದು ಕೊಪ್ಪಳ ಶ್ರೀಗವಿಮಠದ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮಿಜಿಗಳು ಹೇಳಿದರು.

ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಗವಿಮಠ, ಜಿಲ್ಲಾಡಳಿತ ಹಾಗೂ ವಿವಿಧ ಇಲಾಖೆಗಳು ಮತ್ತು ಹಲವಾರು ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ಶನಿವಾರ ಕೊಪ್ಪಳ ನಗರದಲ್ಲಿ ಏರ್ಪಡಿಸಲಾಗಿದ್ದ "ವಿಕಲ ಚೇತನನ ನಡೆ ಸಕಲ ಚೇತನದ ಕಡೆ" ಎಂಬ ಕೃತಕ ಅಂಗಾಂಗ ಜೋಡಣೆ ಬೃಹತ್ ಜಾಗೃತಿ ನಡಿಗೆ ಕಾರ್ಯಕ್ರಮದ ನಂತರ ಗವಿಮಠ ಆವರಣದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಶ್ರೀಗಳು ಮಾತನಾಡಿದರು.

ಯಾವುದೋ ಒಂದು ಅಪಘಾತ, ಪೂರ್ವಜನ್ಮದ ಕೃತವೂ ಕೆಲವರಲ್ಲಿ ಕೈ, ಕಾಲು, ಕಣ್ಣು, ಕಿವಿ ಹೀಗೆ ಏನೋ ನ್ಯೂನತೆಯಾಗಿರುತ್ತದೆ. ಮೊದಲು ಅವರಿಗೆ ಆತ್ಮಸ್ಥೈರ್ಯ ತೆಬೇಕು. ಇದರ ಜೊತೆಗೆ ಪ್ರೀತಿ, ಸ ಹ ನಾ ಭ ೂ ತಿ ಂ ುೂ ಅತ್ಯವಶ್ಯಕವಾಗಿದೆ. ಪ್ರತಿ ವರ್ಷ ನಡೆಯುವ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವವು ಕೇವಲ ರಥೋತ್ಸವವಾಗಿ ನಡೆಯದೇ ಸಮಾಜಿಕ ಸಂದೇಶಗಳನ್ನು ಸಾರುತ್ತದೆ. ಇಂತಹ ಸಮಾಜಿಕ ಸಂದೇಶಗಳು ಕೇವಲ ಜಾಗೃತಿ ಅಭಿಯಾನಕ್ಕೆ ಮಾತ್ರ ಸೀಮಿತವಾಗದೇ ಕಾರ್ಯಗತವಾಗಬೇಕು ಎಂದರು.

ಈ ವರ್ಷ 'ವಿಕಲಚೇತನರ ನಡೆ ಸಕಲಚೇತನದ ಕಡೆ' ಎಂಬ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಮಕ್ಕಳಲ್ಲಿ ಸಹನಾಭೂತಿ, ವಿಕಲಚೇತನರ ಬಗ್ಗೆ ಪ್ರೇಮ ಬೆಳಸಿಕೊಳ್ಳುವುದಕ್ಕಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಜಾತ್ರೆಯಲ್ಲಿ ಕೃತಕ ಕೈ-ಕಾಲುಗಳಿಗಾಗಿ ಎಷ್ಟು ಜನ ನೋಂದಾಯಿಸಿಕೊಳ್ಳುತ್ತಾರೆ, ಅವರೆಲ್ಲರಿಗೂ ಉಚಿತವಾಗಿ ಕೃತಕ ಕೈ-ಕಾಲುಗಳ ಜೋಡಣೆ ಮಾಡಲಾಗುವುದು. ಶ್ರವಣ ನ್ಯೂನತೆಯುಳ್ಳ ವಿದ್ಯಾರ್ಥಿಗಳಿಗೆ ಶ್ರವಣ ಸಾಧನಗಳ ವಿತರಣೆ ಮಾಡಲಾಗುತ್ತಿದೆ. ಈ ಮಹತ್ತರ ಕಾರ್ಯಕ್ಕಾಗಿ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ, ಶ್ರೀ ಮಹಾವೀರ ಲಿಂಬ್ ಸಂಸ್ಥೆ, ರೆಡ್ ಕ್ರಾಸ್ ಸಂಸ್ಥೆಗಳು ಸಹಕಾರ ನೀಡಿವೆ. ಇವುಗಳ ಜೊತೆಗೆ ಕೈಜೊಡಿಸಲು ಹಲವಾರು ದಾನಿಗಳು ಸಹ ಮುಂದೆ ಬಂದಿದ್ದಾರೆ ಎಂದು ಹೇಳಿದರು.

ಕೈ, ಕಾಲು ಇಲ್ಲದವರಿಗೆ ಕೃತಕ ಕೈ, ಕಾಲು ಜೋಡಿಸುವುದು ಮಹತ್ತರವಾದ ಕಾರ್ಯವಾಗಿದೆ. ಅಜ್ಜನ ಜಾತ್ರೆಯ ರಥ ಸಾಗುವುದಕ್ಕಿಂತ ಮುಂಚೆ ಈ ಅಬಿಯಾನದಲ್ಲಿ ಇಂದು ಸಾವಿರಾರೂ ಸಂಖ್ಯೆಯಲ್ಲಿ ಪಾಲ್ಗೊಂಡ ಮಕ್ಕಳ ಹೆಜ್ಜೆಯ ಗುರುತುಗಳು ಎಲ್ಲರಿಗೂ ದಿಕ್ಸೂಚಿಯಾಗಲಿ. ಮುಂದಿನ ವರ್ಷ ಯಾವ ವಿಷಯದ ಬಗ್ಗೆ ಜಾಥಾ ಮತ್ತು ಕೆಲಸ ಮಾಡಬೇಕು ಎಂಬುವುದನ್ನು ವಿದ್ಯಾರ್ಥಿಗಳೇ ಸಲಹೆ ನೀಡಬೇಕು. ಆಯ್ಕೆಯಾಗುವ ವಿಷಯವನ್ನು ತಿಳಿಸಿದ ವಿದ್ಯಾರ್ಥಿಯಿಂದಲೇ ಮುಂದಿನ ವರ್ಷದ ಜಾಥಾ ಕಾರ್ಯಕ್ರಮ ಉದ್ಘಾಟಿಸಲಾಗುವುದು ಎಂದು ಶ್ರೀಗಳು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

*ಬಹುಮಾನ ವಿತರಣೆ:* ಈ ಜಾಗೃತಿ ಅಭಿಯಾನ ಕಾರ್ಯಕ್ರಮದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಗದೀಶ್, ಕೊಪ್ಪಳ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಪಿ.ಎಸ್ ಶಂಕ್ರಯ್ಯ, ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕರಾದ ಪುಷ್ಪಾವತಿ, ಹುಬ್ಬಳ್ಳಿಯ ಶ್ರೀ ಮಹಾವೀರ ಲಿಂಬ್ ಸಂಸ್ಥೆಯ ಮಹೇಂದ್ರಸಿಂಗ್ವಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ರಾಜ್ಯ ಶಾಖೆಯ ಚೇರಮನ್ ವಿಜಯಕುಮಾರ ಹಾಗೂ ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಮಾಜಿ ಸಚಿವರಾದ ರಾಜುಗೌಡರವರ ತಂದೆ ತಾಯಿ ಪುಣ್ಯಸ್ಮರಣೆ.



ಮಲ್ಲಮ್ಮ ನುಡಿ ವಾರ್ತೆ

ಕೊಡೇಕಲ್ : ಕೊಡೇಕಲ್ ಪಟ್ಟಣದಲ್ಲಿ ಮಾಜಿ ಸಚಿವರಾದ ರಾಜುಗೌಡ ಅವರ ತಂದೆ ದಿ। ಶಂಭನಗೌಡ ಪಾಟೀಲ ಅವರ 3 ನೇ ವೈಕುಂಠ ಸಮಾರಾಧನೆ ಹಾಗೂ ದಿ। ತಿಮ್ಮಮ್ಮ ಅವರ 5 ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ಸರಳವಾಗಿ ಕೊಡೇಕಲನತೋಟದಮನೆಯಲ್ಲಿ ಕಾರ್ಯಕ್ರಮ ಜರುಗಿದವು.

ವಿವಿಧ ಮಠಗಳ ಪೂಜ್ಯರು ಸೇರಿದಂತೆ ರಾಜಕೀಯ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ದಿ। ಶಂಭನಗೌಡ ಪಾಟೀಲ್ ಮತ್ತು ದಿ। ತಿಮ್ಮಮ್ಮ ಅಮ್ಮನವರ ಭಾವಚಿತ್ರಗಳಿಗೆ ಪುಷ್ಪಸಮರ್ಪಿಸಿ ಸ್ಮರಿಸಿಕೊಂಡರು.

ದೇವಪುರ್ ಮಠದ ಶ್ರೀ ಶ. ಭ್ರ. ಶ್ರೀ. ಶಿವಮೂರ್ತಿ ಶಿವಾಚಾರ್ಯ ಮಹಾ ಸ್ವಾಮಿಗಳು ಸಂಸ್ಥಾನ ಹಿರೇಮಠ ದೇವಾಪುರ ಬಬಲಾದಿ ಇವರು ಆಶೀರ್ವಚನ ನೀಡಿದರು. ಸ್ಥಳೀಯ ಬಸವ ಪೀಠಾಧಿಪತಿ ವೃಷಬೇಂಥ ಅಪ್ಪಾಜಿರವರು, ಶ್ರೀ ದುರದುಂಡೇಶ್ವರ ವಿರಕ್ತಮಠದ ಶ್ರೀಗಳು, ದೇವಪುರ ಮಠದ ಶ್ರೀಗಳು, ಗುಳಬಾಳ ಶ್ರೀಗಳು, ಮುದನೂರು ಶ್ರೀಗಳು, ಲಕ್ಷ್ಮಿಪುರ ಶ್ರೀಗಳು , ವೀರಗೋಡ್ ಮಠ ಶ್ರೀಗಳು, ಕಂಠಿ ಮಠ ಶ್ರೀಗಳು, ರುಕ್ಮಾಪುರ ಶ್ರೀಗಳು, ವಿಠಲ್ ಮಾಹರಾಜ ಶ್ರೀಗಳು, ಶ್ರೀಗಳು, ನೀಲಕಂಠಸ್ವಾಮಿ ವಿರಕ್ತಮಠ ಕೊಡೇಕಲ್, ದಾವಲಮಲೀಕ್ ಶ್ರೀಗಳು, ಬಲಶೆಟ್ಟಿಹಾಳ ವೀರತ್ತಮಠ ಶ್ರೀಗಳು ಬಂಡೆಪ್ಪ ಹಳ್ಳಿ ಮುತ್ಯಾ, ರಾಜಾ ಜೀತೇಂದ್ರನಾಯಕ ಜಹಾಗೀರದಾರ, ರಾಜಾ ವೆಂಕಟಪ್ಪ ನಾಯಕ ಜಹಾಗೀರದಾರ, ನರಸಿಂಹನಾಯಕ, ಹನುಮಂತ ನಾಯಕ, ಮಣಿಕಂಠ ನಾಯಕ, ಎಚ್.ಸಿ. ಪಾಟೀಲ್,

ಬಿ.ಎಂ.ಹಳ್ಳಿಕೋಟೆ, ಶಾಮಸುಂದರ ಜ್ಯೋಶಿ, ಕಿಟ್ಟಪ್ಪ ಸಾಹುಕಾರ್ , ವೀರೇಶ್ ಚಿಂಚೋಳ್ಳಿ, ಯಲ್ಲಪ್ಪ ಕೊರಕುಂದ, ಸಂಗಣ್ಣ ವೈಲಿ, ವೆಂಕನಗೌಡ ಪಾಟೀಲ್, ಬಸಣ್ಣ ಗೌಡ, ಸುನಿಲ್ ಜಾದವ್, ಲೋಕೇಶ್ ರಾಠೋಡ, ಅಪ್ಪು ನಾಯಕ್, ನಾಥು ನಾಯಕ,

ಹಾಗೂ ರಾಜಕೀಯ ಮುಸ್ಕದಿಗಳು , ಗಣ್ಣ ಮುಖಂಡರು ಹಾಗೂ ಅಭಿಮಾನಿ ಬಳಗವು ಇದ್ದರು.

## ಶರಣಪ್ಪ ಗದಲೇಗಾಂವರವರಿಗೆ ಗೌರವ ಡಾಕ್ಟರೇಟ್



(ವರದಿ.ಡಿ.ಕೆ. ಪ್ರಹ್ಲಾದ.)

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:–ಕರ್ನಾಟಕದ ಕಿರಿಟ ಭಾಗವೆಂದೇ ಪ್ರಸಿದ್ಧಿ ಪಡೆದ ಜಿಲ್ಲೆಯ ತಾಲೂಕಿನ ಹೆಮ್ಮೆಯ ಶಿಕ್ಷಕರಾದ ಶರಣಪ್ಪ ಗದಲೇಗಾಂವ ಅಪ್ಪಟ ಕನ್ನಡಿಗ ಗಡಿ ನಾಡಿನಲ್ಲಿ ಕನ್ನಡದ ನೆಲ, ಜಲ, ನುಡಿ, ಸಂಸ್ಕೃತಿ, ಸಾಹಿತ್ಯ, ಶೈಕ್ಷಣಿಕ ಮತ್ತು ಸಾಮಾಜಿಕ ಚಿಂತಕ, ಸಮಾಜ ಸೇವೆ ಹಾಗೂ ಅನೇಕ ಸಮಸ್ಯೆಗಳನ್ನು ಪರವಾಗಿ ಹೋರಾಟದೊಂದಿಗೆ ತಾಲೂಕಿನಲಿ ಪ್ರಾಂತ್ಯದಲ್ಲಿ ಅನೇಕ ಸಾಮಾಜಿಕ ಸಾಂಸ್ಕೃತಿಕ ಕನ್ನಡ ಸಮಾರಂಭ ಆಯೋಜನೆ ಮಾಡುತ್ತಾ ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಕನ್ನಡ ಹೋರಾಟಗಾರರಾದ ಶರಣಪ್ಪ ಕೆ. ಗದಲೇಗಾಂವ ರವರಿಗೆ ತಮಿಳುನಾಡಿನ ಆಸೀಯನ್ ಅಂತರಾಷ್ಟ್ರೀಯ ಸಾಂಸ್ಕೃತಿಯ ಸಂಶೋಧನೆ ವಿಶ್ವವಿದ್ಯಾಲಯ ಇವರ ಸಾಮಾಜಿಕ ಕೊಡುಗೆಯನ್ನು ಗುರುತಿಸಿ ಇತ್ತೀಚಿಗೆ ಬೆಂಗಳೂರಿನಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಯಿತು.

ಶರಣಪ್ಪ ಗದಲೇಗಾಂವ ಮೂಲತ ಬೀದರ ಜಿಲ್ಲೆ ಬಸವಕಲ್ಯಾಣ ತಾಲೂಕಿಗೆ ಬರುವ ಗದಲೇಗಾಂವ (ಬಿ) ಗ್ರಾಮದ ವರು ಇವರು ಬಡಕುಟುಂಬದಲ್ಲಿ ಜನಸಿದರು. ಜೀವನದಲ್ಲಿ ಬಡತನ ಹೋಗಲಾಡಿಸಿ ಮುಂದೆ ಬರಬೇಕಾದರೆ ಅದು ಶಿಕ್ಷಣ ಒಂದೇ ಮಾರ್ಗ ಎಂದು ತಿಳಿದು, ಉನ್ನತ ಶಿಕ್ಷಣ ಮುಗಿಸಿ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಾ ಶೈಕ್ಷಣಿಕ ಮತ್ತು ಸಾಹಿತ್ಯಿಕ ರಾಷ್ಟ್ರೀಯ ಕಾರ್ಯಕ್ರಮಗಳು ಶೈಕ್ಷಣಿಕ ಕಾರ್ಯಾಗಾರಗಳು ಅನೇಕ ಮಾದರಿಯ ಕಾರ್ಯಕ್ರಮಗಳು ನೀಡಿದ ಹೆಗ್ಗಳಿಕೆ ಅವರದ್ದು, ಸದರಿಯವರಿಗೆ ಈಗಾಗಲೇ ಅನೇಕ ಸರ್ಕಾರ ಮತ್ತು ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಲಭಿಸಿವೆ.

ಬಡತನದಲ್ಲಿ ಶಿಕ್ಷಣ ಪಡೆದು ವಿಶೇಷ ಸಾಧನೆಗೈದು ಗೌರವ

## ಮುತ್ತಂಗಿ; ಪಿಕೆಪಿಎಸ್ ಚುನಾವಣೆ ಫಲಿತಾಂಶ




ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:–ತಾಲೂಕಿನ ಮುತ್ತಂಗಿ ಗ್ರಾಮದ ಪಿಕೆಪಿಎಸ್ ಆಡಳಿತ ಮಂಡಳಿಯ ಚುನಾವಣೆ ರವಿವಾರ ಬೆಳಿಗ್ಗೆ 9 ಘಂಟೆಯಿಂದ 4 ಘಂಟೆಯ ವರೆಗೆ ಮತದಾನ ನಡೆಯಿತ್ತು. ಬಳಿಕ ಸಂಜೆ ಮತ ಎಣಿಕೆ ಕಾರ್ಯ ನಂತರ ಫಲಿತಾಂಶವನ್ನು ಚುನಾವಣಾಧಿಕಾರಿ ಮೃತುಂಜಯ ಘೋಷಣೆ ಮಾಡಿದರು. ಸಾಮಾನ್ಯ ಸ್ಥಾನ:– ಈರ್ಶಾದ ಅಲಿ ಉಸ್ಮಾನಸಾಬ್, ಶಾಮರಾವ ಬೋಜು, ವೀರಪ್ಪ ಕಂಟೇಪ್ಪ, ಸುರೇಶ್ ರತನಸಿಂಗ್, ಸಣ್ಮುಖಪ್ಪ ನರಸಪ್ಪ, ಮಹಿಳಾ ಸ್ಥಾನ:– ಸವಿತ್ರಾನಂದು, ಶಾಂತಾಬಾಯಿ ಚಂದ್ರಶೆಟ್ಟಿ, ಪರಿಶಿಷ್ಟ ಜಾತಿ ಸ್ಥಾನ:– ಶಾಂತಿಬಾಯಿ ಮಾಣಿಕ, ಪರಿಶಿಷ್ಟ ಪಂಗಡ ಸ್ಥಾನ:– ಹಣಮಂತ ಶಿವಪ್ಪಾ, ಹಿಂದುಳಿದ ವರ್ಗ(ಎ) ಸ್ಥಾನ:– ಅಹ್ಮದ್ ಪಟೇಲ್ ಇಸಾಮೋದ್ದಿನ, ಹಿಂದುಳಿದ ವರ್ಗ(ಬಿ) ರಾಚಪ್ಪ ಶಿವಪುತ್ರಪ್ಪ,, ಸಾಲಗರರಲ್ಲದ ಸ್ಥಾನ:–ಪ್ರೇಮಿಳಾ ಶಂಕರ ಆಯ್ಕೆಯಾಗಿದ್ದರೆ ಎಂದು ಚುನಾವಣಾಧಿಕಾರಿ ಮೃತುಂಜಯ ತಿಳಿಸಿದ್ದಾರೆ.

# ಸಮಾಜದ ಹಿತಕ್ಕಾಗಿ ದುಡಿಯಿರಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 12 :– ಸಂಘ ಸಂಸ್ಥೆಗಳ ಪದಾಧಿಕಾರಿಗಳು ತಮ್ಮಲ್ಲಿನ ಭಿನ್ನಾಭಿಪ್ರಾಯಗಳನ್ನು ಮರೆತು ಸಮಾಜದ ಹಿತಕ್ಕಾಗಿ ದುಡಿಯಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ. ಹಳ್ಳದ್ ನುಡಿದರು. ಭಾಲ್ಕಿ ಪಟ್ಟಣದ ಅನುಭವ ಯೋಗ ಕೇಂದ್ರದಲ್ಲಿ ಶನಿವಾರ ನಡೆದ ಲಿಂಗಾಯತ ನೌಕರರ ಸಂಘದ ತಾಲ್ಲೂಕು ಘಟಕದ 2024–25ನೇ ಸಾಲಿನ ಮಹಾಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಲಿಂಗಾಯತ ನೌಕರರ ಸಂಘ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿದೆ ಎಂದು ತಿಳಿಸಿದರು.

ಸಾನಿಧ್ಯ ವಹಿಸಿದ್ದ ಭಾಲ್ಕಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ಬಸವಣ್ಣನವರ ಕಾಯಕ, ದಾಸೋಹ ತತ್ವ ಅಳವಡಿಸಿಕೊಂಡಲ್ಲಿ ಸಂಸ್ಥೆಗಳ ಬೆಳವಣಿಗೆ ಆಗುತ್ತದೆ ಎಂದು ಹೇಳಿದರು. ಲಿಂಗಾಯತ ನೌಕರರ ಹಿತಕ್ಕಾಗಿ ಸಂಘ ಸ್ಥಾಪಿಸಲಾಗಿದೆ. ಸಂಘ ಯಾವುದೇ ಸಂಘಕ್ಕೆ ಪರ್ಯಾಯವಲ್ಲ. ನೌಕರರ ಹಿತರಕ್ಷಣೆಯೇ ಸಂಘದ ಧ್ಯೇಯವಾಗಿದೆ ಎಂದು ಲಿಂಗಾಯತ ನೌಕರರ ಸಂಘದ ರಾಜ್ಯ ಅಧ್ಯಕ್ಷ ಶಿವರಾಜ ಕಪಲಾಪುರೆ ತಿಳಿಸಿದರು.

ಸಂಘ 2018 ರಿಂದ ರಾಜ್ಯದ ಸಮಾಜದ ನೌಕರರ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸುತ್ತಿದೆ ಎಂದು ಹೇಳಿದರು.

ಸಂಘದ ತಾಲ್ಲೂಕು ಅಧ್ಯಕ್ಷ ಬಸವರಾಜ ಬಡದಾಳೆ ಅಧ್ಯಕ್ಷತೆ ವಹಿಸಿದ್ದರು. ಬಸವರಾಜ ದಾನಾ, ವಚನ ಸಾಹಿತ್ಯ ಪರಿಷತ್ ಅಧ್ಯಕ್ಷ ಗುಂಡಪ್ಪ ಸಂಗಮಕರ್, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಚಂದ್ರಶೇಖರ ಬನ್ನಾಳೆ, ಲಿಂಗಾಯತ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ದಿಲೀಪಕುಮಾರ ಡೊಂಗರಗೆ, ಪ್ರಿಯಾ ಓಂಪಾಟೀಲ, ಶರಣಪ್ಪ ಬಿರಾದಾರ, ಸಂತೋಷಕುಮಾರ ವಾಡೆ, ಸೂರ್ಯಕಾಂತ ಸುಂಟೆ, ಶಿವಕುಮಾರ ಫುಲಾರಿ ಇದ್ದರು. ಲಿಂಗಾಯತ ನೌಕರರ ಸಂಘದ ಜಿಲ್ಲಾ, ತಾಲ್ಲೂಕು ಘಟಕಗಳ ಪದಾಧಿಕಾರಿಗಳು ಹಾಗೂ ಲಿಂಗಾಯತ ನೌಕರರು ಪಾಲ್ಗೊಂಡಿದ್ದರು.

## ಸ್ವಾಮಿ ವಿವೇಕಾನಂದ ಜನ್ಮ ದಿನಾಚರಣೆ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:– ಇಲ್ಲಿನ ಎಸ್. ಎಸ್.ಕೆ. ಬಸವೇಶ್ವರ ಕಲಾ.ವಿಜ್ಞಾನ. ವಾಣಿಜ್ಯ.ಸ್ನಾತಕ ಮತ್ತು ಸ್ನಾತ–ಕೋತ್ತರ ಮಹಾವಿದ್ಯಾಲಯದಲ್ಲಿ 162 ನೇ ಸ್ವಾಮಿ ವಿವೇಕಾನಂದ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಳಾದ ಪ್ರೊ. ವಿಠೋಬಾ ಡೊಣ್ಣೆ ಗೌಡರ ಮಾತನಾಡಿ ಸ್ವಾಮಿ ವಿವೇಕಾನಂದರು ಒಬ್ಬ ಮಹಾನ್ ಚೇತನ ಶ್ರೇಷ್ಠ ವ್ಯಕ್ತಿತ್ವ ಹೊಂದಿದವರು, ಎಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ, ಎಂದು ಯುವಕರನ್ನು ಸಂಭೋಧಿಸುತ್ತಾ ಯುವಕರ ಕಣ್ಮಣಿಯಾಗಿದ್ದರು . ಆದ್ದರಿಂದಲೇ ಈ ದಿನವನ್ನು ರಾಷ್ಟ್ರೀಯ ಯುವಕರ ದಿನವೆಂದು ಆಚರಿಸಲಾಗುತ್ತದೆ ಎಂದು ತಿಳಿಸಿದವರು. ಅಲ್ಲದೆ ವಿವೇಕ ಅಂದರೆ ಜ್ಞಾನ ಆನಂದ ಎಂದರೆ ಸಂತೋಷ ಇವೆರಡು ಸ್ವಾಮಿ ವಿವೇಕಾನಂದರ ಹತ್ತಿರ ಇದ್ದರಿಂದ ಇವರೊಬ್ಬ ಶ್ರೇಷ್ಠ ನಾಯಕರಾಗಿ ಹಾಗೂ ಸಂತರಾಗಿ ಹೊರಹೊಮ್ಮಿದ್ದಾರೆ ಎಂದು ತಿಳಿಸಿದರು. ಉಪನ್ಯಾಸ ವಿಭಾಗದ ಮುಖ್ಯಸ್ಥರಾದ ಕಲ್ಯಾಣಪ್ಪ ನಾವದಗಿ ಮಾತನಾಡಿ ಸ್ವಾಮಿ ವಿವೇಕಾನಂದರ ಸಾಧನೆ ಅಪ್ರತಿಮವಾದದ್ದು, ಅಮೆರಿಕದ ಚಿಕ್ಕಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ವಿವೇಕಾನಂದರು ಮಾಡಿದ ಭಾಷಣ ಶ್ರೇಷ್ಠವಾದದ್ದು , ಏಕೆಂದರೆ ನಮ್ಮ ದೇಶದ ಆಚಾರ ವಿಚಾರ ಸಂಸ್ಕೃತಿಯನ್ನು ಎತ್ತಿ ಹಿಡಿದಿರುವುದು ಆ ಭಾಷಣದಲ್ಲಿ ನಾವು ವಿಶೇಷವಾಗಿ ಕಾಣುತ್ತೇವೆ. ಸ್ವಾಮಿ ವಿವೇಕಾನಂದರ ಪ್ರಕಾರ ಸ್ವಾರ್ಥವೇ ಅಧರ್ಮ ನಿಸ್ವಾರ್ಥವೇ ಧರ್ಮ ಎಂದು ಹೇಳಿದರು. ದೇಶದ ಯುವ ಜನ ಸದೃಢವಾದವಾಗಿದ್ದರೆ ಆ ದೇಶ ಇಡೀ ಜಗತ್ತನ್ನೇ ಆಳುತ್ತದೆ ಎಂದು ತಿಳಿಸಿದರು. ಆದ್ದರಿಂದ ನಮ್ಮ ದೇಶದ ಕುರಿತು ಇತರೆ ಎಲಾ ದೇಶಗಳೂ ಗೌರವಯುತ ಕಾಣುವುದಕ್ಕೆ ಸ್ವಾಮಿ ವಿವೇಕಾನಂದರೇ ಪ್ರಮುಖ ಕಾರಣ ಎಂದು ತಮ್ಮ ಉಪನ್ಯಾಸದಲ್ಲಿ ತಿಳಿಸಿದರು. ಅಧ್ಯಕ್ಷತೆ ವಹಿಸಿದ ಡಾ. ಸುರೇಶ್ ಎಚ್ ಆರ್ ಅಧ್ಯಕ್ಷ ನುಡಿ. ಈ ಸಂದರ್ಭದಲ್ಲಿ ಪ್ರೊ. ವಿಠೊಬಾ ಡೊಣ್ಣೆ ಗೌಡರ, ಡಾ. ಸುರೇಶ್ ಎಚ್ ಆರ್, ಕಲ್ಯಾಣಪ್ಪ ನವದಗಿ, ಗ್ರಂಥಪಾಲಕರಾದ ಸೂರ್ಯಕಾಂತ ನಾಸೆ, ಶಿವಾನಂದ ಬಿರಾದರ್, ಇಂದ್ರಜಿತ್ ರೆಡ್ಡಿ, ಶಿವಕುಮಾರ ಕೊಲ್ಲೆ, ದೀಪಕ್ ಕಾಡದಿ, ಶರಣು ಮಠಪತಿ, ವೈಶಾಲಿ ಎಚ್, ಕು. ಭಾರತಿ ಮಠ, ಜ್ಯೋತಿ ಪಾಟೀಲ್, ಶಿಲ್ಪಾ ಬಿರಾದರ್, ಕು. ರಂಜಿತಾ, ಪ್ರಿಯಾಂಕಾ, ಕು. ಜ್ಯೋತಿ, ವಾಣಿಶ್ರೀ, ಕು. ಸೌಮ್ಯ, ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಭೀಮಾಶಂಕರ ಪೂಜಾರಿ ಸ್ವಾಗತ. ನಿರೂಪಿಸಿ ವಂದಿಸಿದರು.

## ಸಂಗಮೇಶ ಹಂಡೆಗೆ ಪುಟ್ಟಗೌರಿ ಯಿಂದ ಸನ್ಮಾನ




ಮಲ್ಲಮ್ಮ ನುಡಿ ವಾರ್ತೆ

ಹುಲಸೂರ:–ಇಲ್ಲಿಯ ಸಂಸ್ಥಾನ ಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಶಿವಾನಂದ ಸ್ವಾಮಿಜಿ ರವರ ಸಾನಿಧ್ಯದಲ್ಲಿ ಅದ್ದೂರಿಯಾಗಿ ಜರುಗಿದ "ಮಕ್ಕಳ ಜಾತ್ರೆ" ಸಮಾರಂಭದಲ್ಲಿ ಸಮಾಜ ಸೇವಕ ಕಾಡವಾದ ಗ್ರಾಮ ಪಂಚಾಯತನ ಕರವಸೂಲಿಗಾರ ಸಂಗಮೇಶ ಹಂಡೆ ರವರಿಗೆ ಪುಟ್ಟ ಗೌರಿ ಹಾಗೂ ಕನ್ನಡತಿ ಧಾರವಾಹಿಯ ನಟಿ ರಂಜನಿ ರಾಘವನ್, ನಮ್ಮ ಕನ್ನಡ ಟಿವಿ ಮುಖ್ಯಸ್ಥ ಡಾ. ಎಸ್. ಎಮ್ ಭಕ್ತ ಕುಂಬಾರ, ಶಿವಾನಂದ ಸ್ವಾಮಿಜಿ ಸಾಯಗಾಂವ, ಕಸಪ ಅಧ್ಯಕ್ಷ ಸುರೇಶ ಚನ್ನಶೆಟ್ಟಿ, ಬಲರಾಮ ಮೊರೆ, ಅಂಚೆ ಇಲಾಖೆಯ ಅರುಣ ನಿಣ್ಣೆ ಸೇರಿದಂತೆ ಅನೇಕ ಗಣ್ಯರು ಸೇರಿ ಸತ್ಕರಿಸಿದರು.

# ವಿದ್ಯಾರ್ಥಿಗಳು ಜೀವನದಲ್ಲಿ ಉನ್ನತ ಗುರಿಗಳನ್ನು ಇಟ್ಟುಕೊಳ್ಳಿ:– ಚಂದ್ರಕಾಂತ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ವಿದ್ಯಾರ್ಥಿಗಳು ಜೀವನದಲ್ಲಿ ಉನ್ನತ ಗುರಿಗಳನ್ನು ಇಟ್ಟುಕೊಂಡು ಉನ್ನತ ಪ್ರಗತಿಯನ್ನು ಸಾಧಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆ( ಪದವಿ ಪೂರ್ವ ) ಜಿಲ್ಲಾ ಉಪ ನಿರ್ದೇಶಕ ಚಂದ್ರಕಾಂತ ಶಾಬಾದಕ್ಕರ ತಿಳಿಸಿದರು. ತಾಲೂಕಿನ ನಿರ್ಣಾ ಗ್ರಾಮದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ದೇವಸ್ಥಾನದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆ ಶಿಬಿರದಲ್ಲಿ ಮಕ್ಕಳ ಬೆಳವಣಿಗೆಯ ಮೇಲೆ ಪೋಷಕರ ಒತ್ತಡದ ಪ್ರಭಾವ ಎಂಬ ವಿಷಯದ ಮೇಲೆ ಮಾತನಾಡಿದ ಅವರು, ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವವರು ನೀವೇ, ಜೀವನದಲ್ಲಿ ಉನ್ನತ ಗುರಿಗಳನ್ನು ಇಟ್ಟುಕೊಂಡು ಉನ್ನತ ಪ್ರಗತಿಯನ್ನು ಸಾಧಿಸಬೇಕು, ತಂದೆ ತಾಯಿಗಳ ಆಶೋತ್ತರಗಳನ್ನು ಈಡೇರಿಸಬೇಕು ಸತತವಾಗಿ ಅಧ್ಯಾಯನದಲ್ಲಿ ತೊಡಗಿಕೊಂಡು ಜೀವನವನ್ನು ಸಾಗಿಸಬೇಕು ಉತ್ತಮವಾದ ಫಲಿತಾಂಶ ಪಡೆಯುವ ಪ್ರಯತ್ನ ಮಾಡಬೇಕು ಎಂದು ಹೇಳಿದರು. ಪ್ರಶಾಂತ ಹೊನ್ನಾವರ ಮಾತನಾಡಿ, ಏಕಾಗ್ರತೆಯ ಚಟುವಟಿಕೆಯಿಂದ ಮಕ್ಕಳ ಬೆಳವಣಿಗೆ ಮೇಲೆ ಪೋಷಕರ ಒತ್ತಡವನ್ನು ಕಡಿಮೆ ಮಾಡಬಹುದು ಎಂದರು. ಮನೆಯೇ ಮೊದಲ ಪಾಠ ಶಾಲೆ ತಾಯಿಯೇ ಮೊದಲು ಗುರು ಮಕ್ಕಳ ಬೆಳವಣಿಗೆ ಕಡೆಗೆ ಒಲವುಕೊಡುವ ಪೋಷಕರು ಮಾನಸಿಕ, ಸಾಮಾಜಿಕ, ಭಾವನಾತ್ಮಕ ವಿಕಾಸವನ್ನು ಸಹ ಗಮನದಲ್ಲಿಟ್ಟುಕೊಳ್ಳಬೇಕು ಎಂದು ತಿಳಿಸಿದರು. ಸಂಜೂಕುಮಾರ ಹಂಗರಗಿ ಮಾತನಾಡಿ, ಜೀವನದ ಪ್ರಚಲಿತ ಸನ್ನಿವೇಶಗಳ ಆಧಾರದಲ್ಲಿ ಹ್ಯಾಸ ಸನ್ನಿವೇಶಗಳನ್ನು ಪ್ರಸ್ತುತ ಪಡಿಸಿ ಮಕ್ಕಳನ್ನು ನಗೆಗಡಲಿನಲ್ಲಿ ತೇಲಿಸಿ, ಮಕ್ಕಳ ಒತ್ತಡವನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿದರು. ಉಪನ್ಯಾಸಕ ಸುನೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಕ್ಕಳ ಸರ್ವಾಂಗಿನ ಅಭಿವೃದ್ಧಿ ಆಗಬೇಕಾದರೆ ಅವರ ಮೇಲೆ ಒತ್ತಡ ಹಾಕದೆ ಅವರ ಸಾಮರ್ಥ್ಯಕ್ಕೆ ತಕ್ಕಂತೆ ಸಾಧಿಸುವಂತೆ ಪ್ರೋತ್ಸಾಹಿಸಬೇಕು ಎಂದು ತಿಳಿಸಿದರು. ಯೋಗ ಪಂಡಿತರಾದ ನಿವೃತ್ತ ಉಪನ್ಯಾಸಕ ಗುರುನಾಥ ಮೂಲಗಿ ದಿನನಿತ್ಯ ಜೀವನದಲ್ಲಿ ಆರೋಗ್ಯವನ್ನು ಕಾಪಾಡಿಕೊಳ್ಳುವ ವಿವಿಧ ಯೋಗಾಸನಗಳನ್ನು ಆಹಾರ ಪದ್ಧತಿಗಳನ್ನು ತಿಳಿಸಿಕೊಟ್ಟರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರು ಹಾಗೂ ಶಿಬಿರದ ನಿರ್ದೇಶಕ ಶಿವರಾಜ ಬಿರಾದಾರ್, ಬಾಬುರಾವ ಹಂಗರಗಿ, ಹಣಮಂತ ಗೌಡಗಾಂವಕ್ಕರ್, ವಿಜಯಕುಮಾರ, ಎನ್ಎಸ್ಎಸ್ ಅಧಿಕಾರಿ ಸಂತೋಷ, ಉಪನ್ಯಾಸಕರಾದ ಓಂಕಾರ ರೆಡ್ಡಿ ಸಲಗರ್, ಸರಿತಾ, ಶ್ರೀನಿವಾಸ ಕಾಂಬಳೆ, ಗಿರಿಧರ ರೆಡ್ಡಿ, ರೇಣುಕಾ, ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ವಿದ್ಯಾರ್ಥಿನಿ ರಾಧಿಕಾ ಸ್ವಾಗತಿಸಿದರು. ಅಶ್ವಿನಿ ನಿರೋಪಿಸಿದರು. ಶಿವಾನಿ ವಂದಿಸಿದರು.

## ಪ್ರಥಮ ಸರ್ವೋದಯ ಸಾಹಿತ್ಯ ಸಮ್ಮೇಳನಕ್ಕೆ ಸರ್ವಾಧ್ಯಕ್ಷರಾಗಿ ಹಾರಕೂಡದ ಪೂಜ್ಯ ಶ್ರೀ ಡಾ.ಚನ್ನವೀರ ಶಿವಾಚಾರ್ಯರು ಆಯ್ಕೆ.





ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ: –(ಹುಲಸೂರ) :– ತಾಲೂಕಿನ ಬೇಲೂರ್ ಗ್ರಾಮದಲ್ಲಿ ಉರಿಲಿಂ ಗಪೆದ್ದಿ ಮಠದಲ್ಲಿ ಜರುಗುವ ಶರಣ ಉರಿಲಿಂಗಪೆದ್ದಿ ಉತ್ಸವ, ಪೂಜ್ಯ ಶ್ರೀ ಲಿಂ.ಶಿವಲಿಂಗೇಶ್ವರ ಶಿವಯೋಗಿ ಗಳವರ 56 ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ಜರುಗುವ ಪ್ರಥಮ ಸರ್ವೋದಯ ಸಾಹಿತ್ಯ ಸಮ್ಮೇಳನಕ್ಕೆ ಸಾಹಿತಿ, ಕನ್ನಡ ಪರಿಚಾರಕರು, ಪುಸ್ತಕ ಸಂಸ್ಕೃತಿ, ಹರಿಕಾರರು, ಸರ್ವ ಸಮಾನತೆಯ ಸಾಮರಸ್ಯದ ಪೀಠಾಧಿಪತಿಗಳಾದ ಡಾ.ಚನ್ನವೀರ ಶಿವಾಚಾರ್ಯ ಅವರನ್ನು ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿ ತೆಂದು ಪೀಠಾಧಿಪತಿ ಪೂಜ್ಯಶ್ರೀ ಪಂಚಾಕ್ಷರಿ ಸ್ವಾಮೀಜಿ ಮತ್ತು ಸಂಯೋಜಕ ಡಾ.ಗವಿಸಿದ್ಧಪ್ಪ ಪಾಟೀಲ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೇಲೂರಿನ ಮಠದಲ್ಲಿ ಜರುಗಿದ ಪೂರ್ವ ಭಾವಿ ಸಭೆಯಲ್ಲಿ ಸದ್ಭಕ್ತರು, ಸಾಹಿತಿ, ಕವಿ ಕಲಾವಿದರು ಸೇರಿ

ನಿರ್ಣಯಿಸಿ ಬರುವ ಫೆಬ್ರುವರಿ 22 ಮತ್ತು 23 ರಂದು ಎರಡು ದಿವಸಗಳ ಕಾಲ ನಡೆಯಲಿದೆ. ಸರ್ವರ ಉದಯವಾಗಬೇಕು, ಸಾಹಿತ್ಯ, ಧರ್ಮ, ಸಮಾಜವು ಸಾಮರಸ್ಯದಿಂದ ಬಾಳಬೇಕು. ಯುವಕರಿಗೆ ಆದ್ಯತೆ ನೀಡಲು ತೀರ್ಮಾನಿಸಲಾಯಿತು. ತಹಸೀಲ್ದಾರ ಶಿವಾನಂದ

ಮೇತ್ರೆ, ಮುಖಂಡರಾದ ಜಗನ್ನಾಥ ಚಿಲ್ಲಾಬಟ್ಟಿ, ಸುರೇಶ ಕಾನೇಕರ್, ಡಾ.ರಾಜಕುಮಾರ ಮಾಳಗೆ, ಡಾ.ಸಂಜುಕು ಮಾರ ನಡುಕರ್, ಸಂಗಮೇಶ ಜವಾದಿ ರಾಜಕುಮಾರ ಮೋರೆ, ರಾಜಕುಮಾರ ಮಾಳಗೆ, ಸಂಜುಕುಮಾರ ಖೇಲೆ ವಕೀಲರು, ಭೀಮಶಾ ವಾಘಮಾರೆ, ನಿತ್ಯಾನಂದ ಮಂಠಾಳಕರ್, ಮಹಾಲಿಂಗ ದೇವರು, ನವನಾಥ ಬೆಳ್ಳೆ, ಪ್ರಕಾಶ ಸಿಂಗೆ, ಬಸವಸಾಗರ ತುತಾರೆ, ,ನಾಗಪ್ಪ ನಿಣ್ಣೆ, ಗುರುನಾಥ, ಗೌತಮ ವಾಘಮಾರೆ, ಯೋಗೇಶ ರಾಜಗುರು, ನಿಖೀಲ್ ಬೆಳ್ಳೆ, ಮಚಿಂದ್ರ ಕದಮ್, ರಾಜಪ್ಪ ನಂದುಡೆ, ಸಿದ್ರಾಮ ವಾಘಮಾರೆ, ದಶರಥ ರಾಜಗುರು, ಮಸ್ತಾನ ಪಟೇಲ್, ದತ್ತಾತ್ರೇಯ ಸುಭಾನೆ, ಸಂಜೀವ ತಾಂಬುಳೆ, ಅಶೋಕ್ ಗುಪ್ತಾ, ಅವಿನಾಶ್ ಪಂಚಾಳ, ಚೇತನ್ ರಾಧು, ಗಣೇಶ, ಸನ್ಮುಖ, ಶ್ರಾವಣ, ರವಿ ನಾಗನಾಥ ಬನಸುಡೆ, ,ಶೇಖ ಮಿರಾನ ಸಾಬ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಏಕಅಲ ,ಬೀದಿ ಬದಿ ವ್ಯಾಪಾರಿಗಳ ವಿಭಾಗ, ಮತ್ತು ಜಗನ್ನಾಥ ಮೆಟಾರೆ ಜಿಲ್ಲಾ ಉಪಾಧ್ಯಕ್ಷರು ಏಕಅಲ ಬೀದಿ ಬದಿ ವ್ಯಾಪಾರಿಗಳ ವಿಭಾಗ ಎರಡು ದಿವಸದ ದಾಸೋಹ ಮಾಡಲು ಒಪ್ಪಿಗೆ ಸೂಚಿಸಿದರು.

## ದಿ.ತಾಳಿಕೋಟಿ ಸಹಕಾರಿ ಬ್ಯಾಂಕ್ ಚುನಾವಣೆ:ಅಂತಿಮ ಕಣದಲ್ಲಿ 29 ಅಭ್ಯರ್ಥಿಗಳು

ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಪಟ್ಟಣದ ಪ್ರತಿಷ್ಠಿತ ದಿ.ತಾಳಿಕೋಟಿ ಸಹಕಾರಿ ಬ್ಯಾಂಕ್ ನಿಯಮಿತ ಇದರ ಆಡಳಿತ ಮಂಡಳಿ ನಿರ್ದೇಶಕರ 13 ಸ್ಥಾನಗಳಿಗೆ ಜನವರಿ 19ರಂದು ನಡೆಯಲಿರುವ ಚುನಾವಣೆಗೆ 29 ಉಮೇದುವಾರರು ಕಣದಲ್ಲಿ ಅಂತಿಮವಾಗಿ ಉಳಿದುಕೊಂಡಿದ್ದಾರೆ ಎಂದು ಚುನಾವಣಾಧಿಕಾರಿ ಚೇತನ್ ಭಾವಿಕಟ್ಟಿ ತಿಳಿಸಿದ್ದಾರೆ. ಬ್ಯಾಂಕ್ ಸಭಾ ಭವನದಲ್ಲಿ ಸೋಮವಾರ ನಾಮಪತ್ರ ಹಿಂತೆಗೆದುಕೊಳ್ಳುವ ಅವಧಿ ಮುಗಿದ ನಂತರ ಪತ್ರಿಕಾಗೋಷ್ಠಿ ನಡೆಸಿ ಮಾಹಿತಿ ನೀಡಿದ ಅವರು ಈ ಚುನಾವಣೆಗೆ ಒಟ್ಟು 37 ಜನರು ತಮ್ಮ ನಾಮಪತ್ರಗಳನ್ನು ಸಲ್ಲಿಸಿದ್ದರು ಎಲ್ಲ ನಾಮಪತ್ರಗಳು ಪರಿಶೀಲನೆಯಲ್ಲಿ ಸ್ವೀಕೃತವಾಗಿದ್ದವು, ಇಂದು ನಾಮಪತ್ರ ಹಿಂತೆ ತೆಗೆದುಕೊಳ್ಳವ ದಿನವಾಗಿದ್ದರಿಂದ ಇದರಲ್ಲಿ 8 ಜನರು ತಮ್ಮ ನಾಮಪತ್ರವನ್ನು ಹಿಂತೆಗೆದು–ಕೊಂಡಿದ್ದಾರೆ ಹೀಗಾಗಿ ಒಟ್ಟು 29 ಉಮೇದುವಾರರು ಕಣದಲ್ಲಿ ಅಂತಿಮವಾಗಿ ಉಳಿದುಕೊಂಡಿದ್ದಾರೆ. ಇದರಲ್ಲಿ ಸಾಮಾನ್ಯ ಮೀಸಲಾತಿಯ 7 ಸ್ಥಾನಗಳಿಗೆ 14 ಉಮೇದುವಾರರು ಕುಂಬಾರ ಮಹದೇವಪ್ಪ ಬಸಪ್ಪ, ಚಿನಗುಡಿ ನಾಗಪ್ಪ ಈರಪ್ಪ, ಚೌದರಿ ಚನ್ನಬಸಪ್ಪಗೌಡ ಸಿದ್ದಣ್ಣ ನೀರಲಗಿ, ನಾಗರಳ ಮಲ್ಕಾಜಪ್ಪ ಶರಣಪ್ಪ, ಪಾಟೀಲ ದ್ಯಾಮನಗೌಡ ಕಲ್ಲನಗೌಡ, ಪಾಟೀಲ ಬಸನಗೌಡ ಮಲ್ಲನಗೌಡ, ಪಾಟೀಲ ಮಯೂರ ಮಲ್ಲನಗೌಡ, ಬಿಳೆಭಾವಿ ಈಶ್ವರಪ್ಪ ಬಸಪ್ಪ, ಯಾಳಗಿ ಚಿಂತಪ್ಪಗೌಡ ಸಾಹೇಬಗೌಡ, ಯಾಳವಾರ ಪವಡೆಪ್ಪ ಬಸಪ್ಪ, ಸಜ್ಜನ ಕಾಶಿನಾಥ ಚಂದಪ್ಪ, ಸರಶೆಟ್ಟಿ ಮುರಿಗೆಪ್ಪ ಸಂಗನಬಸಪ್ಪ, ಹಜೇರಿ ಪ್ರಹ್ಲಾದಸಿಂಗ್ ವಿಠಲಸಿಂಗ್, ಹೆಬಸೂರ ದತ್ತಾತ್ರೇಯ ಸುಬ್ಬಯ್ಯ, ಹಿಂದುಳಿದ ಪ್ರವರ್ಗ ಅ ಮೀಸಲಾತಿಯ 1 ಸ್ಥಾನಕ್ಕೆ 3 ಅಭ್ಯರ್ಥಿಗಳು, ಚವಾಣ ಘನಶ್ಯಾಮ ಮಾರುತಿ, ತಂಗಡಗಿ ಪರಶುರಾಮ ಬಸಪ್ಪ, ಹಜೇರಿ ಅಮರಸಿಂಗ್ ವಿಠಲಸಿಂಗ್ (ಬಾಬು), ಹಿಂದುಳಿದ ವರ್ಗ ಬ ಮೀಸಲಾತಿ 1 ಸ್ಥಾನಕ್ಕೆ 3, ಕುಂ–ಟೋಜಿ ನಿಂಗಪ್ಪ ಗುರಲಿಂಗಪ್ಪ, ಪಾಟೀಲ ಸುರೇಶ್ ಚಂದ್ರಶೇಖರ, ಬಳಗಾನೂರ ಅಶೋಕ ಗುರು ಸಿದ್ದಪ್ಪ, ಪರಿಶಿಷ್ಟ ಜಾತಿ ಮೀಸಲಾತಿಯ 1 ಸ್ಥಾನಕ್ಕೆ 3, ಕಟ್ಟಿಮನಿ ರಾಮಪ್ಪ ಭೀಮಪ್ಪ, ಚಮಲಾಪುರ ಮುತ್ತಪ್ಪ ತಿಮ್ಮಪ್ಪ, ರಾಥೋಡ ದತ್ತು ಮಂಗಲಪ್ಪ, ಪರಿಶಿಷ್ಟ ಪಂಗಡದ ಮೀಸಲಾತಿಯ ಒಂದು ಸ್ಥಾನಕ್ಕೆ2, ತಳವಾರ ಭೀಮಪ್ಪ ಲಕ್ಷ್ಮಪ್ಪ, ಬರದೇನಾಳ ಸಂಜೀವಪ್ಪ ಯಲಗೂರದಪ್ಪ, ಮಹಿಳಾ ಮೀಸಲಾತಿಯ 2 ಸ್ಥಾನಗಳಿಗೆ 4 ಅಭ್ಯರ್ಥಿಗಳು ಕಲಬುರ್ಗಿ ಸುಮಂಗಲಾ ಈರಪ್ಪ, ಕೊಡಕಗಾನೂರ ಗಿರಿಜಾಬಾಯಿ ಬಸಯ್ಯ, ಬಡದಾಳಿ ಶೈಲಾ ವಿಶ್ವನಾಥ, ಬಂದಾಳ ಸಿದ್ದಮ್ಮ ನಿಂಗಪ್ಪ ಉಮೇದುವಾರರು ಸ್ಪರ್ಧಿಸಿದ್ದಾರೆ. ಇಂದೇ ಎಲ್ಲ 29 ಉಮೇದವಾರರಿಗೂ ಚಿಹ್ನೆ ಹಂಚಿಕೆ ಮಾಡಿ ಉಮೇದುವಾರರ ಅಂತಿಮ ಪಟ್ಟಿ ಪ್ರಕಟಿಸಲಾಗಿದೆ. ಜನವರಿ 19ರಂದು ಬೆಳಗ್ಗೆ 9:00 ರಿಂದ 4 ರವರೆಗೆ ಪಟ್ಟಣದ ಎಸ್ ಕೆ ಪದವಿಪೂರ್ವ ಕಾಲೇಜನಲ್ಲಿ ಮತದಾನ ನಡೆದು ಸಂಜೆ ಮತ ಎಣಿಕೆ ನಂತರ ಫಲಿತಾಂಶ ಘೋಷಿಸಲಾಗುತ್ತದೆ ಎಂದು ತಿಳಿಸಿದರು. ಈ ಸಮಯದಲ್ಲಿ ಸಹಾಯಕ ಚುನಾವಣಾಧಿಕಾರಿ ಆರ್.ಬಿ.ಧಮ್ಮೂರಮಠ ಸಿಬ್ಬಂದಿಗಳಾದ ಶ್ರೀಕಾಂತ್ ಬಣ್ಣದ, ಕಾಶಿನಾಥ್ ಹಿರೇಮಠ ಇದ್ದರು.

# ಈಶ್ವರಸಿಂಗ್ ಠಾಕೂರ್ ಅವರಿಗೆ ಒಲಿದ ಕಾಯಕಸೇವಾ ರತ್ನ ಪ್ರಶಸ್ತಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಎ. 12 :– ಬಸವ ಕೇಂದ್ರ ಶರಣ ಸಂಸ್ಕೃತಿ ಉತ್ಸವದ ಪ್ರಯುಕ್ತ ಹಾಗೂ ಪೂಜ್ಯ ಶ್ರೀ ಜಗದ್ಗುರು ಲಿಂ. ಬಸವಕುಮಾರ ಶಿವಯೋಗಿಗಳ ಪುಣ್ಯಸ್ಮರಣೋತ್ಸವದ ನಿಮಿತ್ಯ ಹುಲಸೂರು ಪಟ್ಟಣದಲ್ಲಿ ಶರಣ ಸಂಸ್ಕೃತಿ ಉತ್ಸವ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಹಿಂದೂ ಹೃದಯ ಸಾಮ್ರಾಟ್, ಕ್ರಾಂತಿ ಹೋರಾಟಗಾರ ಈಶ್ವರಸಿಂಗ್ ಠಾಕೂರ್ ಅವರಿಗೆ ಕಾಯಕ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಠಾಕೂರ್ ಅವರು ಈ ಹಿಂದೆ ಧರ್ಮಕ್ಕಾಗಿ ಹೋರಾಟ ಮಾಡುತ್ತ ಪೊಲೀಸರ ಲಾಠಿ ಏಟು ಮತ್ತು ಜೈಲುವಾಸವೇ ನನಗೆ ಸನ್ಮಾನ ಮತ್ತು ಪ್ರಶಸ್ತಿಗಳಾಗಿದ್ದವು. ಆದರೆ ಇಂದು ಬಸವ ತತ್ವದ ಮಠವೊಂದು ಪ್ರಥಮ ಬಾರಿಗೆ ನನಗೆ ಕಾಯಕಸೇವಾ ರತ್ನ ಪ್ರಶಸ್ತಿ ನೀಡಿರುವುದು ಖುಷಿ ತಂದಿದೆ. ಬಸವಕಲ್ಯಾಣದ ಮೂಲ ಅನುಭವ ಮಂಟಪ ಪತ್ತೆ ಹಚ್ಚಬೇಕಾಗಿದೆ. ರಾಮಮಂದಿರ ಮೂಲ ಸ್ಥಾನ ಅಯೋಧ್ಯೆಯಲ್ಲಿ ಸ್ಥಾಪನೆಯಾದಂತೆ, ಬಸವಕಲ್ಯಾಣದಲ್ಲಿ ಮೂಲ ಅನುಭವ ಮಂಟಪ ಸ್ಥಾನ ಪತ್ತೆ ಹಚ್ಚಿ ಸ್ಥಾಪನೆ ಮಾಡುವ ಅಗತ್ಯವಿದೆ. ಇದಕ್ಕೆ ಬೇಕಾಗುವ ಎಲ್ಲಾ ರೀತಿಯ ಹೋರಾಟಕ್ಕೆ ಸಿದ್ಧ ಎಂದು ತಿಳಿಸಿದರು.

ಬಸವಕಲ್ಯಾಣದ ಪೀರ್ ಪಾಷಾ ದರ್ಗಾ ಅನುಭವ ಮಂಟಪದ ಮೂಲಸ್ಥಾನ ಎಂದು ಹೇಳಲಾಗುತ್ತಿದೆ. ಅದನ್ನು ಸಂಶೋಧಿಸಿ, ಸಕಲ ಆಧಾರಗಳನ್ನಿಟ್ಟುಕೊಂಡು ಮೂಲ ಸ್ಥಳದಲ್ಲಿಯೇ ಅನುಭವ ಮಂಟಪ ಸ್ಥಾಪನೆಯಾಗಬೇಕೆಂಬುದು ಬಹುತೇಕರ ಅಭಿಲಾಷೆಯಾಗಿದೆ. ನನಗೆ ಕರೆಸಿ ಗೌರವಿಸಿದ್ದಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದರು. ಇದೇ ವೇಳೆ ಹುಲಸೂರು ಗುರುಬಸವೇಶ್ವರ ಸಂಸ್ಥಾನ ಮಠದ ಪೂಜ್ಯ ಶ್ರೀ ಡಾ. ಶಿವಾನಂದ ಮಹಾಸ್ವಾಮಿಗಳು ದಿವ್ಯ ಸಾನಿಧ್ಯವಹಿಸಿದ್ದರು. ಬಸವ ಕೇಂದ್ರದ ಅಧ್ಯಕ್ಷರಾದ ಶರಣಪ್ಪ ಮಿಠಾರೆ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ ಚನಶೆಟ್ಟಿ, ಅಕ್ಕಮಹಾದೇವಿ ಚಲನಚಿತ್ರದ ನಟಿ ಸುಲಕ್ಷಾ ಕೈರಾ ಸೇರಿದಂತೆ ಇನ್ನಿತರ ಮಠಾಧೀಶರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳು ಅನ್ ಲೈನ್ ಗೇಮ್ ನಿಂದ ದೂರವಿರಿ: ಸೋನು ಸೂದ್



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 12 :– ವಿದ್ಯಾರ್ಥಿಗಳು ಅಧ್ಯಯನ ಮಾಡುವ ಸಂದರ್ಭದಲ್ಲಿ ಆನ್ ಲೈನ್ ಗೇಮ್ ಮತ್ತು ಸಾಮಾಜಿಕ ಜಾಲತಾಣಗಳಿಂದ ದೂರವಿದ್ದು, ಸಾಧನೆಯ ಗುರಿಯೆಡೆಗೆ ಸಾಗಬೇಕು. ಕನಸಿನ ಬೆನ್ನತ್ತಿ ಭವಿಷ್ಯ ರೂಪಿಸಿಕೊಳ್ಳಬೇಕೆಂದು ಖ್ಯಾತ ಚಿತ್ರನಟ ಹಾಗೂ ನಿರ್ಮಾಪಕ ಸೋನು ಸೂದ್ ತಿಳಿಸಿದರು.

ನಗರದ ನೆಹರೂ ಮೈದಾನದಲ್ಲಿ ಗುರುನಾನಕ ದೇವ್ ಶಾಲೆಯು ಐವತ್ತನೇ ವರ್ಷ ಪೂರೈಸಿರುವ ಪ್ರಯುಕ್ತ ಶಾಲೆ ವತಿಯಿಂದ ಆಯೋಜಿಸಿದ "ಬೀದರ ಮ್ಯಾರಥಾನ್" ಗೆ ಚಾಲನೆ ನೀಡಿ ಮಾತನಾಡಿದರು.

ಸಾಧನೆ ಮಾಡಬೇಕು ಎನಿಸಿದರೆ ಇಂದೇ ಉತ್ಸಾಹದಿಂದ ಪ್ರಾರಂಭ ಮಾಡಬೇಕು. ನಾಳೆವರೆಗೆ ಕಾಯಬಾರದು. ತನಗಾಗಿ ಎಲ್ಲರೂ ಬದುಕುತ್ತಾರೆ. ಆದರೆ ಸಮಾಜಕ್ಕಾಗಿ, ದೇಶಕ್ಕಾಗಿ ಬದುಕುವವರ ಸಂಖ್ಯೆ ಕಡಿಮೆಯಾಗಿದೆ. ದೇಶಕ್ಕೆ ಏನಾದರೂ ಕೊಡುಗೆ ನೀಡಿ ಹೆಸರು ಉಳಿಸಿಕೊಳ್ಳಬೇಕು. ಪುಸ್ತಕ ಮುಚ್ಚುವ ವ್ಯಕ್ತಿಗಳಾಗದೆ ಪುಟಗಳನ್ನು ತೆರೆದು ಓದುವ ಆದರ್ಶ ಸಾಧಕರಾಗಬೇಕೆಂದು ಮಕ್ಕಳಿಗೆ ಸೋನು ಸೂದ್ ಕರೆ ನೀಡಿದರು.

ಕೋವಿಡ್ ಸಂದರ್ಭದಲ್ಲಿ ನಾವು ಮಾಡಿದ ಕಾರ್ಯ ಜನಮೆಚ್ಚುಗೆಗೆ ಕಾರಣವಾಗಿದೆ. ಗುರುನಾನಕ್ ಶಿಕ್ಷಣ ಸಂಸ್ಥೆ ಅಧ್ಯಕ್ಷ

# ಭೂ ದಾಖಲೆಗಳ ಡಿಜಿಟಲೀಕರಣಕ್ಕೆ ಶಾಸಕ ಮಾನಪ್ಪ ವಜ್ಜಲ ಭೂ ದಾಖಲೆಗಳ ಡಿಜಿಟಲೀಕರಣಕ್ಕೆ ಚಾಲನೆ




ಮಲ್ಲಮ್ಮ ನುಡಿ ವಾರ್ತೆ

ಲಿಂಗಸುಗೂರು ಪಟ್ಟಣದ ಸಹಾಯಕ ಆಯುಕ್ತರ ಕಚೇರಿ ಬಳಿಯ ಹಳೆಯ ತಹಶೀಲ್ದಾರ್ ಕಚೇರಿ ಕೊಠಡಿಯಲ್ಲಿ ಭೂ ದಾಖಲೆಗಳ ಡಿಜಿಟಲೀಕರಣ ಕೊಠಡಿ ಉದ್ಘಾಟಿಸುವ ಮೂಲಕ ಶಾಸಕ ಮಾನಪ್ಪ ವಜ್ಜಲ್ ಭೂ ದಾಖಲೆಗಳ ಡಿಜಿಟಲೀಕರಣ ಕಾರ್ಯಕ್ಕೆ ಚಾಲನೆ ನೀಡಿದರು.

ಪಟ್ಟಣದತಹಶೀಲ್ದಾರ್‌ಕಚೇರಿಯಲ್ಲಿ ಇಂದು ಸೋಮವಾರ ಕಂದಾಯ ದಾಖಲೆಗಳು ಡಿಜಿಟಲ್ ಕರಣಕ್ಕೆ ಚಾಲನೆ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಮಾನಪ್ಪ ಡಿ ವಜ್ಜಲ್ ರವರು ರೈತರು ಬಡ ಜನರು ತಹಶೀಲ್ದಾರ್ ಕಚೇರಿಗೆ ಅಲೆದಾಟವನ್ನು ತಪ್ಪಿಸಲು ರಾಜ್ಯ ಸರ್ಕಾರದ ಈ ಯೋಜನೆ ಸಹಕಾರಿಯಾಗಲಿದೆ ಎಂದರು.

ಕಂದಾಯ ಇಲಾಖೆ ದಾಖಲೆಗಳು 1954 ರಿಂದ ಇಲ್ಲಿಯವರೆಗೆ ಡಿಜಿಟಲ್ ಕರಣದಿಂದ ಭೂ ದಾಖಲೆಗಳ ದಿನವೊಂದಕ್ಕೆ ಐದುನೂರು ಡಿಜಿಟಲ್ ಮಾಡಲಾಗುತ್ತದೆ ಎಂದು ತಹಶೀಲ್ದಾರ್ ಶಂಶಾಲಂ ನಾಗಡದಿನ್ನಿ ಇವರು ಶಾಸಕರಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಸಹಾಯಕ ಆಯುಕ್ತರಾದ ಬಸವಣ್ಣೆಪ್ಪ ಕಲಶೆಟ್ಟಿ ಉಪ ತಹಶೀಲ್ದಾರ್ ಬಸವರಾಜ ಜಳಕಿಮಠ ಮುಖಂಡರಾದ ಗಿರಿ ಮಲ್ಲನಗೌಡ ಪಾಟೀಲ ಕರಡಕಲ್ ನಾಗಭೂಷಣ ಪಕೀರಪ್ಪ ಸೇರಿದಂತೆ ಇತರರು ಇದ್ದರು.

ಜ.17 ರಂದು ಸಾರ್ವಜನಿಕ ಅಹವಾಲು/ಕುಂದುಕೊರತೆ ದೂರುಗಳ

# ಸ್ವೀಕಾರ, ದೂರುಗಳ ವಿಚಾರಣೆ ಹಾಗೂ ಪ್ರಕರಣಗಳ ವಿಲೇವಾರಿ ಸಭೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.13–ಜಿಲ್ಲಾ ವ್ಯಾಪ್ತಿಯ ಸಾರ್ವಜನಿಕ ಅಹವಾಲು/ಕುಂದು–ಕೊರತೆ ದೂರುಗಳ ಸ್ವೀಕಾರ, ದೂರುಗಳ ವಿಚಾರಣೆ ಹಾಗೂ ಪ್ರಕರಣಗಳ ವಿಲೇವಾರಿ ಸಭೆಯನ್ನು ಜ.17 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.30 ರವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 5 ರವರೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಕರ್ನಾಟಕ ಲೋಕಾಯುಕ್ತದ ಉಪಲೋಕಾಯುಕ್ತ ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಅವರು ಸಭೆಯನ್ನು ಉದ್ಘಾಟನೆ ಮಾಡುವರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧ್ಯಕ್ಷತೆ ವಹಿಸುವರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ.ಶೋಭರಾಣಿ ವಿ.ಜೆ., ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಕೆ.ಎಂ. ರಾಜಶೇಖರ್, ಸಹಾಯಕ ನಿಬಂಧಕರಾದ ಶುಭವೀರ್ ಜೈನ್.ಬಿ., ಉಪ ನಿಬಂಧಕರಾದ ಅರವಿಂದ.ಎನ್.ವಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಯೂ ಆದ ರಾಜೇಶ್ ಎನ್.ಹೊಸಮನೆ ಅವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು ಎಂದು ಕರ್ನಾಟಕ ಲೋಕಾಯುಕ್ತದ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕರಾದ ಸಿದ್ಧರಾಜು.ಸಿ ಅವರು ತಿಳಿಸಿದ್ದಾರೆ.

## ಜ.17 ಕರ್ನಾಟಕ ಲೋಕಾಯುಕ್ತ ಕಾಯ್ದೆ 1988 ರ ಕುರಿತು ಕಾನೂನು ಸಾಕ್ಷರತಾ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.13–ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1988 ರ ಕುರಿತು ಕಾನೂನು ಸಾಕ್ಷರತಾ ಕಾರ್ಯಕ್ರಮವನ್ನು ಜ.17 ರಂದು ಸಂಜೆ 5.30 ರಿಂದ 6.30 ಗಂಟೆಯವರೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ.

ಕರ್ನಾಟಕ ಲೋಕಾಯುಕ್ತದ ಉಪಲೋಕಾಯುಕ್ತ ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ಅಧ್ಯಕ್ಷತೆ ವಹಿಸುವರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ.ಶೋಭರಾಣಿ ವಿ.ಜೆ., ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಕೆ.ಎಂ. ರಾಜಶೇಖರ್, ಸಹಾಯಕ ನಿಬಂಧಕರಾದ ಶುಭವೀರ್ ಜೈನ್.ಬಿ., ಉಪ ನಿಬಂಧಕರಾದ ಅರವಿಂದ.ಎನ್.ವಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಯೂ ಆದ ರಾಜೇಶ್ ಎನ್.ಹೊಸಮನೆ ಅವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು ಎಂದು ಕರ್ನಾಟಕ ಲೋಕಾಯುಕ್ತದ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕರಾದ ಸಿದ್ಧರಾಜು.ಸಿ ಅವರು ತಿಳಿಸಿದ್ದಾರೆ.

---

ಜ.18 ರಂದು ಬಳ್ಳಾರಿ ಜಿಲ್ಲೆಯ ಬಾಕಿ ಇರುವ ದೂರುಗಳ

# ವಿಚಾರಣೆ ಹಾಗೂ ಪ್ರಕರಣಗಳ ವಿಲೇವಾರಿ ಸಭೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.13–ಬಳ್ಳಾರಿ ಜಿಲ್ಲೆಯ ಬಾಕಿ ಇರುವ ದೂರುಗಳ ವಿಚಾರಣೆ ಹಾಗೂ ಪ್ರಕರಣಗಳ ವಿಲೇವಾರಿ ಸಭೆಯನ್ನು ಜ.18 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 5 ಗಂಟೆಯವರೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಕರ್ನಾಟಕ ಲೋಕಾಯುಕ್ತದ ಉಪಲೋಕಾಯುಕ್ತ ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಅವರು ಸಭೆಯನ್ನು ಉದ್ಘಾಟನೆ ಮಾಡುವರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧ್ಯಕ್ಷತೆ ವಹಿಸುವರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ.ಶೋಭರಾಣಿ ವಿ.ಜೆ., ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಕೆ.ಎಂ. ರಾಜಶೇಖರ್, ಸಹಾಯಕ ನಿಬಂಧಕರಾದ ಶುಭವೀರ್ ಜೈನ್.ಬಿ., ಉಪ ನಿಬಂಧಕರಾದ ಅರವಿಂದ.ಎನ್.ವಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಯೂ ಆದ ರಾಜೇಶ್ ಎನ್.ಹೊಸಮನೆ ಅವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು ಎಂದು ಕರ್ನಾಟಕ ಲೋಕಾಯುಕ್ತದ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕರಾದ ಸಿದ್ಧರಾಜು.ಸಿ ಅವರು ತಿಳಿಸಿದ್ದಾರೆ.

## ಜ.18 ರಂದು ಬಳ್ಳಾರಿ ಜಿಲ್ಲೆಯ ನ್ಯಾಯಾಂಗ ಅಧಿಕಾರಿಗಳು ಮತ್ತು ನೌಕರರಿಗೆ ಉಪನ್ಯಾಸ ಕಾರ್ಯಕ್ರಮ


ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜ.13–ಸಾರ್ವಜನಿಕ ಆಡಳಿತದಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆ ಮತ್ತು ಕಾನೂನು ಸೇವೆಗಳ ಪ್ರಾಧಿಕಾರದ ಪಾತ್ರ ಕುರಿತು ಬಳ್ಳಾರಿ ಜಿಲ್ಲೆಯ ನ್ಯಾಯಾಂಗ ಅಧಿಕಾರಿಗಳು ಮತ್ತು ನೌಕರರಿಗೆ ಉಪನ್ಯಾಸ ಕಾರ್ಯಕ್ರಮವನ್ನು ಜ.18 ರಂದು ಸಂಜೆ 5.45 ರಿಂದ 7 ಗಂಟೆಯವರೆಗೆ ನಗರದ ನೂತನ ಜಿಲ್ಲಾ ನ್ಯಾಯಾಲಗಳ ಸಂಕೀರ್ಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ಲೋಕಾಯುಕ್ತದ ಉಪಲೋಕಾಯುಕ್ತ ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಅವರು ಕಾರ್ಯಕ್ರಮ ಉದ್ಘಾಟಿಸುವರು. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಕೆ.ಎಂ. ರಾಜಶೇಖರ್, ಸಹಾಯಕ ನಿಬಂಧಕರಾದ ಶುಭವೀರ್ ಜೈನ್.ಬಿ., ಉಪ ನಿಬಂಧಕರಾದ ಅರವಿಂದ.ಎನ್.ವಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಯೂ ಆದ ರಾಜೇಶ್ ಎನ್.ಹೊಸಮನೆ ಅವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು ಎಂದು ಕರ್ನಾಟಕ ಲೋಕಾಯುಕ್ತದ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕರಾದ ಸಿದ್ಧರಾಜು.ಸಿ ಅವರು ತಿಳಿಸಿದ್ದಾರೆ.

# ತಾಯಿಯ ಋಣ ತೀರಿಸಲು ಸಾಧ್ಯವಿಲ್ಲ, ಶ್ರೀಗಳು



ಇಂಡಿ : ಜೀವನದಲ್ಲಿ ನಾವು ಎಲ್ಲರ ಋಣ ತೀರಿಸಲು ಸಾಧ್ಯವಿದೆ. ಗುರು

ತಾಯಿಯ ಋಣ ತೀರಿಸಲು ಸಾಧ್ಯವಿಲ್ಲ, ಆದರೆ ಶ್ರೀ ಸಿದ್ದೇಶ್ವರ ಶ್ರೀಗಳು ಕೇವಲ ಗುರುವಲ್ಲ ಜತೆಗೆ ಪ್ರತಿಯೊಬ್ಬರಿಗೂ ತಾಯಿಯ ಮಾತೃವಾತ್ಸಲ್ಯ ತೋರಿದ ಮಹಾನ ಸಂತ ಎಂದು ಬೀದರ ಭಾಲ್ಕಿ ಸಂಸ್ಥಾನ ಮಠದ ಪರಮಪೂಜ್ಯ ಶ್ರೀ ಬಸವಲಿಂಗ ಪಟ್ಟದೇವರು ಹೇಳಿದರು. ತಾಲೂಕಿನ ಅಥರ್ಗಾ ಗ್ರಾಮದ ಗುರುದೇವಾಶ್ರಮದಲ್ಲಿ ಜ್ಞಾನಯೋಗಿ ಪರಮಪೂಜ್ಯ ಶ್ರೀ ಸಿದ್ದೇಶ್ವರ ಶ್ರೀಗಳ ಗುರುವಂದನಾ ಮತ್ತು ಮಾತೃ ಶಕ್ತಿ ಸಂಗಮ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅನ್ನ ನೀಡಿದ ತಾಯಿ, ಭೂ ತಾಯಿ, ನಾಡು ತಾಯಿ, ನುಡಿ ತಾಯಿ, ಜಲ ತಾಯಿ, ನಿಸರ್ಗ ತಾಯಿ ಹೀಗೆ ತಾಯಿಯನ್ನು ಕಾಣುತ್ತೇವೆ ಎಂದು ತಮ್ಮ ಪ್ರವಚನದಲ್ಲಿ ಹೇಳುತ್ತಿದ್ದ ಶ್ರೀಗಳು ಸ್ವಾಮಿ ವಿವೇಕಾನಂದ, ಶಿವಾಜಿ, ಭಗತಸಿಂಗ ಮೊದಲಾದವರಿಗೆ ತಾಯಿಯೇ ಪ್ರೇರಣೆಯಾಗಿದ್ದರು.

ಹೀಗಾಗಿ ನಾವು ತಾಯಿಯ ಋಣ ತೀರಿಸಲು ಸಾಧ್ಯವಿಲ್ಲ ಎಂದು ಶ್ರೀಗಳು ಹೇಳುತ್ತಿದ್ದುದು ಅಷ್ಟೇ ನೈಜವಿದೆ ಎಂದರು.

ಇಳಕಲ್ಲ ಚಿತ್ತರಗಿ ಶ್ರೀ ವಿಜಯ ಮಹಾಂತೇಶ ಸಂಸ್ಥಾನಮಠದ ಗುರು ಮಹಾಂತ ಶ್ರೀಗಳು ಮಾತನಾಡಿ ಸಿದ್ದೇಶ್ವರ ಶ್ರೀಗಳು ಪ್ರವಚನದಿಂದ ಸನ್ಮಾರ್ಗ ತೇ–ೂರಿದ ಮಹಾನ್ ಸಂತ. ಅವರ ಪ್ರವಚನದಲ್ಲಿ ಮಹಿಳೆಗೆ ಗೌರವ ನೀಡುವ ಸಂಸ್ಕಾರ ಸಂಸ್ಕೃತಿ ಬೆಳೆಸಿದರು. ಕನ್ನಡ ಇಂಗ್ಲೀಷ ಮರಾಠಿಯಲ್ಲಿ ಪ್ರವಚನ ನೀಡಿ ಪ್ರವಚನದ ಮೂಲಕ ಬದುಕಿಗೆ ಸನ್ಮಾರ್ಗ ಬೆಳಕು ತೋರಿದ ಮಹಾನ ಸಂತ ಎಂದರು.

ಗುರುದೇವಾಶ್ರಮ ಅಥರ್ಗಾದ ಈಶಪ್ರಸಾದ ಶ್ರೀಗಳು, ವಿರಕ್ತಮಠದ ಮುರಗೇಂದ್ರ ಶ್ರೀಗಳು, ಖ್ಯಾತ ಚಿಕ್ಕ ಮಕ್ಕಳ ಹೃದ್ರೋಗ ತಜ್ಞೆ ಡಾ॥ ವಿಜಯಲಕ್ಷ್ಮೀ ಬಾಳೇಕುಂದ್ರಿ, ಉಡುಪಿಯ ಖ್ಯಾತ ಉಪನ್ಯಾಸಕಿ ಅಕ್ಷಯಾ ಗೋಖಲೆ, ಜಂಟಿ ಆಯುಕ್ತರು ಹುಬ್ಬಳ್ಳಿ ಆದಾಯ ತೆರಿಗೆ ಇಲಾಖೆಯ ರವೀಂದ್ರ ಹತ್ತಳ್ಳಿ, ಸಂತ ಸಾಯಿ ಆಂಗ್ಲ ಮಾಧ್ಯಮ ಶಾಲೆ ಪುಣೆ–ಯ ಶಿವಲಿಂಗ ಢವಳೇಶ್ವರ, ಸೋಲಾಪುರದ ಅಜಯ ಜಾಧವ ಮಾತನಾಡಿದರು.

ಕಾರ್ಯಕ್ರದಲ್ಲಿ ಗಣಪತಿ ಬಾಣಿಕೋಲ, ಬಸವರಾಜ ಹೊನ್ನಾಳಿ, ರೇವಣಸಿದ್ದ ಅಂಕಲಗಿ, ಮಲಕಣ್ಣ ಬೊಳೆಗಾಂವ ಮತ್ತಿತರಿದ್ದರು.

# ಹಲಬರ್ಗಾ: ಸಿದ್ಧರಾಮೇಶ್ವರ ನಮ್ಮೂರ ಜಾತ್ರೆಗೆ ಸಂಭ್ರಮದ ತೆರೆ ಸಿದ್ಧರಾಮೇಶ್ವರ ಭಾವಚಿತ್ರ, 12 ಮಠಾಧೀಶರ ಭವ್ಯ ಮೆರವಣಿಗೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 12 :– ಭಾಲ್ಕಿ ತಾಲ್ಲೂಕಿನ ಹಲಬರ್ಗಾ ಗ್ರಾಮದಲ್ಲಿ ಹನ್ನೊಂದು ದಿನಗಳ ಸಿದ್ಧರಾಮೇಶ್ವರ ನಮ್ಮೂರ 12ನೇ ಜಾತ್ರಾ ಮಹೋತ್ಸವ ಶನಿವಾರ ಸಂಭ್ರಮದೊಂದಿಗೆ ತೆರೆ ಕಂಡಿತು.

ಕೊನೆಯ ದಿನ ರಾಚೋಟೇಶ್ವರ ಕತುಣಟಿಜಜಜಿಟಿಜರ್ಜಗದ್ದುಗೆಗೆ ಮಹಾ ರುದ್ರಾಭಿಷೇಕ, ಗಂಗಾ ಪೂಜೆ, ಅಲಂಕೃತ ವಾಹನದಲ್ಲಿ ಸಿದ್ಧರಾಮೇಶ್ವರ ಭಾವಚಿತ್ರ, ಸಾರೋಟಿನಲ್ಲಿ ನಾಡಿನ 12 ಮಠಾಧೀಶರ ಭವ್ಯ ಮೆರವಣಿಗೆ ಹಾಗೂ ಧರ್ಮಸಭೆ ಜರುಗಿದವು.

ಬೀದರ್–ಭಾಲ್ಕಿ ಮುಖ್ಯ ರಸ್ತೆಯಲ್ಲಿ ಇರುವ ಜ್ಯಾಂತಿ ಪೆಟ್ರೋಲ್ ಬಂಕ್ ಸಮೀಪದಿಂದ ಪ್ರಾರಂಭಗೊಂಡ ಮೆರವಣಿಗೆ ಪ್ರಮುಖ ಬೀದಿಗಳ ಮೂಲಕ ಹಾಯ್ದು ರಾಚೋಟೇಶ್ವರ ಸಂಸ್ಥಾನ ಮಠಕ್ಕೆ ತಲುಪಿ ಸಮಾರೋಪಗೊಂಡಿತು.

ಅಲಂಕೃತ ವಾಹನದಲ್ಲಿ ಸಿದ್ಧರಾಮೇಶ್ವರ ಭಾವಚಿತ್ರ ಇರಿಸಲಾಗಿತ್ತು. ಎರಡು ಸಾರೋಟಿನಲ್ಲಿ ಹುಡಗಿ, ಚಿಟಗುಪ್ಪ, ಠಾಣಾಕುಶನೂರು, ಹಣೆಗಾಂವ್, ಕೌಳಾಸ, ಮಳಚಾಪುರ, ನಾಗೂರ, ಮಂಠಾಳ, ಗುಡಪಳ್ಳಿ, ಸದಲಾಪುರ, ಧನಾಶ್ರೀ ಶ್ರೀಗಳು ಹಾಗೂ ಮಾತೆ ಬಸವಾಂಜಲಿ ಇದ್ದರು. ರಾಚೋಟೇಶ್ವರ ಸಂಸ್ಥಾನ ಮಠದ ಪೀಠಾಧಿಪತಿ ಹಾವಗಿಲಿಂಗೇಶ್ವರ ಶಿವಾಚಾರ್ಯ ಮುಂದಾಳತ್ವ ವಹಿಸಿದ್ದರು.

ಮಹಿಳೆಯರು ಕೈಯಲ್ಲಿ ಆರತಿ ಹಿಡಿದು, ಭಜನೆ, ದೇವರ ನಾಮಸ್ಮರಣೆ ಮಾಡುತ್ತ ಸಾಗಿದರು. ರಾಚೋಟೇಶ್ವರರಿಗೆ ಜಯವಾಗಲಿ, ಸಿದ್ಧರಾಮೇಶ್ವರರಿಗೆ ಜಯವಾಗಲಿ, ಹಾವಗಿಲಿಂಗೇಶ್ವರ ಶಿವಾಚಾರ್ಯರಿಗೆ ಜಯವಾಗಲಿ ಎಂಬ ಘೋಷಣೆಗಳು ಮೊಳಗಿದವು. ಕುಂಭ ಕಳಸ ಹೊತ್ತ ಸುಮಂಗಲೆಯರು, ಬ್ಯಾಂಡ್ ಬಾಜಾ ಮೆರವಣಿಗೆಗೆ ವಿಶೇಷ ಕಳೆ ನೀಡಿದವು. ವಿವಿಧೆಡೆಯ ಅಪಾರ ಭಕ್ತರು ಶ್ರದ್ಧೆ, ಭಕ್ತಿಯಿಂದ ಪಾಲ್ಗೊಂಡರು.

ಮಠದಲ್ಲಿ 12 ದಂಪತಿಗಳು 12 ಮಠಾಧೀಶರ ಮಂಟಪ ಪೂಜೆ ನೆರವೇರಿಸಿದರು.

ರಾಚೋಟೇಶ್ವರ ಮಠಕ್ಕೆ ರೂ. 50 ಲಕ್ಷ ಅನುದಾನ: ಈಶ್ವರ ಖಂಡ್ರೆ

ರಾಚೋಟೇಶ್ವರ ಸಂಸ್ಥಾನ ಮಠದ ವಿವಿಧ ಕಾಮಗಾರಿಗಳಿಗೆ ಶಾಸಕರ ನಿಧಿಯಿಂದ ಇನ್ನೂ ರೂ. 50 ಲಕ್ಷ ಕೊಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಭರವಸೆ ನೀಡಿದರು.

ರಾಚೋಟೇಶ್ವರ ಸಂಸ್ಥಾನ ಮಠದಲ್ಲಿ ನಡೆದ ಸಿದ್ಧರಾಮೇಶ್ವರ ನಮ್ಮೂರ 12ನೇ ಜಾತ್ರಾ ಮಹೋತ್ಸವ ಸಮಾರೋಪ ಹಾಗೂ ಧರ್ಮಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈಗಾಗಲೇ ಕಲ್ಯಾಣ ಮಂಟಪ ನಿರ್ಮಾಣ ಸೇರಿದಂತೆ ಮಠಕ್ಕೆ ರೂ. 50 ಲಕ್ಷ ಅನುದಾನ ಒದಗಿಸಲಾಗಿದೆ ಎಂದು ತಿಳಿಸಿದರು.

ಹಿಂದೆ ಕಿರಿದಾಗಿದ್ದ ಮಠ ಈಗ ವಿಶಾಲವಾಗಿದೆ. ಹಾವಗಿಲಿಂಗೇಶ್ವರ ಶಿವಾಚಾರ್ಯರು ಮಠವನ್ನು ಮಾದರಿಯಾಗಿ ರೂಪಿಸಿದ್ದಾರೆ. ಭಕ್ತರ ಮನಸ್ಸು ಕಟ್ಟುವ ಕೆಲಸವನ್ನೂ ಅವರು ಮಾಡುತ್ತಿದ್ದಾರೆ ಎಂದು ಹೇಳಿದರು.

ಪ್ರಸ್ತುತ ಮಕ್ಕಳಿಗೆ ಉತ್ತಮ ಸಂಸ್ಕಾರ ಕೊಡುವ ಅಗತ್ಯವಿದೆ. ಮಠ, ಮಾನ್ಯಗಳಿಂದ ಉತ್ತಮ ಸಂಸ್ಕಾರ ದೊರೆಯುತ್ತದೆ ಎಂದು ತಿಳಿಸಿದರು.

ಮಠದ ಪೀಠಾಧಿಪತಿ ಹಾವಗಿಲಿಂಗೇಶ್ವರ ಶಿವಾಚಾರ್ಯರು ಮಾತನಾಡಿ, 11 ದಿನಗಳ ಜಾತ್ರೆ ಅದ್ಧೂರಿ ಹಾಗೂ ಅರ್ಥಪೂರ್ಣವಾಗಿ ನೆರವೇರಿದ್ದಕ್ಕೆ ಸಂತಸವಾಗಿದೆ ಎಂದು ಹೇಳಿದರು.

ಜಾತ್ರೆಯ ಕಾರ್ಯಗಳಿಗೆ ಹಲಬರ್ಗಾ ಹಾಗೂ ವಿವಿಧೆಡೆಯ ಭಕ್ತರು ತನು, ಮನ, ಧನದಿಂದ ಸಹಕಾರ ನೀಡಿದ್ದಾರೆ ಎಂದು ತಿಳಿಸಿದರು.

ಧ್ಯಾನ ಮಂದಿರ, ದಾಸೋಹ ಭವನ, ಕಲ್ಯಾಣ ಮಂಟಪ, ಸೋಮೇಶ್ವರ ನಿಲಯ, ಅಂ–ದದ ಉದ್ಯಾನ, ರಾಚೋಟೇಶ್ವರ, ಹಾನಗಲ್ ಕುಮಾರ ಶಿವಯೋಗಿಗಳ ಪ್ರತಿಮೆ ಮೊದಲಾದ ಅಭಿವೃದ್ಧಿ ಕೆಲಸಗಳು ಮಠದಲ್ಲಿ ಆಗಿವೆ. ಮಠ ಎಲ್ಲರ ಸಹಕಾರದಿಂದಾಗಿಯೇ 12 ವರ್ಷಗಳಲ್ಲಿ ಬೃಹತ್ ಆಗಿ ಬೆಳೆಯಲು ಸಾಧ್ಯವಾಗಿದೆ ಎಂದು ಹೇಳಿದರು.

ಸ್ವಾಮೀಜಿಗಳು, ಗಣ್ಯರು ವೇದಿಕೆ ಮೇಲೆ ಉಪಸ್ಥಿತರಿದ್ದರು.

# ನಿರ್ಣಾ; ಸಹಕಾರಿ ಸಂಘಕ್ಕೆ ನಿರ್ದೇಶಕ ಅಯ್ಕೆ

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ : ತಾಲೂಕಿನ ನಿರ್ಣಾ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ 12 ಸದಸ್ಯರ ಆಯ್ಕೆಗೆ ರವಿವಾರ ಚುನಾವಣೆ ನಡೆಯಿತು. ಸಂಜೆ ಮತ ಎಣಿಕೆ ಮುಗಿದ ನಂತರ ಫಲಿತಾಂಶವನ್ನು ಚುನಾವಣಾಧಿಕಾರಿ ಬಸವರಾಜಯ್ಯ ಸಾಲಿಮಠ ಘೋಷಣೆ ಮಾಡಿದರು. ಸಾಲಗಾರರ ಸಾಮಾನ್ಯ ಸ್ಥಾನಕ್ಕೆ 05, ಮಹಿಳಾ ಸ್ಥಾನಕ್ಕೆ 02, ಪರಿಶಿಷ್ಟ ಜಾತಿಗೆ 01, ಪರಿಶಿಷ್ಟ ಪಂಗಡಕ್ಕೆ 01 ಪ್ರವರ್ಗ (ಎ) 01 ಪ್ರವರ್ಗ (ಬಿ) ಹಾಗೂ ಸಾಲಗಾರರಲ್ಲದ 1 ಸ್ಥಾನ ಒಟ್ಟು 12 ಸ್ಥಾನಗಳಿಗೆ ನಡೆದ ಚುನಾವಣೆ ಫಲಿತಾಂಶ ಈ ಕೆಳಗಿನಂತಿದೆ. ಸಾಲಗಾರರ ಸಾಮಾನ್ಯ ಸ್ಥಾನ: ಜಗನಾಥ ರೆಡ್ಡಿ ರಾಜರೆಡ್ಡಿ, ತುಕರಾಮ ಸಾಯಪ್ಪ, ವಿಜಯಕುಮಾರ್ ಭೀಮಶಾ, ಕೃಷ್ಣರೆಡ್ಡಿ ಸಂಗಾ–ರೆಡ್ಡಿ, ಚಂದ್ರಶೇಖರ್ ಹಾವಶೆಟ್ಟಿ, ಪರಿಶಿಷ್ಟ ಜಾತಿ ಸ್ಥಾನಕ್ಕೆ:– ತಿಪ್ಪಣ್ಣ ಮರೇಪ್ಪ, ಪರಿಶಿಷ್ಟ ಪಂಗಡ ಸ್ಥಾನಕ್ಕೆ:– ಮಲ್ಲಪ್ಪ ರೇವಣ್ಣಪ್ಪ, ಹಿಂದುಳಿದ ವರ್ಗ(ಎ) ಎಂ.ಡಿ.ರಸೂಲ ಅಹ್ಮದ್ ಖಾಜಾಸಾಬ್ ಲಶ್ಕೇರಿ, ಹಿಂದುಳಿದ ವರ್ಗ(ಬಿ) ಚಂದ್ರಶೇಖರ್ ಶಂಕರರಾವ, ಮಹಿಳಾ ಸ್ಥಾನಕ್ಕೆ:– ರಂಗಮ್ಮಾ , ಲಕ್ಷ್ಮಿಬಾಯಿ ಸಂಜೂಕುಮಾರ್, ಸಾಲಗಾರರಲ್ಲದ ಸ್ಥಾನಕ್ಕೆ:– ಹಣಮಂತರೆಡ್ಡಿ ರಾಮರೆಡ್ಡಿ ಆಯ್ಕೆ ಆಗಿದ್ದಾರೆ ಎಂದು ಚುನಾವಣಾಧಿಕಾರಿ ಬಸವರಾಜಯ್ಯ ಸಾಲಿಮಠ ತಿಳಿಸಿದ್ದಾರೆ.

# ಸಂಕ್ರಾಂತಿ ಸುಗ್ಗಿ–ಇಳಕಲ್ಲ ಸೀರೆಯಲ್ಲಿ ಮಿಂಚಿದ ನಾರಿಯರು



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.13–ನಗರದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಬಸವೇಶ್ವರ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳೂ ಸೋಮವಾರ ಸಂಕ್ರಾಂತಿ ಸುಗ್ಗಿಯನ್ನು ಅದ್ದೂರಿಯಾಗಿ ಆಚರಿಸಿ ಸಂಭ್ರಮಿಸಿದರು.

ಬೆಳಿಗ್ಗೆ ಬೀಳೂರ ಗುರುಬಸವ ಮಹಾಸ್ವಾಮಿಗಳಿಗೆ ಪೂಜೆ ಸಲ್ಲಿಸಿದ ನಂತರ ದೇವಸ್ಥಾನದ ಮುಂಭಾಗದಲ್ಲಿ ಬೀಳೂರ ಅಜ್ಜನ ಭಾವಚಿತ್ರಕ್ಕೆ ಪುಷ್ಪ ಸಲ್ಲಿಸಿದ ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ ಮೆರವಣಿಗೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಹಬ್ಬಗಳು ಭಾರತೀಯ ಸಂಸ್ಕೃತಿಯ ಏಕತೆಯ ಪ್ರತೀಕ. ಭಾರತೀಯ ಸಂಸ್ಕೃತಿ ಧರ್ಮ ಮತ್ತು ಕೃಷಿಯೊಂದಿಗೆ ಆಳವಾದ ಸಂಬಂಧ ಹೊಂದಿದ್ದು ವೈವಿಧ್ಯಮಯ ಸಮುದಾಯಗಳನ್ನು ಒಂದುಗೂಡಿಸುವ ಹಬ್ಬವಾಗಿದೆ ಎಂದರು.

ಸಂಘದ ಆಡಳಿತಾಧಿಕಾರಿ ಡಾ.ವಿಜಯಕುಮಾರ ಕಟಗಿಹಳ್ಳಿಮಠ, ಪದನಿಮಿತ್ಯ ಕಾರ್ಯದರ್ಶಿ ಡಾ.ಎಸ್.ಎಂ.ಗಾಂವಕರ, ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎನ್.ಹೆಚ್.ಬೇವಿನಹಳ್ಳಿ ಇದ್ದರು.

ಸಂಕ್ರಾಂತಿಯ ಸಂಭ್ರಮ: ಉತ್ತರ ಕರ್ನಾಟಕದ ಸಾಂಪ್ರದಾಯಿಕ ಉಡುಗೆ ಇಳಕಲ್ ಸೀರೆ ಉಟ್ಟ ವಿದ್ಯಾರ್ಥಿನಿಯರು, ತಲೆಗೆ ಪೇಟಾ ಧರಿಸಿದ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಜನಪದ ಹಾಡಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದರು.

# ಜ.17ರಂದು ಜಿಲ್ಲಾಡಳಿತದಿಂದ ಶ್ರೀಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಆಚರಣೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜ.13 –ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜನವರಿ 17ರ ಬೆಳಿಗ್ಗೆ 11 ಗಂಟೆಗೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟಿಸುವರು.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು.

ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ಮಾನವಿ ಕ್ಷೇತ್ರದ ಶಾಸಕರಾದ ಜಿ ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ ವಜ್ಜಲ್, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ರಾಯಚೂರು ಮಹಾನಗರ ಪಾಲಿಕೆಯ ಅಧ್ಯಕ್ಷರಾದ ನರಸಮ್ಮ ನರಸಿಂಹಲು ಮಾಡಗಿರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಶಾಲಾ ಶಿಕ್ಷಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಕೃಷ್ಣ ಭಾಜಪೇಯಿ, ರಾಯಚೂರ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ತುಕಾರಾಂ ಪಾಂಡ್ವೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪುಟ್ಟಮಾದಯ್ಯ ಎಂ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ತುರುಕನಡೋಣಿ ಶಿಕ್ಷಕರಾದ ಆಂಜನೇಯ ಅವರು ಉಪನ್ಯಾಸ ನೀಡುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ದತ್ತಪ್ಪ ಸಾಗೂರು ನಾಯಕ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸತ್ಸಂಗ ಕಾರ್ಯಕ್ರಮ ಯಶಸ್ವಿ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ ಬ್ರಾಂಚನಲ್ಲಿ ಜನವರಿ 12 2025ರಂದು, ರವಿವಾರದಂದು ಭಕ್ತಿ ಪರ್ವದ ನಿಮಿತ್ಯ ಸಂತ ನಿರಂಕಾರಿ ಆಧ್ಯಾತ್ಮಿಕ ಸತ್ಸಂಗದ ನಿಯೋಜನೆ ಮಾಡಲಾಯಿತು. ಸತ್ಗುರು ಮಾತಾ ಸುದಿಕ್ಷಾ ಜೀ ಮಹಾರಾಜ ಇವರ ಅಪಾರ ಕೃಪೆಯಿಂದ, ಬೆಂಗಳೂರು ಝೋನ್ 41 ಕರ್ನಾಟಕ ಝೊನಲ ಇಂಚಾರ್ಜ ಸುನೀಲಕುಮಾರ ರಾತ್ರ ಜೀ ಇವರ ಆಶೀರ್ವಾದದಿಂದ ಈ ಸತ್ಸಂಗ ಕಾರ್ಯಕ್ರಮ ಯಶಸ್ವಿಯಾಯಿತು. ಬೆಂಗಳೂರಿನ ಸಂತ್ ಮಹಾತ್ಮರದ ಗಣೇಶ್ ದೇವಾಡಿಗ ಜೀ ಇವರ ಉಪಸ್ಥಿತಿಯಲ್ಲಿ ಹುಮನಾಬಾದ, ಕಲಬುರ್ಗಿ, ಬಸವಕಲ್ಯಾಣ, ಚೌಕಿವಾಡಿ, ಘಾಟಬೊರಳ, ನಿಪ್ಪಾಣಿ, ಮುಡ್ಬಿ, ಬೀದರ, ಚಿಂಚೋಳಿ, ಚಾಂಗಲೆರ, ಚಂದಾಪುರ ಎಲ್ಲ ಬ್ರಾಂಚಗಳಿಂದ ಸಂತ ಮಹಾತ್ಮರು ಸತ್ಸಂಗದಲ್ಲಿ ಭಾಗಿಯಾಗಿದ್ದರು. ಈ ಸತ್ಸಂಗದಲ್ಲಿ ಬೆಂಗಳೂರಿನ ಗಣೇಶ ಮಹಾರಾಜರು ನಿರಂಕಾರ ಪ್ರಭು ಪರಮಾತ್ಮನ ಜ್ಞಾನದ ಬಗ್ಗೆ ಹೇಳುತ್ತಿದ್ದರು. ಪರಮಾತ್ಮನ ಬ್ರಹ್ಮಜ್ಞಾನ ಪಡೆದುಕೊಂಡಿದ ಮೇಲೆ ಜೀವನದಲ್ಲಿ ಭಕ್ತಿ ಶುರು ವಾಗುತ್ತದೆ, ಸೃಷ್ಟಿಕರ್ತ ಪರಮಾತ್ಮನು ಒಬ್ಬನ್ನೇ ಇದ್ದಾನೆ ಇದು ಸತ್ಗುರು ಮಾತಾಜಿಯವರು ಈ ಪರಮಾತ್ಮನ ದರ್ಶನವನ್ನು ಮಾಡಿಸುತ್ತಿದ್ದಾರೆಯೆಂದು ಗಣೇಶ ಮಹಾರಾಜರು ತಿಳಿಸಿದರು. ಈ ಸತ್ಸಂಗದಲ್ಲಿ ಹುಮನಾಬಾದ ಬ್ರಾಂಚದ ಜ್ಞಾನ ಪ್ರಚಾರಕರು ಹಾಗು ಮುಖಿ ರಾಜಕುಮಾರ ಧುಮಾಳೆ ಜೀ, ಸೇವಾದಳದ ಇಂಚಾರ್ಜ್‌ರಾದ ನಿತಿನ ಸೂರ್ಯವಂಶಿ ಜೀ, ಕಲಬುರ್ಗಿ ಬ್ರಾಂಚದ ಸತ್ಸಂಗ ಇಂಚಾರ್ಜ್ ರಾದ ಸಂತೋಷ ರಾಠೋಡ ಜೀ, ಕಲಬುರ್ಗಿ ಸೇವಾದಳದ ಸಂಚಾಲಕರಾದ ರವೀಂದ್ರ ಟಕಲೇ ಜೀ ಮತ್ತು ಎಲ್ಲ ಸೇವಾದಳ ಸದಸ್ಯರು ಮತ್ತು 300–400 ಸಂತ ಮಹಾತ್ಮರು ಸತ್ಸಂಗದಲ್ಲಿ ಭಾಗಿಯಾಗಿದ್ದರು. ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿತ್ತು. ಪ್ರತಿ ರವಿವಾರ ಮುಂಜಾನೆ 11 ಗಂಟೆ ಯಿಂದ 1 ವರೆಗೆ ಬಾಲಾಜಿ ಮಠದಲ್ಲಿ ಸತ್ಸಂಗ ಇರುತ್ತದೆ ಎಲ್ಲರಿಗೂ ಆದರದ ಸ್ವಾಗತ. ಕೋರಿರುತ್ತಾರೆ.

# ಯಾದಗಿರಿ ತಾಲೂಕ ಪಂಚಾಯತ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಗೆ ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಜನವರಿ 13–ಯಾದಗಿರಿ ವಿಧಾನಸಭಾ ಮತಕ್ಷೇತ್ರದ ಶಾಸಕರಾದ ಶ್ರೀ ಚನ್ನಾರೆಡ್ಡಿ ಪಾಟೀಲ್ ತುನ್ನೂರು ಅವರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಕೆ.ಡಿ.ಪಿ ಸಭೆಯನ್ನು 2025ರ ಜನವರಿ 17 ರಂದು ಬೆಳಿಗ್ಗೆ 11 ಗಂಟೆಗೆ ಯಾದಗಿರಿ ತಾಲೂಕ ಪಂಚಾಯತ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಯಾದಗಿರಿ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಅವರು ತಿಳಿಸಿದ್ದಾರೆ.

2024–25ನೇ ಸಾಲಿನ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಗೆ 2024ರ ಡಿಸೆಂಬರ್ ಅಂತ್ಯದವರೆಗಿನ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ವರದಿಯನ್ನು (ಕಡ್ಡಾಯವಾಗಿ ಎ4 ಸೈಜ್ ಲ್ಯಾಂಡ್ ಸ್ಟೇಪ್) ಐದು ಪ್ರತಿಗಳಲ್ಲಿ 2025ರ ಜನವರಿ 15ರ ಮಧ್ಯಾಹ್ನ 2 ಗಂಟೆಯ ಒಳಗೆ ಸಲ್ಲಿಸಬೇಕು. ಹಾಗೂ ಈ ಸಭೆಗೆ ನಿಗದಿಪಡಿಸಿದ ಸಮಯಕ್ಕೆ ಅಧಿಕಾರಿಗಳು ಪ್ರಗತಿ ವರದಿಯೊಂದಿಗೆ ಪ್ರತಿನಿಧಿಯನ್ನು ಕಳುಹಿಸದೇ ಖುದ್ದಾಗಿ ಹಾಜರಾಗುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗಡ್ಡಿ ಗದ್ದೇಮ್ಮ ಜಾತ್ರೆಯಲ್ಲಿ ಮದ್ಯ ಮಾರಾಟ, ದಂಧೆಕೋರರಿಗೆ ಸಾಥ್





ದೇವಿ ದರ್ಶನ ಪಡೆದು ಪುನೀತರಾಗಲು ಆಗಮಿಸುವ ಭಕ್ತರನ್ನ ಟಾರ್ಗೆಟ್ ಮಾಡಿ ಗಡ್ಡಿ ಗದ್ದೇಮ್ಮದೇವಿ ಜಾತ್ರೆಯಲ್ಲಿ ಅಕ್ರಮವಾಗಿ ಮದ್ಯ ರಾಜಾರೋಷವಾಗಿ ಮಾರಾಟವಾಗುತ್ತಿರುವ ದೃಶ್ಯ

(ಶಿವು ರಾಠೋಡ್)

ಮಲ್ಲಮ್ಮ ನುಡಿ ವಾರ್ತೆ

ನಾರಾಯಣಪುರ: ಪ್ರತಿವರ್ಷದಂತೆ ಈ ಬಾರಿಯೂ ಉತ್ತರ ಕರ್ನಾಟಕದ ಸುಪ್ರಸಿದ್ಧ ಶ್ರೀ ಗಡ್ಡಿ ಗದ್ದೇಮ್ಮ ದೇವಿ ಜಾತ್ರೆ ಅದ್ದೂರಿಯಾಗಿ ನಡೆಸಲಾಗುತ್ತಿದೆ. ಆದ್ರೆ ಇಲ್ಲಿಗೆ ಬರುವ ಭಕ್ತರನ್ನೇ ಟಾರ್ಗೆಟ್ ಮಾಡಿ ಗಡ್ಡಿ ಶ್ರೀಗದ್ದೇಮ್ಮ ದೇವಿ ಸನ್ನಿಧಾನದಲ್ಲಿ ಮದ್ಯದ ಘಮ ಹೆಚ್ಚಾಗಿದೆ. ಅಕ್ರಮವಾಗಿ ರಾಜಾರೋಷವಾಗಿ ಮದ್ಯ ಮಾರಾಟ ಮಾಡಲಾಗುತ್ತಿದೆ.

ಭಾರತ ಹುಣ್ಣುಮೆಗೆ ಕರ್ನಾಟಕದ ಮೂಲೆಮೂಲೆಗಳಿಂದ ಲಕ್ಷಾಂತರ ಭಕ್ತರು ಭಂಡಾರದೊಡತಿ ಭಕ್ತರ ಆರಾಧ್ಯದೈವ ಗಡ್ಡಿ ಗದ್ದಮ್ಮ ದೇವಿ ದರ್ಶನಕ್ಕೆ ಆಗಮಿಸುತ್ತಾರೆ. ಇದೇ ಸಂದರ್ಭದಲ್ಲಿ ಮಹಾರಾಷ್ಟ್ರ, ಆಂಧ್ರ ಪ್ರದೇಶ, ತೆಲಂಗಾಣ ಸೇರಿದಂತೆ ಹೊರ ರಾಜ್ಯದಿಂದಲೂ ಅಪಾರ ಪ್ರಮಾಣದ ಭಕ್ತರು ಜಾತ್ರೆಗೆ ಆಗಮಿಸುತ್ತಾರೆ. ಭಾರತ ಹುಣ್ಣುಮೆ ದಿನದಂದೂ ದೇವಿ ದರ್ಶನ ಪಡೆಯುವುದರಿಂದ ಕಷ್ಟ ಕಾರ್ಪಣ್ಯಗಳು ದೂರ ಆಗುತ್ತವೆ ಅನ್ನೋ ನಂಬಿಕೆ ಇದೆ. ಹೀಗಾಗಿ ಅಪಾರ ಸಂಖ್ಯೆಯಲ್ಲಿ ಹುಣ್ಣುಮೆ ಒಂದು ದಿನ ಮುಂಚಿತವಾಗಿ ಭಕ್ತರ ದಂಡು ಜಾತ್ರೆಗೆ ಹರಿದು ಬರುತ್ತೆ. ಏಳು ಗ್ರಾಮಗಳಲ್ಲಿ ಸಂಚಾರಿಸಿ ಉಡಿತುಂಬಿಕೊಂಡು ದೇವಿ ಬರುವದರಿಂದ ಒಂದು ದಿನ ಮೊದಲು ಬಂದು ದೇವಿಗೆ ವಿಶೇಷ ಖಾದ್ಯಗಳನ್ನ ಸಿದ್ದಪಡಿಸಿ ನೈವೇದ್ಯ ಹಿಡಿದು ಜಾತ್ರೆ ಆಚರಿಸುವುದು ಸಂಪ್ರದಾಯ.

ಇನ್ನೂ ದೇವಿ ದರ್ಶನ ಪಡೆದು ಪುನೀತರಾಗಲು ಆಗಮಿಸುವ ಭಕ್ತರನ್ನ ಟಾರ್ಗೆಟ್ ಮಾಡಿ ಗದ್ದೇಮ್ಮ ದೇವಿ ಜಾತ್ರೆಯಲ್ಲಿ ಅಕ್ರಮವಾಗಿ ಮದ್ಯ ರಾಜಾರೋಷವಾಗಿ ಮಾರಾಟ ಮಾಡುತ್ತಾರೆ. ಸುಮಾರು ಎಕರೆ ಪ್ರದೇಶದಲ್ಲಿ ಅದ್ದೂರಿ ಜಾತ್ರೆ ನಡೆಯುತ್ತಿದ್ದು ವಿವಿಧ ಶಾಪ್ ಗಳು ಜಾತ್ರೆಯಲ್ಲಿ ತೆರೆದಿರುತ್ತಾರೆ. ದೇವಿಯ ಸನ್ನಿಧಾನದಲ್ಲಿದ್ದುಕೊಂಡೇ ಕೆಲವರು ಭಕ್ತರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಗಡ್ಡಿ ಗದ್ದೇಮ್ಮ ದೇವಿ ಗ್ರಾಮದಲ್ಲಿ ಮದ್ಯ ಮಾರಾಟಗಾರರು ಕೋಲ್ಡಿಂಕ್ಸ್ ಶಾಪ್ ನ ರೀತಿಯಲ್ಲಿ ಮದ್ಯ ಅಂಗಡಿ ತೆರದು ಪ್ರತಿ ವರ್ಷವು ಅಕ್ರಮವಾಗಿ ಸಾರಾಯಿ ಮಾರಾಟ ಮಾಡಲಾಗುತ್ತಿದೆ. ಕೆಲವು ಅಂಗಡಿಗಳಂತೂ ಮುಂಬಾಗದಲ್ಲೆ ಬಾರ್ ಮಾದರಿಯಲ್ಲೇ ರೆಡಿ ಮಾಡಿ ಅಲ್ಲೇ ಕುಡಿಯುವ ವ್ಯವಸ್ಥೆ ಮಾಡಿದ್ದಾರೆ.

ಚಿಕ್ಕ ಚಿಕ್ಕ ಮಕ್ಕಳಿಂದಲೂ ಮದ್ಯ ಮಾರಾಟ, ಕಣ್ಮುಚ್ಚಿ ಕುಳಿತ ಜಿಲ್ಲಾಡಳಿತ

ಹೌದು ಗಡ್ಡಿ ಗ್ರಾಮದದಲ್ಲಿ ಒಂದು ಕಡೆ ಅದ್ದೂರಿಯಾಗಿ ಜಾತ್ರೆ ನಡೆಯುತ್ತಿದ್ರೇ ಇನ್ನೊಂದು ಕಡೆ ಜಾತ್ರೆಯಲ್ಲೇ ಮೂಲೆ ಮೂಲೆಯಲ್ಲಿ ಮದ್ಯಮಾರಾಟವಾಗುತ್ತಿದೆ. ಇದರಲ್ಲಿ ಚಿಕ್ಕ ಮಕ್ಕಳು ಕೂಡ ಟೆಟ್ರಾ ಪಾಕೆಟ್ ಗಳನ್ನ ಹಣ ಪಡೆದು ಮಾರಾಟ ಮಾಡುವ ದೃಶ್ಯ ಸಾಮಾನ್ಯವಾಗಿ ಕಂಡು ಬರುತ್ತಿದೆ. ಈ ಅಕ್ರಮ ಸಾರಾಯಿ ಮಾರಾಟ ಮಾಡುವ ದಂಧೆ ರಾಜಾರೋಷವಾಗಿ ಮಾಡುತ್ತಿದ್ದಾರೆ. ದೇವಿಯ ಭಂಡಾರ ಸಿಗಬೇಕಿದ್ದ ಜಾಗದಲ್ಲಿ ಇದೀಗ ಎಣ್ಣೆ ಸಿಗುತ್ತಿದ್ದು ಜಿಲ್ಲಾಡಳಿತವೇ ಇದಕ್ಕೆ ನೇರ ಹೊಣೆ ಅಂತಾ ಕೆಲ ಭಕ್ತರು, ಸಾರ್ವಜನಿಕರು ಆಕ್ರೋಶ ಹೊರ ಹಾಕುತ್ತಿದ್ದಾರೆ.

ಅಕ್ರಮಕೋರರಿಗೆ ಸಾಥ್ ನೀಡಿದ್ರಾ ಅಬಕಾರಿ ಹಾಗೂ ಪೊಲೀಸ್ ಸಿಬ್ಬಂದಿ

ಇನ್ನೂ ಈ ವಿಚಾರ ಅಬಕಾರಿ ಇಲಾಖೆ ಸಿಬ್ಬಂದಿಗೂ ಗೊತ್ತಿದೆ. ಪ್ರತಿ ವರ್ಷ ಜಾತ್ರೆಯಲ್ಲಿ ಮದ್ಯ ಮಾರಾಟ ಮಾಡಬಾರದೆಂದು ಸಾಮಾಜಿಕ ಹೋರಾಟಗಾರ, ಪತ್ರಕರ್ತ, ರಾಜ್ಯ ಬುಡಕಟ್ಟು ಜನಾಂಗ ಸಂರಕ್ಷಣಾ ಸಮಿತಿ ರಾಜ್ಯಾಧ್ಯಕ್ಷರಾದ ಅಮರೇಶಣ್ಣ ಕಾಮನಕೇರಿ ತಹಶಿಲ್ದಾರರಿಗೆ, ಹುಣಸಗಿ ಸಿಪಿಆಯ್ ಯವರಿಗೆ ನಾರಾಯಣಪುರ ಪೋಲಿಸ ಠಾಣೆಗೆ ಲಿಖಿತ ದೂರು ಸಲ್ಲಿಸುತ್ತಾ ಬಂದಿದ್ದಾರೆ. ಆದರೆ ಮದ್ಯ ಮಾರಾಟಗಾರರಿಂದ ಹಣ ಪಡೆದು ಸೈಲೆಂಟ್ ಆಗಿದ್ದಾರೆ ಅನ್ನೋ ಆರೋಪ ಕೂಡ ಕೇಳಿ ಬರುತ್ತಿದೆ. ಇತ್ತ ಹುಣಸಗಿ ಮತ್ತು ನಾರಾಯಣಪುರ ಪೊಲೀಸ್ ಠಾಣೆಯ ಕೆಲ ಸಿಬ್ಬಂದಿ ಕೂಡ ಇದರಲ್ಲಿ ಭಾಗಿಯಾಗಿರುವ ಶಂಕೆ ಇದ್ದು ಹೀಗಾಗಿ ಅಕ್ರಮಕ್ಕೆ ಬ್ರೇಕ್ ಹಾಕಬೇಕಿದ್ದವರು ಇದೀಗ ಸಾಥ್ ಕೊಟ್ರಾ ಅನ್ನೋ ಆರೋಪ ಕೇಳಿ ಬರುತ್ತಿದೆ. ಸದ್ಯ ಜಾತ್ರೆ ಮುಗಿಯುವವರೆಗೂ ದೇವಸ್ಥಾನ ಕೆಲವು ಕಿಮೀ ವರೆಗೂ ಮದ್ಯ ಮಾರಾಟಕ್ಕೆ ನಿಷೇಧ ಹಾಕಿದ್ದು ಹೀಗಿದ್ರೂ ರಾಜಾರೋಷವಾಗಿ ಮದ್ಯ ಮಾರಾಟ ಆಗ್ತಿರುವುದರಲ್ಲಿ ಅಧಿಕಾರಿಗಳು ಶಾಮೀಲಾಗಿರುವುದು ಸ್ಪಷ್ಟ ಆಗ್ತಿದೆ.

# ಜವಹಾರ್ ನವೋದಯ ವಿದ್ಯಾಲಯದ 6ನೇ ತರಗತಿಯ ಪ್ರವೇಶ ಪರೀಕ್ಷೆ ಜ.18ಕ್ಕೆ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜವಾಹರ ನವೋದಯ ವಿದ್ಯಾಲಯದಲ್ಲಿ 2025–26ನೇ ಸಾಲಿನಲ್ಲಿ 6ನೇ ತರಗತಿಯ ಪ್ರವೇಶಕ್ಕಾಗಿ ಜನವರಿ 18 ರಂದು ಪ್ರವೇಶ ಪರೀಕ್ಷೆಯನ್ನು ಹಮ್ಮಿಕೊಳ್ಳಲಾಗಿದೆ.

ಈ ಪ್ರವೇಶ ಪರೀಕ್ಷೆಯು ಕೊಪ್ಪಳ ಜಿಲ್ಲೆಯ ಗಂಗಾವತಿ, ಕೊಪ್ಪಳ, ಕುಷ್ಠಗಿ ಮತ್ತು ಯಲಬುರ್ಗಾ ತಾಲೂಕಿನಲ್ಲಿ ಈಗಾಗಲೇ ನಿಗದಿಪಡಿಸಿದ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು, ಹಾಲ್ ಟಿಕೆಟ್ ಡೌನ್ ಲೋಡ್ ಮಾಡಿಕೊಂಡು ಪರೀಕ್ಷೆಗೆ ಹಾಜರಾಹಬೇಕು ಎಂದು ಕುಕನೂರು ಜವಾಹರ ನವೋದಯ ವಿದ್ಯಾಲಯದ ಪ್ರಾಚಾರ್ಯರಾದ ಜಯಾ ಜೆ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗಣಿತ ಕಲಿಕಾ ಆಂದೋಲನ ಜಿಲ್ಲಾಮಟ್ಟದ ಗಣಿತ ವಿಚಾರ ಸಂಕಿರಣ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜನವರಿ 13–ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಅಕ್ಷರ ಫೌಂಡೇಷನ್ ಸಹಯೋಗದಲ್ಲಿ ಗಣಿತ ಕಲಿಕಾ ಆಂದೋಲನದ ಜಿಲ್ಲಾಮಟ್ಟದ ಗಣಿತ ವಿಚಾರ ಸಂಕಿರಣ ಕಾರ್ಯಕ್ರಮವು ರಾಯಚೂರು ಪಟ್ಟಣದ ವಿಜ್ಞಾನ ಕೇಂದ್ರದಲ್ಲಿ ಇತ್ತೀಚೆಗೆ ನಡೆಯಿತು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶಶಿಕಾಂತ್ ಶಿವಪೂರೆ ಅವರು ಉದ್ಘಾಟಿಸಿ ಮಾತನಾಡಿ, ಅಕ್ಷರ ಫೌಂಡೇಷನ್ ಗಣಿತ ಕಲಿಕೆಯಲ್ಲಿ ತನ್ನದೇ ಆದ ಪಾತ್ರವಹಿಸಿದ್ದು, ಜಿಲ್ಲಾ ವ್ಯಾಪ್ತಿಯ 178 ಗ್ರಾಮ ಪಂಚಾಯಿತಿಗಳಲ್ಲಿ 4 ರಿಂದ 6ನೇ ತರಗತಿಯ 23 ಸಾವಿರಕ್ಕೂ ಹೆಚ್ಚು ಮಕ್ಕಳಿಗೆ ಗಣಿತ ಪರೀಕ್ಷೆ ನಡೆಸಿದ್ದು ಮಕ್ಕಳ ಕಲಿಕಾ ಮಟ್ಟ ಸುಧಾರಿಸಲು ಸಹಕಾರಿಯಾಗಿದೆ. ಉತ್ತಮ ಸಾಧನೆ ಮಾಡಿದ 25 ಗ್ರಾಮ ಪಂಚಾಯಿತಿಗಳು ಮತ್ತು 25 ಶಾಲೆಗಳಿಗೆ ಸನ್ಮಾನಿಸಿರುವುದು ಹೆಮ್ಮೆ ತಂದಿದೆ ಎಂದು ಅಕ್ಷರ ಫೌಂಡೇಶನ್ ಕಾರ್ಯ ಶ್ಲಾಘಿಸಿದರು.

ಗುಣಾತ್ಮಕ ಶಿಕ್ಷಣಕ್ಕಾಗಿ ಇಲಾಖೆಯ ಎಲ್ಲಾ ಯೋಜನೆಗಳು ಪ್ರತಿಯೊಂದು ಮಗುವಿಗೂ ತಲುಪಬೇಕು. ಮಕ್ಕಳಿಗೆ ನೈಜ ಅನುಭವದ ಮತ್ತು ವ್ಯವಹಾರಿಕ ಜ್ಞಾನ, ಶಿಕ್ಷಣ ತುಂಬಾ ಅವಶ್ಯಕತೆ ಇದೆ. ಪಾಲಕರು, ಶಿಕ್ಷಕರು ಮಕ್ಕಳ ಉತ್ತಮ ಭವಿಷ್ಯ ನಿರ್ಮಾಣಕ್ಕಾಗಿ ಪ್ರೋತ್ಸಾಹ, ಮಾರ್ಗದರ್ಶನ ನೀಡಿದಲ್ಲಿ ಮಕ್ಕಳು ಸಾಧನೆ ಮಾಡಲು ಸಹಕಾರಿಯಾಗುತ್ತದೆ. ಇಲಾಖೆಯ ಎಲ್ಲಾ ಪ್ರತಿನಿಧಿಗಳು ಜವಾಬ್ದಾರಿತವಾಗಿ ಕಾರ್ಯನಿರ್ವಹಿಸಿ ವರದಿ ಆಧಾರದ ಮೇಲೆ ಕ್ರಿಯಾ ಯೋಜನೆ ರೂಪಿಸಿ ಕಲಿಕಾ ಆಧಾರಿತ ಯೋಜನೆಗಳನ್ನು ವರ್ಗ ಕೋಣೆಯಲ್ಲಿ ಅನುಷ್ಠಾನಗೊಳಿಸಬೇಕು ಎಂದರು.

ಜಿಲ್ಲಾ ಯೋಜನಾಧಿಕಾರಿ ಈರಣ್ಣ ಕೋಸಗಿ ಅವರು ಮಾತನಾಡಿ, ಇಲಾಖೆಯ ಅಧಿಕಾರಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳು ಶಾಲೆಗಳಿಗೆ ಭೇಟಿ ನೀಡಿ ಗಣಿತ ಕಿಟ್ ಬಳಕೆಯ ಬಗ್ಗೆ ವೀಕ್ಷಣೆ ನಡೆಸಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಗಣಿತ ಸ್ಪರ್ಧೆಯಲ್ಲಿ ಎಲ್ಲಾ ಮಕ್ಕಳು ಭಾಗವಹಿಸಿ ಮಕ್ಕಳ ಕಲಿಕಾಮಟ್ಟ ತಿಳಿಯಲು ಸಹಕಾರಿಯಾಗಿದೆ. ಎಲ್ಲಾ ಮಕ್ಕಳು ಗಣಿತ ವಿಷಯವನ್ನು ಆಸಕ್ತಿಯಿಂದ ಕಲಿಯಬೇಕು. ವರದಿ ಆಧಾರದ ಮೇಲೆ ಕ್ರಿಯಾ ಯೋಜನೆ ರೂಪಿಸಿ ಎಲ್ಲಾ ಬಿಆರ್‌ಸಿ ಮತ್ತು ಸಿಆರ್‌ಪಿ ಅವರು ಶಾಲೆಗಳಿಗೆ ಭೇಟಿ ನೀಡಿ ಪ್ರತಿದಿನ ಕಿಟ್ ಬಳಕೆ ಮತ್ತು ಪರಿಹಾರ ಬೋಧನೆಯೊಂದಿಗೆ ಸರಿಪಡಿಸಿಕೊಳ್ಳಲು ಸೂಚಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಡಿಡಿಪಿಐ ಕೆ.ಡಿ.ಬಡಿಗೇರ, ಡಯಟ್ ಪ್ರಾಚಾರ್ಯರಾದ ಆರ್ ಇಂದಿರಾ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರಾದ ಚಂದ್ರಶೇಖರ್ ರೆಡ್ಡಿ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ್ ಪವಾರ್, ದೈಹಿಕ ಶಿಕ್ಷಣ ಅಧಿಕಾರಿ ರಂಗಯ್ಯಸ್ವಾಮಿ, ಗ್ರಾಮ ಪಂಚಾಯಿತಿ ಚಿಕ್ಕಸೂಗೂರುದ ಅಧ್ಯಕ್ಷರಾದ ಮಮತಾ ಅಂಬಯ್ಯಗೌಡ, ವಿಭಾಗೀಯ ಕ್ಷೇತ್ರ ಸಂಯೋಜಕರಾದ ಅಡಿವೇಶ ನೀರಲಕೇರಿ, ಡಯಟ್ ನೋಡಲ್‌ನ ರಾಜೇಂದ್ರ, ಬಿಆರ್‌ಪಿಗಳಾದ ಸೋಮನಾಥ್, ನಾಗರಾಜ್ ಜಾವೂರ್ ಇದ್ದರು. ಸಮಾರಂಭದಲ್ಲಿ 25 ಶಾಲೆಯ ಮುಖ್ಯ ಶಿಕ್ಷಕರು, 25 ಗ್ರಾಮ ಪಂಚಾಯತ್ ಅಧ್ಯಕ್ಷರು, ಪಿ.ಡಿ.ಓ, ಬಿಇಓ, ಬಿಆರ್‌ಸಿ ಹಾಗೂ ಇತರರು ಭಾಗವಹಿಸಿದ್ದರು.

**ದೇವದುರ್ಗ ತಾಲೂಕಿನಲ್ಲಿ ಮಕ್ಕಳ ರಕ್ಷಣೆ ಕಾರ್ಯಾಚರಣೆ ಬಿರುಸು:**

# ಮತ್ತೆ 22 ಮಕ್ಕಳ ರಕ್ಷಣೆ, ಹೊಲದ ಮಾಲೀಕರ ವಿರುದ್ಧ ಪ್ರಕರಣ ದಾಖಲು

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜ.13– ಶಾಲೆ ಬಿಡಿಸಿ ಹೊಲಕ್ಕೆ ಕರೆದೊಯ್ಯುವ ಮಕ್ಕಳನ್ನು ರಕ್ಷಿಸುವ ಕಾರ್ಯಾಚರಣೆಯು ದೇವದುರ್ಗ ತಾಲೂಕಿನಲ್ಲಿ ಬಿರುಸುಗೊಂಡಿದ್ದು, ಜನವರಿ 13ರಂದು ಮತ್ತೆ 22 ಮಕ್ಕಳನ್ನು ರಕ್ಷಿಸಲಾಗಿದೆ. ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ.

ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕರಾದ ಮಂಜುನಾಥ ರೆಡ್ಡಿ ಅವರ ಮಾರ್ಗದರ್ಶನದಲ್ಲಿ ದೇವದುರ್ಗ ತಾಲೂಕಿನ ಕಾರ್ಮಿಕ ನಿರೀಕ್ಷಕರಾದ ಮಲ್ಲಪ್ಪ, ಟ್ರಾಫಿಕ್ ಪಿ.ಎಸ್.ಐ ನಾರಾಯಣ, ಶಿಕ್ಷಣ ಇಲಾಖೆಯ ಇ.ಸಿ.ಓ ರಾಜನಗೌಡ, ಬಿ.ಆರ್.ಪಿ ಸುರೇಶ, ಸಿ.ಆರ್.ಪಿ ಗಳಾದ ದಾಕ್ಷಾಯಿಣಿ, ವೀರಭದ್ರಯ್ಯ, ವೆಂಕಟಾಂಜನೇಯ್ಯ, ಅಂಬಣ್ಣ ಮದಾಳೆ, ಮಹಾದೇವ, ರಘು ಎನ್. ದೇವದುರ್ಗ ಟ್ರಾಫಿಕ್ ಪೊಲೀಸ್ ಠಾಣೆಯ ಸಿಬ್ಬಂದಿ ವಸಂತಕುಮಾರ್, ಮೋಹನ್, ಸಂಗಪ್ಪ ಬಿ., ಡಾನ್ ಬಾಸ್ಕೋ ಸಮಾಜ ಸೇವಾ ಸಂಸ್ಥೆಯ ನಾಗರಾಜ, ಬಸವರಾಜ ಮೇತ್ರಿ ಹಾಗೂ ಹುಸೇನ್ ನಾಯ್ಕ ಅಕೌಂಟೆಂಟ್ ಅವರ ತಂಡವು ಜನವರಿ 13ರಂದು ಸಹ ಮಕ್ಕಳ ರಕ್ಷಣಾ ಕಾರ್ಯಾಚರಣೆಗಿಳಿಯಿತು.

ಮಕ್ಕಳನ್ನು ಶಾಲೆ ಬಿಡಿಸಿ ಕೃಷಿ ಚಟುವಟಿಕೆಗಳಿಗಾಗಿ ಸರಕು ಸಾಗಣೆ ವಾಹನಗಳಲ್ಲಿ ಕರೆದುಕೊಂಡು ಹೋಗಿ ಬಾಲಕಾರ್ಮಿಕತೆಯಲ್ಲಿ ತೊಡಗಿಸುತ್ತಿದ್ದ ವಾಹನಗಳ ಮೇಲೆ ಜನವರಿ 13ರಂದು ಹಠಾತ್ ದಾಳಿ ಮಾಡಿದ ಅಧಿಕಾರಿಗಳು ಮತ್ತು ಸಿಬ್ಬಂದಿಯು 07 ಸರಕು ಸಾಗಣೆ ವಾಹನಗಳನ್ನು ಜಪ್ತಿ ಮಾಡಿ ಮಕ್ಕಳನ್ನು ರಕ್ಷಿಸಿದರು.

ವಾಹನ ಮಾಲೀಕರು ಮತ್ತು ಚಾಲಕರ ವಿರುದ್ಧ ಪೊಲೀಸ್ ಇಲಾಖೆಯ ಅಧಿಕಾರಿಗಳು ಕ್ರಮವಹಿಸಿದರು.

ಪ್ರಕರಣ ದಾಖಲು: ಜನವರಿ 10 ರಂದು ನಡೆದ ಕಾರ್ಯಾಚರಣೆಯಲ್ಲಿ ದೇವದುರ್ಗ ತಾಲೂಕಿನ ಗಬ್ಬೂರು ಹೋಬಳಿ ವ್ಯಾಪ್ತಿಯಲ್ಲಿ ಹತ್ತಿ, ಮೆಣಸಿನ ಕಾಯಿ ಹಾಗೂ ಇನ್ನಿತರೆ ಹೊಲಗಳಲ್ಲಿ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ತಪಾಸಣೆ ನಡೆಸಿದಾಗ ಹತ್ತಿ ಹೊಲದಲ್ಲಿ ಐವರು ಬಾಲಕಾರ್ಮಿಕರು ಕೆಲಸ ಮಾಡುತ್ತಿರುವುದು ಕಂಡು ಬಂದಿದ್ದು, ಈ ಮಕ್ಕಳನ್ನು ಕೆಲಸದಿಂದ ಬಿಡುಗಡೆಗೊಳಿಸಿ, ಶಾಲೆಗೆ ಹೋಗುವಂತೆ ಮನವೊಲಿಸಿ ಮಕ್ಕಳನ್ನು ಪಾಲಕರ ವಶಕ್ಕೆ ಒಪ್ಪಿಸಲಾಗಿದೆ.

ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದ ಹೊಲದ ಮಾಲೀಕರ ವಿರುದ್ಧ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆಯಡಿ ಗಬ್ಬೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಮಕ್ಕಳನ್ನು ಶಾಲೆ ಬಿಡಿಸಿ ಕೃಷಿ ಚಟುವಟಿಕೆಗಳಿಗಾಗಿ ಸರಕು ಸಾಗಣೆ ವಾಹನಗಳಲ್ಲಿ ಕರೆದುಕೊಂಡು ಹೋಗಿ ಬಾಲಕಾರ್ಮಿಕತೆಯಲ್ಲಿ ತೊಡಗಿಸುತ್ತಿದ್ದ 03 ವಾಹನಗಳನ್ನು ಜಪ್ತಿ ಮಾಡಿ ವಾಹನ ಮಾಲೀಕರ, ಚಾಲಕರ ವಿರುದ್ಧ ಪೊಲೀಸ್ ಹಾಗೂ ಸಾರಿಗೆ ಇಲಾಖೆಯ ಅಧಿಕಾರಿಗಳು ಕ್ರಮವಹಿಸಿದ್ದಾರೆ.



ಪಟ್ಟಣದ ಪಿಎಲ್‌ಡಿ ಬ್ಯಾಂಕ್ ಕಚೇರಿಯ ಆವರಣದಲ್ಲಿ ಪಿಎಲ್‌ಡಿ ಬ್ಯಾಂಕ್ ಆಡಳಿತ ಮಂಡಳಿಗೆ ಭಾನುವಾರ ನಡೆದ ಜಿದ್ದಾಜಿದ್ದಿನ ಚುನಾವಣೆ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ವಿಜಯ ಸಾಧಿಸಿದ ಹಿನ್ನಲೆಯಲ್ಲಿ ಮಾಜಿ ಸಚಿವ ರಾಜಶೇಖರ ಪಾಟೀಲ್ ರವರು ಬ್ಯಾಂಕ್ ಆವರಣಕ್ಕೆ ಭೇಟಿ ನೀಡಿ ವಿಜೇತ ಅಭ್ಯರ್ಥಿಗಳಿಗೆ ಸನ್ಮಾನಿಸಿದರು. ಬ್ಯಾಂಕ್ ಆವರಣದಲ್ಲಿ ಜಮಾಯಿಸಿದ್ದ ನೂರಾರು ಕಾಂಗ್ರೆಸ್ ಕಾರ್ಯಕರ್ತರು ವಿಜೇತ ಅಭ್ಯರ್ಥಿಗಳಿಗೆ ಸನ್ಮಾನಿಸಿ ಅಭಿನಂಧಿಸಿ, ಪಟಾಕಿ ಸಿಡಿಸುವ ಮೂಲಕ ಪರಸ್ಪರ ಸಿಹಿ ಹಂಚಿಕೊಂಡು ಸಂಭ್ರಮಸಿದರು. ಈ ಸಂದರ್ಭದಲ್ಲಿ ಎಂಎಲ್‌ಸಿ ಡಾ. ಚಂದ್ರಶೇಖರ ಪಾಟೀಲ್, ಎಂಎಲ್‌ಸಿ ಭೀಮರಾವ ಪಾಟೀಲ್, ವೀರಣ್ಣ ಪಾಟೀಲ್, ಅಭಿಷೇಕ ಪಾಟೀಲ್, ಶಿವರಾಜ ಗಂಗಶೆಟ್ಟಿ, ರಾಜಶೇಖರ ಶಿರಶಟ್ಟಿ, ಶಂಕರ ಗಂಗಾಪಾಟೀಲ್, ಮಾಲ್ಲಿಕಾರ್ಜುನ್ ಕಾಶಪ್ಪನೋರ, ಅಶೋಕಕುಮಾರ ಚಳಕಾಪೂರೆ, ಅಮರ (ಪ್ರದೀಪ) ಪಸಾರ್ಗಿ, ಮಹಾದೇವ ಗಂಗಶಟ್ಟಿ, ಗೌಸಖಾನ್, ನಾಗರಾಜ ಚೀಲಾ, ರಾಹುಲ್ ಉದ್ದಾ, ಮಲ್ಲಿಕಾರ್ಜುನ ಪಂಚಾಳ, ಸತೀಷ ಮಿತ್ರಾ, ಸುರೇಶ ಘಾಂಗ್ರೆ, ಓಂಕಾರ ತುಂಬಾ, ಉಮೇಶ ಜಮಗಿ ಸೇರಿ ಅನೇಕರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ರೈತರಿಗೆ ಸರಕಾರದ ಸೌಲಭ್ಯ ಒದಗಿಸಿ:ಸಚಿವ ಈಶ್ವರ ಖಂಡ್ರೆ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜ.13: ತಾಲೂಕಿನ ಖಟಕ್ ಚಿಂಚೋಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆಯಲ್ಲಿ ಅವಿರೋಧ ಆಯ್ಕೆಗೆ ಸಹಕರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರನ್ನು ಸನ್ಮಾನಿಸಲಾಯಿತು.

ಪಟ್ಟಣದ ಜಿಲ್ಲಾ ಉಸ್ತುವಾರಿ ಸಚಿವರ ನಿವಾಸಕ್ಕೆ ಶನಿವಾರ ಪಿಕೆಪಿಎಸ್‌ನ ನೂತನ ಅಧ್ಯಕ್ಷ ವಿಜಯಕುಮಾರ ವಿಶ್ವನಾಥ ಕಡಗಂಚಿ ಮತ್ತು ಉಪಾಧ್ಯಕ್ಷ ಶಿವಕುಮಾರ ಅಮೃತಪ್ಪ ಬಿರಾದಾರ್ ನೇತೃತ್ವದಲ್ಲಿ, ನಿರ್ದೇಶಕರು, ಮುಖಂಡರು ಭೇಟಿ ನೀಡಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರನ್ನು ಸನ್ಮಾನಿಸಿ ಕೃತಜ್ಞತೆ ಸಲ್ಲಿಸಿದರು.

ಸನ್ಮಾನ ಸ್ವೀಕರಿಸಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಮಾತನಾಡಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಅವಿರೋಧ ಆಯ್ಕೆ ನಡೆದಿರುವುದು ಖುಷಿ ತಂದು ಕೊಟ್ಟಿದೆ. ಎಲ್ಲರೂ ಸೇರಿ ಸಂಘದ ಬಲವರ್ಧನೆ ಜತೆಗೆ ಸರಕಾರದ ಸೌಲಭ್ಯಗಳನ್ನು ರೈತರಿಗೆ ತಲುಪಿಸಿ ಜನರ ಪ್ರೀತಿ, ವಿಶ್ವಾಸ ಗಳಿಸಬೇಕು ಎಂದು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಪಿಕೆಪಿಎಸ್ ನಿರ್ದೇಶಕರಾದ ನಾಗರಾಜ ಪಾಟೀಲ್, ಈಶ್ವರ ಬನ್ನಾಳೆ, ರಮೇಶ ಆರಾಧೆ, ಜನಾರ್ಧನ ಜ್ಯಾಂಜೆ, ಅಮೃತ ಶಿಕ್ಷಣಕರ್, ರಾಜಪ್ಪ ನೇಳಗೆ, ಮೌಲನಾಸಾಬ್ ಮೀರಕಲ್ಲೆ, ವೀರೇಶ ನಿಜಲಿಂಗ, ನಿರ್ಮಲಾಬಾಯಿ ಬೆಳಕೋಟೆ,



ಕಸೂರಿಬಾಯಿ ಶೇರಿಕಾರ್, ಗ್ರಾಮದ ಪ್ರಮುಖರಾದ ಶಾಂತಪ್ಪ ಕಡಗಂಚಿ, ವೈಜಿನಾಥ ಮಾಕಾ, ಓಂಕಾರ ಚೀಲಶೆಟ್ಟಿ, ರಮೇಶ ಕಡಗಂಚಿ, ಮಲ್ಲಿಕಾರ್ಜುನ ಪಾಟೀಲ್ ಮುಗನೂರ್, ಬಸವಲಿಂಗಯ್ಯ ಚಳಕಾಪೂರ, ಸಂಜುಕುಮಾರ ಜವಾದೆ, ಅಬ್ಬಸಖಾನ ಪಠಾಣ, ಶರಣಪ್ಪ ಕಡಗಂಚಿ, ರಮೇಶ ಹೊನ್ನಾಳೆ, ಪಿಂಟು ಉಂಬರಗೆ, ಸಂಗಮೇಶ ಕುರುಬ ಖೇಳಗಿ, ನಾಗರಾಜ ಚೀಲಶೆಟ್ಟಿ, ಶಿವಕುಮಾರ ಚೀಲಶೆಟ್ಟಿ, ಆಕಾಶ ಶೀಲವಂತ, ಬಸವರಾಜ ಪ್ಯಾಗೆ, ಪವನ ಉದ್ದನ್, ಪ್ರಕಾಶ ಬಿರಾದಾರ್, ರಾಜಕುಮಾರ ಬೌದ್ದೆ, ಮಾರುತಿ ಬಾವಿದೊಡ್ಡಿ, ಸಂತೋಷ ಸಿಂದೋಲ್, ಸಚಿನ ಮಡಿವಾಳ, ಶಿವಕುಮಾರ ಹೊನ್ನಾಳೆ, ವೀರಶೆಟ್ಟಿ ಮಡಿವಾಳ, ವೆಂಕಟ ಬುಗಶೆಟ್ಟಿ, ಹಣಮಂತ ಬಿರಾದಾರ್, ಮಿಥುನ ಚನ್ಮಲ್, ಉಮೇಶ ರಟಕಲ್ಲೆ, ಅಮರ ಮಾಕಾ, ಸಂತೋಷ ಕುರುಬ ಖೇಳಗಿ, ಸುರೇಶ ಭುರ್ಕೆ, ಜೈರಾಜ ಹುಡಗೆ, ಶೇಷಪ್ಪ ಮಸಣೆ, ವಿಜಯಕುಮಾರ ಅಜ್ಜಾ, ವಿಷ್ಣು ಬಿರಾದಾರ್, ಶಿವಕುಮಾರ ಬಿರಾದಾರ್, ಮಹಾದೇವ ಚನ್ಮಲ್, ನಂದು ಹಾಲೇಪುರಗೆ, ಅಮರ ತಂಬಾಳೆ, ಸಂತೋಷ ನಿಂಬೂರೆ, ಪ್ರಕಾಶ ಕುರುಬ ಖೇಳಗಿ, ಸಂತೋಷ ಬಿರಾದಾರ್, ರವಿ ಕಡಗಂಚಿ, ವಿನೋದ ಕಡಗಂಚಿ, ಗೋರಖನಾಥ ಮಡಿವಾಳ, ಪ್ರಶಾಂತ ಕುಂಬಾರ, ನಾಗರಾಜ ವಾಡೆ, ಅಭಿ ಸಂಗಶೆಟ್ಟಿ, ಜೈಕಾಂತ ಚನಶೆಟ್ಟಿ, ಡಿಗಂಬರ ವಾಡೇಕರ್, ಶಂಕರ ಬಿರಾದಾರ್, ಸಿದ್ದು ಝಿಳ್ಳೆ, ಜೈರಾಜ ಹತ್ತಿ, ಸತೀಶ ಉಂಬರಗೆ, ಅಮರ ತಂಬಾಳೆ, ಚಾಂದ ಪಟೇಲ್, ಚಾಂದ ಮಿರಕಲ್ಲೆ, ಮಹಾದೇವ ಕಂದಗೂಳ, ದಯಾನಂದ ತುಕಾದೆ, ಸುನಿಲ ಸಾಲನಗರೆ ಇದ್ದರು.

## ತಾಯಿ ಪ್ರೀತಿ, ಅಂತ:ಕರಣದ ಅಕ್ಷಯ ಪಾತ್ರೆ:ಕವಿ ಪಾತ್ರೋಟ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.13:ಜಗತ್ತಿನಲ್ಲಿ ತಾಯಿಗಿಂತ ಮಿಗಿಲಾದದ್ದು ಯಾವುದು ಇಲ್ಲ. ಅವಳ ಅಂತ:ಕರುಣೆ, ಪ್ರೀತಿ, ವಿಶ್ವಾಸ, ಆಶೀರ್ವಾದವಿದ್ದರೆ ಜಗತ್ತನ್ನೇ ಗೆಲ್ಲಬಹುದು ಎಂದು ಜಾಜಿ ಮಲ್ಲಿಗೆ ಕವಿ ಸತ್ಯಾನಂದ ಪಾತ್ರೋಟ ಹೇಳಿದ್ದಾರೆ

ತಾಲೂಕಿನ ಶಿರೂರ ಪಟ್ಟಣದ ಬಸವಲಿಂಗಪ್ಪ ನಡುವಿನಮನಿ ಕುಟುಂಬದವರು ಶನಿವಾರ ತಮಗೆ ನೀಡಿದ ಸತ್ಕಾರ ಸ್ವೀಕರಿಸಿ ಮಾತನಾಡಿದ ಅವರು, ಬರದಲ್ಲೂ ಬತ್ತದ ಗಂಗೆಯ ತಾಯ್ತನದ ಪ್ರತೀಕವೇ ಅಮ್ಮ ಎಂದರು. ಅಮ್ಮನ ಪ್ರೀತಿ, ಮಮಕಾರವನ್ನು ಬೇರೆ ಯಾರಿಂದಲೂ ಪಡೆಯಲು ಸಾಧ್ಯವಿಲ್ಲ. ನಿಸ್ವಾರ್ಥ ಪ್ರೀತಿ, ತ್ಯಾಗದ ಸ್ವರೂಪವೇ ಅಮ್ಮ ಆಗಿದ್ದಾಳೆ ಎಂದ ಕವಿ ಪಾತ್ರೋಟ, ಅಮ್ಮನ ಮೌಲ್ಯ ತಿಳಿಯುವ ಮಕ್ಕಳು ನಾವಾಗಬೇಕಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಪಾತ್ರೋಟ ತಾವು ಈಚೆಗೆ ತಾಯಿಯ ಕುರಿತಾಗಿ ರಚಿಸಿದ 'ತಾನು ಕವಿತೆಯಾಗಿ ನನ್ನನ್ನು ಕವಿಯಾಗಿಸಿದಳು' ಎನ್ನುವ ಕೃತಿಯನ್ನು ನಡುವಿನಮನಿ ಕುಟುಂಬದ ಅಕ್ಕರೆಯ ತಾಯಿ ಶಂಕ್ರಮ್ಮನವರಿಗೆ ನೀಡಿದರು. ಕುಟುಂಬದವರು ಸತ್ಯಾನಂದ ಪಾತ್ರೋಟ ಅವರನ್ನು ಸತ್ಕರಿಸಿದರು. ಬಸವರಾಜ ನಡುವಿನಮನಿ, ರಾಜೀವ್ ನಡುವಿನಮನಿ, ಎಂ.ಬಿ.ಪಾಟೀಲ, ಜಿ.ಎಸ್. ಯಾಳವಾರ, ಕಸಾಪ ಶಿರೂರ ವಲಯ ಘಟಕದ ಅಧ್ಯಕ್ಷ ಸಂಜಯ ನಡುವಿನಮನಿ, ಗುರುಪ್ರಸಾದ ನಡುವಿನಮನಿ ಇದ್ದರು.

## ಬಸವಧರ್ಮ ಪೀಠದ ಏಳಿಗೆಗೆ ಎಲ್ಲರೂ ದುಡಿಯಬೇಕು:ಪಾಟೀಲ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.13:ಬಸವಧರ್ಮ ಪೀಠದ ಏಳಿಗೆಗಾಗಿ ಸದಾ ರಾಷ್ಟ್ರೀಯ ಬಸವದಳದ ಗಣ ನಾಯಕರು ಸದಾ ಸಿದ್ಧರಾಗಿ ದುಡಿಯಬೇಕು ಎಂದು ರಾಷ್ಟ್ರೀಯ ಬಸವದಳದ ರಾಜ್ಯ ಅಧ್ಯಕ್ಷ ಬಸವರಾಜ ಪಾಟೀಲ ಹೇಳಿದ್ದಾರೆ. ಜಿಲ್ಲೆಯ ಕೂಡಲಸಂಗಮದ ಬಳಿ ನಡೆದಿರುವ ಸ್ವಾಭಿಮಾನಿ ಶರಣ ಮೇಳದ ಎರಡನೇ ದಿನದ ಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾತೆ ಮಹಾದೇವಿ ಹಾಗೂ ಲಿಂಗಾನಂದ ಸ್ವಾಮಿಗಳು ಬಸವಣ್ಣನವರ ತತ್ವಸಿದ್ಧಾಂತಗಳನ್ನು ಪ್ರಚಾರ ಮಾಡಿದ ರೀತಿಯಲ್ಲೇ ನಾವೂ ಸಹ ದುಡಿಯಬೇಕು ಎಂದರು.

ಧರ್ಮದ ಏಳಿಗೆಗಾಗಿ ಮೂಢನಂಬಿಕೆ ಇಟ್ಟುಕೊಳ್ಳಬಾರದು.



ವಿಶ್ವಗುರು ಬಸವಣ್ಣನವರ ಸಾಮಾಜಿಕ, ಧಾರ್ಮಿಕ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನಾವು ಯಾರ ವಿರೋಧಿಯೂ ಅಲ್ಲ. ಮಾತಾಜಿ ಹಾಗೂ ಲಿಂಗಾನಂದ ಪೂಜ್ಯರ ಬಸವತತ್ವ ಸಿದ್ಧಾಂತವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸುವ ಕಾರಣಕ್ಕೆ ಸ್ವಾಭಿಮಾನ ಶರಣಮೇಳ ಮಾಡುತ್ತಿದ್ದೇವೆ ಎಂದು ಪಾಟೀಲ ಹೇಳಿದರು. ಬಂಡಿ ಮಂಜುನಾಥ ಮಾತನಾಡಿ, ಮಾತೆ ಮಹಾದೇವಿ ಹಾಗೂ ಲಿಂಗಾನಂದ ಶ್ರೀಗಳು ಬಸವಣ್ಣನವರ ತತ್ವವನ್ನು ಪ್ರಚಾರ ಮಾಡುವಲ್ಲಿ ಸಲ್ಲಿಸಿದ ಸೇವೆ ಅವಿಸ್ಮರಣೀಯ ಎಂದರು. ಶಶಿಕಾಂತ ಬಿರಾದಾರ ಮಾತನಾಡಿದರು. ಧಾರವಾಡದ ಅಬ್ದುಲ್ ರಜಾಕ್ ಖಾದ್ರಿ ಮಾತನಾಡಿ, ಮನುಷ್ಯ ಮನುಷ್ಯನಾಗಿ ಬಾಳಬೇಕು. ಎಲ್ಲರನ್ನೂ ಪ್ರೀತಿಸಿ ಬಸವಣ್ಣನವರು ಹೇಳಿದಂತೆ ಎಲ್ಲರನ್ನೂ ನಮ್ಮವರು ಎಂದು ತಿಳಿದು ಬಾಳಬೇಕು ಎಂದರು.

ವೇದಿಕೆ ಮೇಲೆ ಸಿದ್ದರಾಮ ಚೈತನ್ಯ ಸ್ವಾಮಿಗಳು, ಪೂಜ್ಯ ಶ್ರೀ ಜಯಬಸವಾನಂದ ಸ್ವಾಮಿ ಚಿಕ್ಕಮಗಳೂರು. ಓಂಕಾರೇಶ್ವರ ಸ್ವಾಮಿ ಕಲ್ಯಾಣ ಬಸವೇಶ್ವರ ಮಠ ಸಾಲಹಳ್ಳಿ, ಪೂಜ್ಯ ಸತ್ಯದೇವಿ, ಮಾತೆ ಶಾಂತಾದೇವಿ, ಶಂಕರಲಿಂಗಸ್ವಾಮಿ, ಅಭಿನವ ಗುರುಲಿಂಗರೂಢರು, ಬಾನೂರ ಚನ್ನಪ್ಪ ಇದ್ದರು. ಸಂಜಯ ಪಾಟೀಲ ಸ್ವಾಗತಿಸಿದರು. ನಾಗೇಂದ್ರಪ್ಪ ನಿಂಬೂರಗೆ ನಿರೂಪಿಸಿದರು.

## ಮತ್ತೇ ಪಿಎಲ್ ಡಿ ಬ್ಯಾಂಕ್ ಕಾಂಗ್ರೆಸ್ ತೆಕ್ಕೆಗೆ ಕ್ಷೇತ್ರದ ಜನರು ನನ್ನ ಕೈ ಬಿಟ್ಟಿಲ್ಲ ಪಾಟೀಲ

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್. ಜ. 13 :ಕ್ಷೇತ್ರದ ಜನರು ರಾಜಶೇಖರ ಪಾಟೀಲ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಕೈ ಕೊಟ್ಟಿಲ್ಲ. ರೈತರು. ಕ್ರಷಿಕರು, ವ್ಯಾಪಾರಸ್ಥರು ಹಾಗೊ ಸರ್ವರು ಸದಾ ನಮ್ಮ ಪರವಾಗಿದ್ದಾರೆ ಎಂದು ಪಿಎಲ್ ಡಿ ಬ್ಯಾಂಕ್ ಚುನಾವಣೆಯಲ್ಲಿ ನಮ್ಮ ಪಕ್ಷದ ಪರವಾಗಿರುವ ಅಭ್ಯರ್ಥಿಗಳಿಗೆ ಚುನಾಯಿಸುವುದರ ಮೂಲಕ ಜನ ಸಾಬಿತು ಪಡಿಸಿದ್ದಾರೆ ಎಂದು



ಮಾಜಿ ಸಚಿವ ರಾಜಶೇಖರ ಪಾಟೀಲ ತಿಳಿಸಿದ್ದಾರೆ.

ಪಿಎಲ್ ಡಿ ಬ್ಯಾಂಕ್ ನಲ್ಲಿ ನಮ್ಮ ಪಕ್ಷದ ಬೆಂಬಲಿತ ಹತ್ತು ನಿರ್ದೇಶಕರು ಗೆಲುವು ಸಾಧಿಸಿದ್ದಾರೆ ಎಂದರು. ವಿರೋಧಿಗಳ ನಡುಕ ಶುರುವಾಗಿದೆ ಎಂದರು. ಅಲ್ಲದೆ ವಿವಿಧ ಪಿಕೆಪಿಎಸ್ ಗಳಲ್ಲಿಯೂ ನಮ್ಮ ಬೆಂಬಲಿತರು ಗೆಲುವುಗಳನ್ನು ಸಾಧಿಸಿದ್ದಾರೆ ಎಂದರು. ರಾಜ್ಯದ ಮುಖ್ಯ ಮಂತ್ರಿ, ಸಿದ್ದರಾಮಯ್ಯ, ಡಾ.ಮಲ್ಲಿಕಾರ್ಜುನ ಖರ್ಗೆ, ಡಿ.ಕೆ.ಶಿವಕುಮಾರ್.ಸೇರಿದಂತೆ. ಪಕ್ಷ ಬಡವರ ಪರ ಸಾಕಷ್ಟು ಅಭಿವೃದ್ಧಿ ಸಾಧಿಸಿದೆ. ಗೆಲುವುಗಳಿಗೆ ಗ್ಯಾರಂಟಿ ಗಳು ಕೂಡ ಕಾರಣವಾಗಿವೆ ಎಂದರು.

ಈ ಸಂದರ್ಬದಲ್ಲಿ ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಪಾಟೀಲ, ಭೀಮರಾವ ಪಾಟೀಲ, ವೀರಣ್ಣ ಪಾಟೀಲ, ಅಭಿಷೇಕ ಪಾಟೀಲ, ಅಫ್ಸರ್ ಮಿಯಾ. ಓಂಕಾರ ತುಂಬಾ, ಮಲ್ಲಿಕಾರ್ಜುನ ಮಾಶಟ್ಟಿ. ಸೇರಿದಂತೆ ಇತರರಿದ್ದರು.

## ವಸತಿ ನಿಲಯಕ್ಕೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಭೇಟಿ:ಸಮಸ್ಯೆ ಬಗೆಹರಿಸಲು ಸೂಚನೆ



ಮಲ್ಲಮ್ಮ ನುಡಿ ವರದಿ ಫಲಶ್ರುತಿ

ಹುಮನಾಬಾದ:ಜ.13: ತಾಲೂಕಿನ ಹಳ್ಳಿಖೇಡ(ಕೆ) ಗ್ರಾಮದ ಹೊರವಲದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮುರಾರ್ಜಿ ದೇಸಾಯಿ (ಬಾಲಕಿಯರ) ವಸತಿ ನಿಲಯದಲ್ಲಿ ವಿದ್ಯಾರ್ಥಿನಿಯರಿಗೆ ಬಿಸಿ ನೀರು ಸಿಗದೇ ತತ್ತರಿಸುತ್ತಿದ್ದಾರೆ ಎಂದು ರವಿವಾರ ಮಲ್ಲಮ್ಮ ನುಡಿ ಪ್ರಾದೇಶಿಕ ದಿನ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಸೋಮವಾರ ಸಮಾಜ ಕಲ್ಯಾಣ ಇಲಾಖೆಯ ತಾಲೂಕ ಸಹಾಯಕ ನಿರ್ದೇಶಕ ಲಿಂಗರಾಜ ಅರಸ್ ಭೇಟಿ ನೀಡಿ, ವಸತಿ ನಿಲಯದ ವಿದ್ಯಾರ್ಥಿಗಳ ವಸತಿ ಕೋಣೆಗಳು, ಅಡುಗೆ ಕೋಣೆಗಳು, ಶೌಚಾಲಯ, ಸ್ನಾನ ಮಾಡುವ ಕೋಣೆಯ ವ್ಯವಸ್ಥೆಗಳನ್ನು ಪರಿಶೀಲಿಸಿದರು.

> ವಿದ್ಯಾರ್ಥಿಗಳೊಂದಿಗೆ ಚರ್ಚೆ ಹಾಗೂ ಸಂವಾದ ನಡೆಸಿ, ತಮ್ಮ ವಿದ್ಯಾರ್ಥಿ ಜೀವನದಲ್ಲಿ ಸಮಯ ವ್ಯರ್ಥ ಮಾಡದೇ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು. ನಿರ್ದಿಷ್ಟ ಗುರಿ ಹಾಗೂ ಸತತ ಪರಿಶ್ರಮದಿಂದ ಜೀವನದಲ್ಲಿ ಯಶಸ್ಸು ಸಾಧಿಸಬೇಕು ಎಂದು ಕಿವಿಮಾತು ಹೇಳಿದರು.
>
> **ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಲಿಂಗರಾಜ ಅರಸ್**

ನೀರಿನ ನಳಿಗಳಿಗೆ (ತೆ-ಊಟಿ)ಗಳು ಇಲ್ಲದೆ ನೀರುನ್ನು ಪೋಲು ಆಗುತ್ತಿರುವುದು ಮತ್ತು ಶೌಚಾಲಯ, ಸ್ನಾನ ಮಾಡುವ ಕೋಣೆಗಳು ಸ್ವಚ್ಛತೆ ಇಲ್ಲದಿರುವುದನ್ನು ಕಂಡು ವಸತಿ ನಿಲಯದ ಸಿಬ್ಬಂದಿಗಳಿಗೆ ತರಾಟೆಗೆ ತೆಗೆದು-ಕೊಂಡರು. ವಸತಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ಕುಡಿಯುವ ನೀರು, ಮೂಲಸೌಕರ್ಯಗಳ ಬಗ್ಗೆ ಪರಿಶೀಲನೆ ನಡೆಸಿ, ವಿದ್ಯಾರ್ಥಿಗಳಿಗೆ ವಸತಿ ನಿಲಯದಲ್ಲಿ ಯಾವುದೇ ರೀತಿಯ ತೊಂದರೆಗಳಾಗದಂತೆ ಕ್ರಮಕೈಗೊಳ್ಳಬೇಕು, ಈಗಿರುವ ಸಮಸ್ಯೆಗಳನ್ನು 2 ದಿನಗಳಲ್ಲಿ ಬಗ್ಗೆ ಹರಿಸಿ ಇಲಾಖೆಗೆ ಮಾಹಿತಿ ನೀಡಲು ಶಾಲೆಯ ಪ್ರಾಂಶುಪಾಲರಿಗೆ ತಿಳಿಸಿದರು.

## ಅರಣ್ಯ ಪ್ರದೇಶದಲ್ಲಿ ರಾಸಾಯನಿಕ: ಇಬ್ಬರು ನ್ಯಾಯಾಂಗ ಬಂಧನಕ್ಕೆ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಜ. 13 :ನಗರ ಹೊರವಲಯದ ಶಹಾಪುರ ಮೀಸಲು ಅರಣ್ಯ ಪ್ರದೇಶದಲ್ಲಿ ಕೈಗಾರಿಕೆಗಳ ಅಪಾಯಕಾರಿ ರಾಸಾಯನಿಕ ಹರಿಬಿಡುತ್ತಿದ್ದ ಆರೋಪದ ಮೇರೆಗೆ ಇಬ್ಬರನ್ನು ಅರಣ್ಯ ಇಲಾಖೆಯವರು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ತೆಲಂಗಾಣದ ಭಾಸ್ಕರ್ ರೆಡ್ಡಿ, ಬಿ.ಎನ್ನಾರೆಡ್ಡಿ ಬಂಧಿತರು. 'ಶನಿವಾರ ತಡರಾತ್ರಿ ಶಹಾಪುರ ಮೀಸಲು ಅರಣ್ಯ ಪ್ರದೇಶದಲ್ಲಿ ಟ್ಯಾಂಕರ್‌ನಲ್ಲಿ ತಂದಿದ್ದ ರಾಸಾಯನಿಕ ಬಿಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ, ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ. ಟ್ಯಾಂಕರ್ ಕೂಡ ಜಪ್ತಿ ಮಾಡಲಾಗಿದೆ' ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

## ಸೌದಾಗರ ಅವರನ್ನು ಎಂಎಲ್‌ಸಿ ಮಾಡಲು ಆಗ್ರಹ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜ.13:ಉತ್ತರ ಕರ್ನಾಟಕದ ಅಲ್ಪಸಂಖ್ಯಾತರ ಪ್ರಭಾವಿ ನಾಯಕ ಮತ್ತು ಕೆಪಿಸಿಸಿ ಉಪಾಧ್ಯಕ್ಷ ಎಂ.ಬಿ.ಸೌದಾಗರ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡುವಂತೆ ಬೀಳಗಿಯ ಬಾಗವಾನ ಸಮಾಜದ ಅಧ್ಯಕ್ಷ ಅಲ್ಲಾಭಕ್ಷ ಬೀಳಗಿ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಎಂ.ಬಿ.ಸೌದಾಗರ ಬಾಗಲಕೋಟೆ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ 9 ವರ್ಷ ಕೆಲಸ ಮಾಡಿದ್ದಾರೆ, ಇವರ ಅವಧಿಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆ ಬಲಿಷ್ಠವಾಗಿತ್ತು. 2013ರ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ



ಏಳು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಆರು ಸ್ಥಾನಗಳನ್ನು ಗೆಲುವು ಸಾಧಿಸಿತ್ತಲ್ಲದೇ ಇವರ ಅಧ್ಯಕ್ಷತೆಯಲ್ಲಿ ನಡೆದ ಎರಡು ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿತ್ತು ಎಂದಿದ್ದಾರೆ. ಉತ್ತರ ಕರ್ನಾಟಕದ ಭಾಗದಲ್ಲಿ ಯಾವುದೇ ಅಲ್ಪಸಂಖ್ಯಾತರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡಿಲ್ಲ.



ಶ್ರೀಶೈಲಂ:ಶ್ರೀ ಅಕ್ಕ ಮಹಾದೇವಿ ಚೈತನ್ಯ ಪೀಠ ದಲ್ಲಿ ಬೆಂಗಳೂರು ವಿದ್ವತ್ ಮಂಡಳಿಯಿಂದ ಶ್ರೀ ಅಕ್ಕ ಮಹಾದೇವಿ ಜೀವನ ಸಾಧನೆ ಕೊಡುಗೆ ಕುರಿತು ನಡೆದ ಸಂವಾದ ಕಾರ್ಯಕ್ರಮದಲ್ಲಿ. ಪೂಜ್ಯ ಅಮ್ಮ ಆಡಿ ಗುರೂಜಿ ನಾಗೇಶ್ ಮುಂತಾದವರು ಇದ್ದರು

Printed, Published and Owned by : Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad - 585330.
Editor: Ramesh Reddy, Office Ph. No: +91 9449732000.